
# ಚಿಂತನ ಬಯಲು

ತ್ರೈಮಾಸಿಕ ISSN 2278-2192



ಸಂಪುಟ : 11, ಸಂಚಿಕೆ : 4    ಏಪ್ರಿಲ್ – ಜೂನ್ 2023
Volume : 11, Issue : 4    April - June 2023

# ಚಿಂತನ ಬಯಲು

ಸಂಪಾದಕಿ
**ರೇಶ್ಮಾ ಜಿ. ಭಟ್**

ಸಂಪಾದಕೀಯ ಸಲಹೆ
**ಡಾ. ಅಜಕ್ಕಳ ಗಿರೀಶ ಭಟ್**
**ಡಾ. ಶ್ರೀಧರ್ ಎಚ್.ಜಿ.**
**ಡಾ. ವರದರಾಜ ಚಂದ್ರಗಿರಿ**
**ಡಾ. ಜಿ.ಬಿ. ಹರೀಶ್**
**ಶ್ರೀ ಎಂ.ಎ. ಸುಬ್ರಹ್ಮಣ್ಯ**

**ಚಿಂತನ ಬಯಲು**
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

**CHINTHANA BAYALU**
Kannada Quarterly; A Peer Reviewed Journal
Volume 11, Issue 4, April - June 2023

Edited, Published, Printed & Owned by
**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Size : Dy 1/8

Paper Used : 70 GSM

Pages : 64

Price : Rs. 50

ಮುಖಪುಟ ಛಾಯಚಿತ್ರಗ್ರಹಣ : **Atheetha Brahma**

Cover Design : **Kallur Nagesh**

Designed & Printed at :
**Aakrithi Prints**
Maximus Complex
Light House Hill Road
Mangaluru - 575 001
Tel. : 0824 2972002 / 7019225774

---

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

# ಪುಟನೋಟ


1. ಶಾಂತರಸರ ಕಥೆಗಳಲ್ಲಿ ಪ್ರತಿರೋಧದ ನೆಲೆಗಳು
❖ ಡಾ. ವಿಜಯಕುಮಾರ ಎಚ್. ವಿಶ್ವಮಾನವ / 5

2. ಭಾವವೆಂಬ ಮನೆಯೊಳಗಣ ಗೀತವೆಂಬ ಅತಿಥಿ
❖ ರೇಶ್ಮಾ ಭಟ್ / 13

3. ಶಿಶಿಲರ 'ಬೆಳಕಿನೆಡೆಗೆ' ಕಥಾಸಂಕಲನದ ಒಂದು ನೋಟ
❖ ಜಿ. ಶೀಲಾವತಿ / 19

4. ಎಫ್.ಎ. ಹಾಯೆಕ್ ದೃಷ್ಟಿಯಲ್ಲಿ
ಬುದ್ಧಿಜೀವಿಗಳು ಮತ್ತು ಸಮಾಜವಾದ
❖ ಅಜಕ್ಕಳ ಗಿರೀಶ ಭಟ್ / 26

5. ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ
ಮತ್ತು ಆಧ್ಯಾತ್ಮಿಕತೆ : ಒಂದು ವಿಶ್ಲೇಷಣೆ
❖ ಡಾ. ರೋಹಿಣಾಕ್ಷ ಶಿರ್ಲಾಲು / 38

6. ವೈದೇಹಿಯವರು ಕಂಡಂತೆ 'ಹನ್ನೆರಡಾಣೆಯ ಜಗತ್ತು'
ಮತ್ತು ಅದರೊಳಗಿನ 'ಕಾಲಾಂತರದ ಮಾತು'
❖ ಚಂದನಾ ಕೆ.ಎಸ್. / 51

7. ಅಭಿವೃದ್ಧಿ ಹಾಗೂ ಪರಿಸರ : ಕನ್ನಡ ಕತೆಗಳ ನೋಟ
❖ ಡಾ. ಅಮರೇಂದ್ರ ಶೆಟ್ಟಿ ಆರ್. / 55

# ಸಂಪಾದಕೀಯ

ಚಿಂತನ ಬಯಲು ಆರಂಭವಾಗಿ ಹನ್ನೊಂದು ವರ್ಷಗಳು ಕಳೆದವು. ಇದೀಗ ನಲವತ್ತಾರನೆಯ ಸಂಚಿಕೆಯಾಗಿದೆ. ಕನ್ನಡದಲ್ಲಿ ಸಾಹಿತ್ಯ ಮತ್ತು ಸಂಸ್ಕೃತಿ ಚಿಂತನೆ ಮತ್ತು ವಿಮರ್ಶೆಗೆ ಮೀಸಲಾದ ಹಾಗೂ ಕಥೆ, ಕವಿತೆ ಇತ್ಯಾದಿ ಪ್ರಕಾರಗಳಿಲ್ಲದ ಪತ್ರಿಕೆಯಾಗಿ ಇಷ್ಟು ದೀರ್ಘ ಕಾಲದಿಂದ ನಡೆದು ಬರುತ್ತಿರುವುದು ಪತ್ರಿಕೆಯ ಬಳಗಕ್ಕೆ ಸಮಾಧಾನವನ್ನು ತಂದಿದೆ. ಈ ಸಂಚಿಕೆಯೂ ವೈವಿಧ್ಯಮಯವಾಗಿದೆ. ಕೃತಿಗಳ ವಿಮರ್ಶೆ ಇರುವಂತೆಯೇ ಕವಿತೆಗಳಲ್ಲಿ ಭಾವವು ಉದ್ದೀಪನಗೊಳ್ಳುವ ಬಗೆಯನ್ನು ಚರ್ಚಿಸುವ ಲೇಖನವೊಂದಿದೆ. ಅಭಿವೃದ್ಧಿ ಮತ್ತು ಪರಿಸರ ಕಾಳಜಿಯ ಸಮತೋಲನದ ಬಗ್ಗೆ ಎಲ್ಲರೂ ಚಿಂತಿಸುತ್ತಿರುವ ಈ ಕಾಲದಲ್ಲಿ ಕಥಾಪ್ರಪಂಚ ಅದಕ್ಕೆ ಸ್ಪಂದಿಸಿದ ಬಗೆಯನ್ನು ವಿಮರ್ಶಿಸುವ ಲೇಖನವಿದೆ. ಸಮಾಜದಲ್ಲಿ ಅಭಿಪ್ರಾಯಗಳನ್ನು ರೂಪಿಸುವ ಮತ್ತು ಸರಕಾರದ ನೀತಿನಿರೂಪಣೆಯನ್ನು ಪ್ರಭಾವಿಸುವ ಬುದ್ಧಿಜೀವಿ ವರ್ಗದ ನಿಲುವುಗಳನ್ನು ಎಫ್.ಎ. ಹಾಯೆಕ್ ಸುಮಾರು ಆರು ದಶಕಗಳ ಹಿಂದೆಯೇ ಚರ್ಚಿಸಿದ್ದರು. ಅದನ್ನು ವಿಶ್ಲೇಷಿಸುವ ಲೇಖನ ಕುತೂಹಲಕಾರಿಯಾಗಿದೆ. ಪತ್ರಿಕೆಯು ಓದುಗರ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತದೆ.

– ಸಂ.

# ಶಾಂತರಸರ ಕಥೆಗಳಲ್ಲಿ ಪ್ರತಿರೋಧದ ನೆಲೆಗಳು

**ಡಾ. ವಿಜಯಕುಮಾರ ಎಚ್. ವಿಶ್ವಮಾನವ**
ಸಹಾಯಕ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ವಿಭಾಗ
ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾಲಯ ಕಲಬುರಗಿ–585376

ಶಾಂತರಸರು ಹಿರಿಯ ತಲೆಮಾರಿನ ಹೈದ್ರಾಬಾದ್ ಕರ್ನಾಟಕದ ಮಹತ್ವದ ಕಥೆಗಾರರು. ಅವರ ಬಹುಪಾಲು ಕಥೆಗಳು ಗ್ರಾಮೀಣ ಬದುಕಿನ ವಾಸ್ತವ ಚಿತ್ರಗಳು, ರಜಾಕಾರರ ಅವಮಾನದ ಸಂದರ್ಭಗಳು, ಅಮಾನವೀಯ ಆಕ್ರಮಣಗಳು, ಗಂಡು ಹೆಣ್ಣಿನ ಮನೋದೇಹಿ ವ್ಯಾಪಾರಗಳು, ವಂಚನೆ, ಮೋಸ, ಸುಳ್ಳು, ವ್ಯಕ್ತಿಗಳ ಸಣ್ಣತನ, ಕೌರ್ಯ, ಬಡತನದ ದಾರುಣತೆ, ಹಟದ ಅಟ್ಟಹಾಸ, ಧರ್ಮ ಲಂಪಟ, ದುರ್ನಡತೆ ಹಾಗೂ ರಾಜಕೀಯಗಳ ಉರಿಬೆಂಕಿಯಲ್ಲಿ ಗೋರಿಕಟ್ಟಿದ ಅಮಾಯಕ ಜೀವಿಗಳ ಕನಸುಗಳು ಕಮರಿ ಹೋಗಿರುವ ಪ್ರಸಂಗಗಳು, ಹೀಗೆ ಅವರ ಕತೆಗಳಲ್ಲಿನ ವಸ್ತು ವಿಭಿನ್ನ ವೈವಿಧ್ಯತೆಯಿಂದ ಕೂಡಿದೆ. ಶಾಂತರಸರೇ ತಮ್ಮ ಕಥೆಗಳ ಬಗ್ಗೆ ಹೀಗೆ ಹೇಳಿಕೊಂಡಿರುವರು "ನನ್ನ ಕಥೆಗಳು ಕಾಲ್ಪನಿಕವೆಂದು, ಎಲ್ಲ ಪಾತ್ರಗಳು ಕೇವಲ ಕಲ್ಪನೆಯಲ್ಲಿ ಮೈದಳೆದುವೆಂದು ನಾನು ಸುಳ್ಳು ಹೇಳಲಾರೆ. ಸತ್ಯ ಘಟನೆಗಳ ಚಿಕ್ಕ ಚಿಕ್ಕ ಎಳೆಗಳು – ಅವು ಎಲ್ಲೆಲ್ಲಿಂದಲೋ ಸಂಗ್ರಹವಾಗಿರುತ್ತವೆ – ಕೂಡಿ ಒಂದು ಕಥೆ ಕಟ್ಟಿಕೊಳ್ಳುತ್ತದೆ. ನನ್ನ ಭಾಷೆ ನನ್ನ ಹಳ್ಳಿ ಪಟ್ಟಣಗಳ ಭಾಷೆ, ಅದನ್ನು ಬಳಸುವಾಗ ನನಗೆ ಅತ್ಯಂತ ಖುಷಿಯಾಗುತ್ತದೆ. ನನ್ನ ರಕ್ತ ಮಜ್ಜೆಮಾಂಸ ಜೀವದಿಂದ ಕೂಡಿದ್ದು ಈ ಭಾಷೆ."

ಶಾಂತರಸರು ಈ ಭಾಗದ ಮುಂದಿನ ಅನೇಕ ಕಥೆಗಾರರಿಗೆ ಮಾರ್ಗದರ್ಶಕರಾಗಿದ್ದಾರೆ. ಇವರು ಕಥಾಸಾಹಿತ್ಯದಲ್ಲಿಯೇ ಪ್ರಸಿದ್ಧರಾದವರು. ಇವರ ಕಥೆಗಳಲ್ಲಿ ಹೆಚ್ಚಾಗಿ ದೌರ್ಜನ್ಯ, ಬಡತನ, ಧರ್ಮ, ರಾಜಕೀಯ, ಮಹಿಳೆಯರ ಮೇಲಾಗುವ ಶೋಷಣೆ ಇತ್ಯಾದಿ ಅಂಶಗಳನ್ನು ಅನುಲಕ್ಷಿಸಿ ಕಥೆಯನ್ನು ಹೆಣೆದಿದ್ದಾರೆ. ಇವರ ಬೇಸ್ತು, ಬಡೆಸಾಬು ಪುರಾಣ, ನಾಯಿ ಮತ್ತು ಪಿಂಚಣಿ, ಕಿಡಿ, ರೋಗಿ, ಮಾಯ ಅಂದ್ರೆ ಮಾಯೆ, ಸಂಬಂಧಗಳು, ಸಾವು ಸತ್ತಾಗ, ಸುಳಿ, ಸೆಳೆತ, ಕಥೆಗಳ ಕಲಾತ್ಮಕ ಅಭಿವ್ಯಕ್ತಿಯಲ್ಲಿ ನಾಟ್ಯಮಯ ಗುಣ ಅವಿನಾಭಾವವಾಗಿ ಸೇರಿಹೋಗಿದೆ. ಉರಿದ ಬದುಕು, ತೋರಣ ಹರಿಯಲಿಲ್ಲ, ಸ್ವಾತಂತ್ರ್ಯವೀರ ಇತ್ಯಾದಿ ಕಥೆಗಳು ರಜಾಕಾರರ ಹಾಗೂ ಧರ್ಮದ ಕುರಿತು ಮಾರ್ಮಿಕವಾಗಿ ಹೆಣೆದಿದ್ದಾರೆ.

ಶಾಂತರಸರ ಕಥೆಗಳಲ್ಲಿ ಸಮಾಜಿಕ, ಆರ್ಥಿಕ, ಧಾರ್ಮಿಕ, ಶೈಕ್ಷಣಿಕ, ರಾಜಕೀಯ ಪ್ರಭುತ್ವ ಹಾಗೂ ಪ್ರತಿರೋಧದ ನೆಲೆಗಳಾಗಿವೆ. ಕಥೆಗಳಲ್ಲಿಯೇ

ನೈತಿಕತೆಯನ್ನು, ಬಡತನದಲ್ಲಿಯು ಆದರ್ಶತೆಯನ್ನು, ಸಾಮಾಜಿಕ ಮೌಲ್ಯಗಳನ್ನು, ಸಂಪ್ರದಾಯಿಕ ಆಚರಣೆಗಳು, ಮುಂತಾದ ವಿಚಾರಗಳನ್ನು ಸೂಕ್ಷ್ಮವಾಗಿ ವಿವರಿಸುತ್ತಾ ಹೋಗುತ್ತವೆ. ಸಮಾಜದಲ್ಲಿ ವಾಸ್ತವತೆಯನ್ನು ಒಟ್ಟಾಗಿ ಕಥೆಗಳು ಗುರುತಿಸುತ್ತವೆ ಎಂದು ಚರ್ಚೆಗೆ ಎಡೆಮಾಡಿಕೊಡುತ್ತವೆ. 'ಉರಿದ ಬದುಕು' ಕಥೆಯು ಪ್ರಭುತ್ವದ ಧೋರಣೆಯನ್ನು ರಜಾಕಾರರ ಮುಖೇನ ವ್ಯಕ್ತಪಡಿಸಿದ್ದಾರೆ. ರಜಾಕಾರರ ಆಡಳಿತದ ಅವಧಿಯಿರುವುದರಿಂದ ಕಾಶೀಮಾಲಿ ಪಾತ್ರವು ಅವರ ಪ್ರಭಾವವನ್ನು ಬಳಸಿಕೊಂಡು ದೌರ್ಜನ್ಯವನ್ನು ಮಾಡುತ್ತಿತ್ತು. ಕಥೆಗಾರ ರಜಾಕಾರರ ಧೋರಣೆಯನ್ನು ಕಾಶೀಮಾಲಿ ಪಾತ್ರದ ಮುಖೇನ ಬಿತ್ತರಿಸಿದ್ದಾರೆ. ಅಮಾಯಕ, ಮುಗ್ಧ ಜನರ ಮೇಲೆ, ಹಿಂದೂಗಳ ಮೇಲೆ, ದರ್ಪದಿಂದ ನಡೆದುಕೊಳ್ಳುವ ಸನ್ನಿವೇಶವನ್ನು ಪ್ರಸ್ತುತಪಡಿಸಿದ್ದಾರೆ. ಮುಗ್ಧ ಜನರು ಕಾಶೀಮಾಲಿಯು ವರ್ತಿಸುವ ದಬ್ಬಾಳಿಕೆಗೆ ನಲುಗಿ ಮರೆಮಾಚಿಕೊಳ್ಳುವ ಪ್ರಸಂಗವು ಮನಮುಟ್ಟುವಂತಿದೆ. ಮೂನ್ನೂರು ವರ್ಷಗಳ ಹಿಂದೆ ಸ್ವಾತಂತ್ರ್ಯಕ್ಕಾಗಿ ನಮ್ಮ ವೀರರು ಬ್ರಿಟಿಷರಿಂದ ತಪ್ಪಿಸಿಕೊಂಡಂತೆ ಇಲ್ಲಿಯ ರಜಾಕಾರರು, ಕಾಶೀಮಾಲಿ ಪಾತ್ರಗಳು ಇಂಗ್ಲೀಷರಂತೆ ವರ್ತಿಸುವುದರಿಂದ ತಿಪ್ಪಣನು ಸಹ ಕಾಶೀಮಾಲಿಯ ಕಣ್ಣಿನಿಂದ ತಪ್ಪಿಸಿಕೊಂಡು ಓಡುತ್ತಿದ್ದನು. ಕೆಲ ಹಿಂದೂ ಜನರು ಜೀವ ಉಳಿಸಿಕೊಳ್ಳುವ ಸಲುವಾಗಿ ರಜಾಕಾರರ ಗುಲಾಮರಾಗಿದ್ದರು. ಇವರ ಹಿಂಸೆ, ದೌರ್ಜನ್ಯ, ದರ್ಪ, ದಬ್ಬಾಳಿಕೆಯ ಮನಃಸ್ಥಿತಿಯೇ ಒಟ್ಟು ಕಥೆಯ ಆಶಯವಾಗಿದೆ. ಕಾಶೀಮಲಿ ತಿಪ್ಪಣ್ಣನ ತಂದೆಯನ್ನು ಹೊಡೆದು ಸಾಯಿಸಿ ಹೆಣ ಒರ್ಸಿ ನಮ್ಮನಿಗೆ ಕಳ್ಸಿ ಗದ್ದಲ ಮಾಡ್ದಂಗ ಹೊಳಬೇಕು, ಇಲ್ದಿದ್ರೆ ಸಾಲಕ ಹೆಣ ಬಿದ್ದಾವು ಅಂತ ಏಳಿಕಳಿಸಿದ. ಉಳ್ಳವರ ದೌರ್ಜನ್ಯ ಹಿಂಸಾತ್ಮಕ, ಹಿಂಸಾಕೃತ್ಯ ಮನೋಭಾವದ ಸಂಕೇತವಾಗಿ ಕಾಶೀಮಾಲಿ ಪಾತ್ರವು ಪ್ರತಿಬಿಂಬಿತವಾಗಿದೆ. ನನಗ ನೀತಿ ಕಲಸಕ ಬರ್‍ತ್ಯಾ, ನೀಚ ಹೆಣ್ಣೆ, ಬಾಗಿಲ ತೆರದಿದ್ರ ಎಲ್ಲರನ್ನ ಕೊಂದ್ ಬುಡ್ತೀನಿ ಎಂದು ಕಾಶೀಮಲಿ ಬಂದೂಕ ಎತ್ತಿದ. ನಬೆಮ್ಮ ನಿನ್ನ ಕರಮತ್ತು ಏನೆಂಬುದು ಗೊತ್ತು. ನಾಳೇ ನಿನಗ ತಿಳಿತದೆಂದು ಗದರಿಸಿ ಹೊರಹೋದನು. ಮಾನವೀಯತೆಯನ್ನು ಮರೆತು ಅನಾಗರೀಕನಂತೆ ಹೆಣ್ಣಿನ ಜೊತೆ ಅಸಭ್ಯವಾಗಿ ನಡೆದುಕೊಳ್ಳುವ ವೃತ್ತಾಂತವನ್ನು ಕಾಣುತ್ತೇವೆ. ಮಾನವೀಯ ಮೌಲ್ಯಗಳು ಗಾಳಿಗೋಪುರವಾಗಿರುವುದನ್ನು ಕಾಶೀಮಾಲಿ ಪಾತ್ರದ ಮೂಲಕ ನಿರೂಪಿಸಿದ್ದಾರೆ. ಲೇಖಕರು ಕಾಶೀಮಾಲಿಯ ಮುಖೇನ ಅಧರ್ಮ, ರಜಾಕಾರರ ಕೌರ್ಯದ ಮನೋಭಾವ, ಹಿಂಸೆ, ಅಸಭ್ಯವಾದ ಮಾತುಗಳನ್ನಾಡಿಸುತ್ತಿದ್ದಾರೆ. ಕಾಶೀಮಲಿಯ ಪ್ರಭುತ್ವನ್ನು ವಿರೋಧಿಸುವ ಮನೋಭೂಮಿಕೆಯ ಹೊಂದಿದ ತಿಪ್ಪಣ್ಣ, ನಬೆಮ್ಮ, ಶಂಕ್ರಣ್ಣ, ಅನ್ನವ್ವ ಸ್ವತಃ ಅವನತಿಯ ಅಂಚಿನಲ್ಲಿದ್ದರು. ಲೋಡಿಮಗ ಅಪ್ಪನ ಒದ್ದು ಕೆಡವಿ ಕೊಲ್ಲಿದ... ಎಂದು ತಿಪ್ಪಣ್ಣ ಕಟಕಟ ಹಲ್ಲು ಕಡಿದು ಕೋಪದ್ರಿಕ್ತನಾದನು. ತಿಪ್ಪಣ್ಣನನ್ನು ಸಾಯಿಸುವ ಸಲುವಾಗಿ ನಬೆಮ್ಮನ ಮನೆಗೆ ಬೆಂಕಿ ಹಚ್ಚಿ ಸುಡುವ ಕಾಶೀಮಲಿಯ ಕೌರ್ಯತ್ವವನ್ನು ಅನಾವರಣಗೊಳಿಸಿದೆ. ಬ್ರಿಟಿಷರು, ಹೈದ್ರಾಬಾದ ನಿಜಾಮರು, ಮುಸ್ಲಿಂಮರು, ರಜಾಕಾರರು ಎಲ್ಲರು ಜನರ ಮೇಲೆ ಪ್ರಭುತ್ವ ಸಾಧಿಸಿರುವುದನ್ನು ಕಾಶೀಮಲಿಯ ಪಾತ್ರವು ಸ್ಪಷ್ಟಪಡಿಸುತ್ತವೆ.

'ಗೋದಾನ' ಧಾರ್ಮಿಕ ಕೇಂದ್ರಿತವಾದ ಈ ಕಥೆಯು ಏನು ಅರಿಯದ ಅಮಾಯಕನ ಮೇಲೆ ಧರ್ಮ, ದೈವ ಎಂಬ ಮೂಢನಂಬಿಕೆಗಳಿಂದ ಬಂಧಿಸುವ

ಶಾಸ್ತ್ರೀ ತನ್ನಾಸೆಯನ್ನು ಪೊರೈಸಿಕೊಳ್ಳುವ ಸಂದರ್ಭವಿದೆ. ಗಂಗ್ಯಾ ಆಶಿಕ್ಷಿತನಾಗಿದ್ದರಿಂದ ಶಾಸ್ತ್ರೀಯ ಮಾತುಗಳಿಗೆ ಕಿವಿಗೊಟ್ಟು ಅವನ ಮಕ್ಕಳಿಗೆ ಆಹಾರವಾಗಿದ್ದ ಹಾಲು ಕೊಡುವ ಹಸುವನ್ನು ಶಾಸ್ತ್ರೀಗೆ ದಾನವಾಗಿ ಕೊಟ್ಟನು. ಸಮಾಜದಲ್ಲಿ ವ್ಯಕ್ತಿ ಸ್ವಲ್ಪ ಅಜಾಗರೂಕ, ಅಜ್ಞಾನಿಯಾಗಿದ್ದರೆ ಹೇಗೆ ಮೋಸಮಾಡುವರೆಂಬುದನ್ನು ಇಲ್ಲಿ ವಿವರಿಸುತ್ತಾರೆ. ನೋಡಪಾ ಗಂಗಣ್ಣಾ ನಿನಗ ವ್ಯಾಳ್ಯ ಬೇಸಿಲ್ಲ; ಬಲಾಚಾರ ಇಲ್ಲ, ಕಷ್ಟದ ಕಾಲ, ಹನಿಮ್ಯಾ ಸತ್ ಮೂಹರ್ತ ಚೆನ್ನಾಗಿಲ್ಲ ಏನಾದ್ರೂ ಶಾಂತಿ ಮಾಡಸ್ಬೇಕು? ಈದ ಆಕಳನ್ನ ಕರಸಹಿತ ದಾನ ಕೊಡದು ಎಂದು ಮಾತಿನಲ್ಲಿ ಮರುಳು ಮಾಡಿ ಶಾಸ್ತ್ರೀ ವಂಚನೆಯಿಂದ ಆಕಳನ್ನು ಪಡೆಯುವ ವೃತ್ತಾಂತವಿದೆ. ಧಾರ್ಮಿಕ ಆಚರಣೆಯ ಸೂಗಿನಲ್ಲಿ ಮುಗ್ಧನನ್ನು ವಂಚಿಸುವರು. ಶಾಸ್ತ್ರೀ ಪಾತ್ರವು ಸಂಪ್ರದಾಯ, ದೈವ, ಅನಿಷ್ಠ, ಕಂಟಕವೆಂದು ಹೇಳಿ ಗಂಗ್ಯಾನ ಮನೋಭೂಮಿಕೆಯನ್ನು ಚಂಚಲಗೊಳಿಸುವನು. ದೈನ್ಯದಿಂದ ಬೇರೆ ಪರಿಹಾರಕ್ಕಾಗಿ ವಿನಂತಿಸಿಕೊಂಡನು. ಈದ ಆಕ್ಳೇನೂ ಮನ್ಯಾಗಾದ ದೆವ್ರೇ, ಆದ್ರ ಈ ಬ್ಯಾಸಿಗಿನ್ಯಾಗ ಮಕ್ಕಳೀಟು ಐನ ಉಣತಿದ್ವು ಅದನ್ನ ಕೊಟ್ರೆ ಅವ್ರ ಬಾಯಾಗ ಮಣ್ಣಾಕಿದಂಗ ಎಂದು ನಯವಾಗಿ ಶಾಸ್ತ್ರೀಯ ಮಾತಿಗೆ ಗಂಗ್ಯಾ ತಿರಸ್ಕರಿಸಿದನು. ಧಣಿಯರ ಸತ್ಯನಾರಾಯಣ ಕಥೆಯಲ್ಲಿ ಯಾವ ಬಗೆಯಿಂದ ಮುಗ್ಧ ಬಡಜನರಿಗೆ ಮೋಸ, ವಂಚನೆ ಆಗುವುದು ಅದೇ ತೆರನಾಗಿ ಗಂಗ್ಯಾನಿಗೆ ಶಾಸ್ತ್ರೀಯ ಮೋಸದ ಬಲೆಗೆ, ಕುಟಿಲ, ಕುಹಕದ ಜಾಲದಲ್ಲಿ ಬಿದ್ದು ಮಕ್ಕಳಿಗೆ ಐನ ಉಳಿಸಿಕೊಳ್ಳಲು ಸಾಧ್ಯವಾಗದ ಪರಿಸ್ಥಿತಿ ಒದಗಿತು. ಈ ಸಂದರ್ಭ ನೆನಪಿಸಿಕೊಂಡು ಗಂಗ್ಯಾ ಮನಸ್ಸಿನಲ್ಲಿ ಮಮ್ಮಲ ಮರಗುವನು. ದಲಿತರ ಮೇಲೆ ಉಳ್ಳವರು ನಾಜೂಕಾಗಿ ಶೋಷಣೆ ವಿಶ್ಲೇಷಿಸಿದ್ದಾರೆ. ದಲಿತ ಗಂಗ್ಯಾನು ಅಸಹಾಯಕನಾಗಿ ತನಗೊದಗಿದ ಪರಿಸ್ಥಿತಿಯನ್ನು ಹೇಗೆ ನಿಭಾಯಿಸುವನೆಂಬುದನ್ನು ಇಲ್ಲಿ ಸೂಕ್ಷ್ಮವಾಗಿ ನಿರೂಪಿತಗೊಂಡಿದೆ.

'ತೋರಣ ಹರಿಯಲಿಲ್ಲ' ಕಥೆಯಲ್ಲಿ ಹಣಮಪ್ಪ ಗೌಡನ ಪ್ರಭುತ್ವ ಕಾರಣಕ್ಕಾಗಿ ಎರಡು ಪ್ರೇಮಿಗಳ ಜೀವನದ ತೋರಣವು ಹರಿಯದಂತಾಯಿತು. ಮಲ್ಲಿಗೆ ಶಂಕರನ್ನ ಬಿಟ್ಟು ಹೋಗುವ ಮನಸಿಲ್ಲದಿದ್ದರೂ ಅನಿವಾರ್ಯವಾಗಿ ಅಂತಹ ಸ್ಥಿತಿ ಒದಗಿತು. ರಾಮಿಯು ಹೆಸರಿಗೆ ಮಾತ್ರ ಗಂಡ ಇದನೆಂದು ಹತ್ತಾರು ಜನರ ಜೊತೆ ಸಂಸಾರ ಮಾಡುತ್ತಿದ್ದಳು. ಶಂಕರ ಮಲ್ಲಿಗೆಯ ಬದುಕಿನ ಏರುಪೇರಾದರು ಪುನಃ ಅವಳನ್ನು ಒಪ್ಪಿಕೊಂಡರು. ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದೊಡೆಂತು, ಸಮಾಜಕ್ಕೆ ಕಿವಿಗೊಡಬಾರದೆಂದು ಶಂಕ್ರಣ್ಣ ಪಾತ್ರವು ನಿರೂಪಿಸುತ್ತದೆ. ಆಡಿಸುವವನ ಕೈಗೊಂಬೆಯಾಗಿ ಹಾಗೆ ಕುಣಿಯುತ್ತಿರಬೇಕು. ವಿಧಿಯ ಲಿಖಿತದಂತೆ ನಮ್ಮ ಬುದುಕು ಎಂಬುದನ್ನು ಅನಾವರಣಸಿದೆ. ರಾಮಿ ಪಾತ್ರವು ಮಲ್ಲಿಗೆಯ ಜೀವನದಲ್ಲಿ ಕೂಲಹಲವುಂಟು ಮಾಡಿತು. ಜೀವನವೇ ಕಮರಿ ಹೋದಂತಾಯಿತು. ಮಲ್ಲಿಗೆ ಮೌನವಾಗಿದ್ದರಿಂದಲೇ ಅವಸಾನದ ಅಂಚಿಗೆ ತಲುಪಿತು. ರಾಮಿಯ ಪ್ರಭುತ್ವದ ಧೋರಣೆಯನ್ನು ತಿರಸ್ಕರಿಸುವ ಮನಃಸ್ಥಿತಿಯು ಮಲ್ಲಿಗೆಯದ್ದಾಗಿದ್ದರೆ ಬದುಕು ಹೂವಾಗಿ ಅರಳುತ್ತಿತ್ತು. ಬದಲಾಗಿ ಬಾಡಿ ಹೋಗುತ್ತಿರಲಿಲ್ಲವೆಂಬುದನ್ನು ಸೂಗಸಾಗಿ ವ್ಯಕ್ತಪಡಿಸಿದ್ದಾರೆ.

'ನಾಟ್ಯ ರಾಣಿಯ ಅಂತ್ಯ' ಒಬ್ಬ ಆದರ್ಶ ಸ್ತ್ರೀಯ ಜೀವನ ಚಿತ್ರಣವನ್ನು ಕಟ್ಟಿಕೊಡುತ್ತದೆ. ಸುಂದ್ರಮ್ಮ ಯಾರ ಅಂಗಿನ ಋಣವಿಲ್ಲದೆ ಸ್ವಾತಂತ್ರ್ಯವಾಗಿ ಜೀವನ ನಡೆಸುವಂತದ್ದು. ಯಾವ ಗಂಡಸಿನ ನೆರಳು ಸೋಕಲಾರದಂತ ಗಟ್ಟಿಗಿತ್ತಿಯಾಗಿದ್ದಳು.

ಮೊದ್ಲೇ ಹಾದ್ರಗಿತ್ತಿ, ಕೈಯಾಗ ಚಪ್ಲಿ ಹಿಡಿದು ನಿಂತಳು. ನಾ ಏನಂತದ್ದು ಮಾಡಿದ್ದೆಂದು ಸೆಟ್ಟಿ ಪ್ರಶ್ನಿಸಿ, ಹಾದರಕ ಕರಿತಾನ ಅಂತ ಆನಬೇಕಾ ಬಾಳವ್ವ? ಆನ್ರಿಗೆ ಗೊತ್ತಿಲೇನು? ಯಾರ್ ಯಂತವ್‌ರಂಬುದು? ಮರ್ಯಾದಸದತ ನಾನು ಸುಮ್ನೆ ಮನ್ಯಾಗ ಹೊಕ್ಕಂಡೆ. ಹೀಗೆ ಸೆಟ್ಟಿ ಬಾಳವ್ವ ಮತ್ತು ಸುಂದರಮ್ಮರ ಜೊತೆಗೆ ಸಮಯಾವಕಾಶ ಸಿಕ್ಕಾಗಲೆಲ್ಲ ಅಣುಕಿಸುವ, ಟೀಕಿಸುವ ವೃತ್ತಾಂತವನ್ನು ಇಲ್ಲಿ ಬಿತ್ತರಿಸಿದ್ದಾರೆ. ಸುಂದ್ರಮ್ಮಳ ಸಾವು ಎಲ್ಲರಿಗೂ ದುಃಖವಾಗದೆ, ಸುತ್ತುವರೆದ ಗಂಡಸರೆಲ್ಲರು ತಮ್ಮ ಸೇಡನ್ನು ತಿರಿಸಿಕೊಳ್ಳುವ ಸಂದರ್ಭವಾಯಿತು. ಅವಳ ಬಗ್ಗೆ ಆಡಿಕೊಂಡು ತಮ್ಮ ನಿರಾಕರಣೆಯ ಮನೋಭಾವವನ್ನು ಸಾಬೀತುಪಡಿಸಲು ಅನುಕೂಲವಾಯಿತು. ಒಂಟಿ ಹೆಣ್ಣಿನ ಕಷ್ಟದ ಜೀವನ, ಸುತ್ತಮುತ್ತಲಿನ ಗಂಡಸರ ಶೋಷಣೆ, ಕಾಮದ ದಾಹದ ಮನೋಧೋರಣೆಯನ್ನು ಎದುರಿಸಿ ಪ್ರತಿರೋಧಿಸುವ ಸುಂದ್ರಮ್ಮ ಆದರ್ಶ ಮಹಿಳೆಯಂತೆ ಪ್ರತಿಬಿಂಬಿತವಾಗುತ್ತಾಳೆ.

'ನೀಲಗಂಗಾ ಗುರುಪಾದ ಮತ್ತು ಒಂದು ರೂಪಾಯಿ' ಕಥೆಯು ಪ್ರಾಮಾಣಿಕನಾದ ಬಸವಣ್ಣನ ಜೀವನದಲ್ಲಿನ ಅಂಶಗಳನ್ನು ನಿರೂಪಿಸುತ್ತದೆ. ಬಡತನದಲ್ಲಿಯೂ ಸ್ವಾಭಿಮಾನಿಯಾಗಿ ನಡೆದುಕೊಳ್ಳುವ ಪ್ರಸಂಗವನ್ನು ನೋಡುತ್ತವೆ. ಅವನ ಮನಃಸ್ಥಿತಿಯು ಅನೇಕ ಸಂದರ್ಭಗಳು ಉಚಿತವಾಗಿ ಬಂದು ನಿಲ್ಲುತ್ತವೆ. ಒಂದು ರೂಪಾಯಿ ಕದ್ದು ಆ ತಪ್ಪನ್ನು ತನ್ನ ಮೇಲೆ ಬಾರದಂತೆ ಸುಳ್ಳು ಹೇಳಿ ಪಾರಾಗುವನಾದರೂ, ಮನಸ್ಸು ತಳಮಳಗೊಂಡು ಕೊನೆಗೆ ತನ್ನ ತಪ್ಪನ್ನು ಒಪ್ಪಿಕೊಂಡರು ಯಾರು ಸಹ ಸುಳ್ಳನ್ನು ಒಪ್ಪಿಕೊಳ್ಳುವ ಮನಃಸ್ಥಿತಿಯಲ್ಲಿರಲಿಲ್ಲ. ಮನುಷ್ಯನೇ ಹಾಗೇ ಒಮ್ಮೆ ನಂಬಿಕೆಗೆ ಅರ್ಹನಾದನೆಂದರೆ ಅವನು ಎಂತಹ ತಪ್ಪೆ ಮಾಡಿರಲಿ ಅದನ್ನು ಸುತ್ತಲಿರುವ ಜನರು ಒಪ್ಪಿಕೊಳ್ಳುವುದಿಲ್ಲ. ಬಸವಣ್ಣಿಯನ್ನು ಲೇಖಕರು ಆದರ್ಶ, ನಂಬಿಕೆಗೆ ಅರ್ಹ ವ್ಯಕ್ತಿಯನ್ನಾಗಿ ಬಿಂಬಿಸುತ್ತಾರೆ. ಗೌರವ, ಸಹಾಯ, ಆತ್ಮೀಯತೆ ಬಸವಣ್ಣಿಗೆ ಸಂತೋಷವನ್ನುಂಟು ಮಾಡಿದರೂ ಬಡತನ ಅವನ ಮನಸ್ಸನ್ನು ಸುಡುತ್ತಿತ್ತು. ಆತನ ಆತ್ಮಪ್ರತ್ಯಯ ಯಾರ ಮುಂದೆಯೂ ಕೈಯೊಡ್ಡುದನ್ನು ಸಹಿಸುತ್ತಿರಲಿಲ್ಲ. ಯಾರೋ ಮಾರ್ತ ಹೋಗಿದ್ದಾರೆ; ಕೇಳಿ ಕೊಟ್ರಾಯ್ತು, ನಾನೇ ಇದನ್ನೆ ಬಳಸಿಕೋಳ್‌ಬಹುದಲ್ಲ. ಥೂ ಮಂದಿಹಣ, ಆದ್ರೇನಾಯ್ತು? ಕಳ್ತನ ಮಾಡಿದಂಗ ಆಗ್ತದಲ್ಲ! ಕಳ್ತನ ಯಾಕ್ ಯಾಕಾಗ್ತದ? ನಾನೇನು ಕದ್ದೀನಾ? ಯಾರ್ ಬೀಟ್ ಹೋಗ್ಯಾರ ತಗಂಡೀನಿ. ಖರ್ಚಿಗೆ ಯಾಕ್ ಮಾಡಿಕೆಬಾರ್ದು? ಬಸವಣ್ಣಿ ಹಲವು ರೀತಿಯಲ್ಲಿ ವಿಚಾರಮಾಡಿಕೊಳ್ಳುತ್ತಿದ್ದನು. ಆ ಒಂದು ರೂಪಾಯಿ ಎಂತಹ ಪರಿಣಾಮವನ್ನುಂಟು ಮಾಡಿದೆ ಎಂಬುದು ಗಮನಾರ್ಹ. ಬಡತನದ ಹಿನ್ನಲೆಯಿಂದಾಗಿ ಆದರ್ಶತೆ, ಮೌಲ್ಯಗಳನ್ನು ಮರೆಯುವಂತೆ ಹಣವು ವ್ಯಕ್ತಿಯನ್ನು ಯಾವ ಹಂತಕ್ಕೂ ಕರೆದೊಯ್ಯುತ್ತದೆಂಬುದನ್ನು ಸಾದರಪಡಿಸುತ್ತದೆ. ಯಾರು ಮಾಡಿದ ತಪ್ಪಿಗೆ ಬೇರೊಬ್ಬರು ಶಿಕ್ಷೆ ಅನುಭವಿಸುವಂತಾಯಿತು. ಗುರುಪಾದನ ಮೇಲೆ ಎಲ್ಲರೂ ರೇಗಾಡಿದರು. ಒಪ್ಪಿ ರೂಪಾಯಿ ಕೊಡಲಿಲ್ಲಾಂದ್ರ ಊಟಾ ಬಂದ್ ಮಾಡ್ತೀನಿ, ನಿಮ್ಮ ಹೆಡ್‌ಮಾಸ್ತರಿಗೆ ಹೇಳಿ ಹೆಸ್ರು ಕಿತ್ತಿ ಹಾಕಸ್ತೀನಿ ಅಂದ್ರು. ಒಟ್ಟಾರೆಯಾಗಿ ಅಸಹಾಯಕನ ಮೇಲೆ ಪ್ರಭುತ್ವ, ಪ್ರತಿರೋಧದ ಮನೋಭಾವವು ಅಭಿವ್ಯಕ್ತಗೊಂಡಿದೆ.

'ಬಂಬಯಿ ತಾರೀಪು' ಶೀರ್ಷಿಕೆಯೇ ಕಥೆಯ ಸಮಾಜದ ಜನರ ಜೀವನದ ವಸ್ತುವಿನ ಚಿತ್ರಣವನ್ನು ತೋರಿಸುತ್ತದೆ. ಸುತ್ತಮುತ್ತಲಿನ ಪರಿಸರದ

ಜನರ ವರ್ತನೆಯನ್ನು ನಿರೂಪಿಸಲಾಗಿದೆ. ನರಸಕ್ಕ, ಕೆಂಪವ್ವರ ಉಗುಳಿನ ಜಗಳ ಎಲ್ಲೆಲ್ಲಿಗೋ ಹೋಗಿ ಅವರ ಗಂಡಂದಿರ ಇತಿಹಾಸವನ್ನು ಕೆದರಿತು, ಮನೆತನಗಳ ಚರಿತ್ರೆಯನ್ನು ವರ್ಣಿಸಿತು. ಹೀಗೆ ಹಲವಾರು ಪಾತ್ರಗಳು ವೈಶಿಷ್ಟ್ಯತೆಯು ಮುಖ್ಯವಾಗಿ ಕಾಣಿಸುವಂತಹದು. ಎಲ್ಲಮ್ಮನ ಪೂಜಾರಿ ಬಾಜಾರೆಪ್ಪನಿಗೆ ಅಮಾವಾಸಿ ದಿನ ಅಮ್ಮ ಮೈಮೇಲೆ ಬಂದಳು. 'ಕಲ್ಲ್ಯಾ ಹರೇದ ಮಗಳನ್ನು ಕೂಲಿಗೆ ಕಳಿಸ್ತ್ಯಾ ನೀಚಾ, ನಾಚಿಗೆ ಬರಂಗಿಲ್ಲ? ಇನ್ನಮ್ಯಾಲೆ ಕೂಲಿಗೆ ಕಳಿಸದು ಬಂದ್. ಅಮ್ಮನ ಅಪ್ಪಣ್ಯಾಗ್ಯಾದ ಗಂಗಿನ್ನ ಅಮ್ಮನ ಹೆಸರ್ಲೆಬುಡು ಎಂದು ಚೀರಾಡಿದ. ದೇವರ ಹೆಸ್ರರ ಮೇಲೆ ಹೆಣ್ಣನ್ನು ಏಕೆ ಬಿಡಬೇಕು. ಪುರುಷ ಪ್ರಧಾನ ಸಮಾಜವು ಹೆಣ್ಣಿಗೆ ಇಷ್ಟವಿಲ್ಲದಿದ್ದರೂ ಈ ಕಗ್ಗತ್ತಲಿನಲ್ಲಿ ಕಮರಿ ಹೋಗುವಂತೆ ಮಾಡುತ್ತಿರುವುದು ವಿಪರ್ಯಾಸದ ಸಂಗತಿ. ಕಲ್ಲ್ಯಾ ತನ್ನ ಮಗಳನ್ನು ಬಸವಿ ಬೀಡುವುದನ್ನು ಧಿಕ್ಕರಿಸಿ ತನ್ನ ಮಗಳಿಗೆ ಮದುವೆ ಮಾಡಲು ಅನುಮತಿ ಕೊಡಿ ಎಂದು ದಯನೀಯವಾಗಿ ಬೇಡಿಕೊಳ್ಳುವ ಸಂದಿಗ್ಧತೆಯಿದೆ. ಗಂಗಿ ಪೂಜಾರಿ ಮೇಲ್ವರ್ಗದ ಜನರ ಧೋರಣೆಗಳಿಂದಾಗಿ ಕೆಳವರ್ಗದ ಸ್ತ್ರೀಯರು ಅತಂತ್ರವಾಗಿರುವುದನ್ನು ಕಥೆಯು ಸ್ಪಷ್ಟೀಕರಿಸುತ್ತದೆ.

'ಬಯಲಾಟ' ಕಥೆಯು ಸಾಮಾಜಿಕತೆಯಿಂದ ಕೂಡಿದೆ. ಬಸ್ಸಪ್ಪ ಜೀವನದುದ್ದಕ್ಕೂ ಒಂಟಿತನದಿಂದ ಬದುಕುವನು. ನೀವು ನಾಯಕರಾಗುವುದು ಬ್ಯಾಡ, ನಾವು ಬಯಲಾಟವನ್ನು ಆಡೋದಿಲ್ಲ. ನಿಮ್ಮನ್ನ ಕಾಡಿಸೋದಿಲ್ಲ ಎಂದು ಭರವಸೆ ಕೊಟ್ಟರು. ಅಲ್ಲಲ್ಲಿ ಹೋಗಿ ಆತನ್ನ ಯಾಕ್ ಕೇಳಾಕ ಹೋಗಿದ್ರಿ; ಮತ್ಯಾರ್ ಇದ್ದಿಲ್ಲೇನ್ ನಿಮಗ? ಅಂತ ಅಜ್ಜಿ ಬೈಯ್ದಳು. ಆ ಅಗಸ ಆಟ ಆಡಿಸಿ ಗಳಿಸ್ಯಾನೆಷ್ಟು; ನಿನಗ ಕೊಟ್ಟಾನೆಷ್ಟು? ಹೋಗದು ಬ್ಯಾಡ ಅಂದಳು. ಅವ್‌ನಿಂದ ಹೋದ್ರ ನಾನು ನಿನ್ ಪಾಲಿಗೆ ಸತ್ತಂಗ ಅಂತ ತಿಳಕ ತಾಯಿ ಪರಿಪರಿಯಾಗಿ ಬೇಡಿಕೊಂಡರೂ ಸಬ್ಬಾಸಾನಿ ಹೊರಟೆ ಹೋದಳು. ಬಸ್ಸಪ್ಪ ಹೆಣ್ಣಿನ ಮೋಸದ ವೃತ್ತಾಂತದಲ್ಲಿ ಸಿಲುಕಿ ನರಳಾಡುವ ಹಿನ್ನಲೆಯನ್ನು ವಿಶ್ಲೇಷಿಸುತ್ತದೆ. ಸಬ್ಬಸಾನಿ ಬಸ್ಸಪ್ಪ ಜೀವಂತವಾಗಿರುವಾಗ ತುಂಬಾ ಸಂಕಷ್ಟದಿಂದ ನೋವು ಅನುಭವಿಸುವಂತೆ ಮಾಡುವಳು. ಗಂಡ ಸತ್ತ ಮೇಲೆ ಹೆಂಡತಿಗೆ ಬುದ್ಧಿ ಬರುವುದೆಂಬ ಮಾತು ಸಬ್ಬಾಸಾನಿಗೆ ಅನ್ವಯವಾಗುವಂತೆ ನಿರೂಪಿತಗೊಂಡಿದೆ.

'ಮಲ್ಕಮ್ಮ' ಒಂಟಿಯಾದ ಮಲ್ಕಮ್ಮ ಸಮಾಜದಲ್ಲಿ ಜನರ ನಿಂದನೆಗಳಿಗೆ ಸ್ಪಂದಿಸಿ ಎದುರಿಸುವ ಹಿನ್ನಲೆಯಿದೆ. ಇವಳ ಬೆನ್ನ ಹಿಂದೆ ಜನರಾಡುವ ಮಾತನ್ನು ಸಹಿಸಿಕೊಂಡು ಮೌನವಾಗಿಯೇ ಇರುತ್ತಾಳೆ. ಮಲ್ಕಮ್ಮ ವಿಷಯಾದಾಗ ಕೈಯಾಕಿದ್ರೆ ಊರ್‌ತುಂಬ ಬದ್‌ನಾಮಿ; ಅಲ್ದೆ ಜಗಳಾಜೂಟಿ. ರೊಕ್ಕಾ ಒಗ್ದಾ ಮಜಾ ಮಾಡಿದ್ರ, ಬದನಾಮಿಲ್ಲ ಗಿದ್ನಾಮಿಲ್ಲ, ಅದೇ ಬೇಸು.....ಎಂಬ ಬುದ್ದೆಣ್ಣನ ಮನೋಭಿವ್ಯಕ್ತಿಯು ವ್ಯಕ್ತಗೊಂಡಿದೆ. ಮಲ್ಕಮ್ಮಳ ಬದುಕು ಕಷ್ಟಕರವಾಯಿತು. ಸಮಾಜದ ಕಣ್ಣಿಗೆ ಅವಳ ನಡತೆ ಕ್ಷುಲ್ಲಕವಾಯಿತು. ಇಡೀ ಸಮಾಜವೇ ಅವಳನ್ನು ನಿರ್ಲಕ್ಷಿಸುವುದನ್ನು ಚಿತ್ರಿಸಿದ್ದಾರೆ. ಬಡತನ, ಗಂಡ ಊರು ಬಿಟ್ಟು ಹೋಗಿದ್ದು, ಸಾಲಗಾರರ ಕಿರುಕುಳ ಎಲ್ಲದರಿಂದ ಅವಮಾನ ಅನಭುವಿಸುವ ವೃತ್ತಾಂತದಿಂದ ಕೂಡಿದೆ. ಇವಳ ಆರ್ಥಿಕ ಸ್ಥಿತಿ ಅವಸಾನದಲ್ಲಿದನ್ನು ಕಂಡು ಸುತ್ತಮುತ್ತಲಿನ ಸಾಲಗಾರರು ಹೀಯಾಳಿಸಿ ಮಾತಾನಾಡಿ ಅವಳ ಮನಸ್ಸಿಗೆ ಘಾತ ಮಾಡುತ್ತಿದ್ದರು. ಮಲ್ಕಮ್ಮ ಗಂಡ ಮಾಡಿದ ಸಾಲದ ಜವಾಬ್ದಾರಿಯನ್ನು ಹೊತ್ತು ಅನೇಕ ರೀತಿಯಲ್ಲಿ ಕಷ್ಟವನ್ನು ಅನುಭವಿಸಿದಳು.

ಮನುಷ್ಯರು ಹಣಕ್ಕೆ ಬೆಲೆಕೊಡುವರೇ ಹೊರತು ಗುಣಕ್ಕಲ್ಲ, ಮನುಷ್ಯತ್ವಕ್ಕಲ್ಲ, ಮನಾವೀಯತೆಗಲ್ಲ ಎಂಬ ಪ್ರಶ್ನೆಯು ಮೂಡುತ್ತದೆ.

'ಮಲಿನ ಮಜ್ಜನ ನ್ಯಾಯಕ್ಕೆಳಸಿ....' ಮೇಲ್ಜಾತಿಯವರು ಕೆಳಜಾತಿಯವರ ಮೇಲೆ ಪ್ರಭಾವ ಬೀರುವುದನ್ನು ಅನಾವರಣಗೊಳಿಸಿದೆ. ಏನು ಬದ್ಲಾದ್ರೂ ಎಂಥ ಎಚ್ಚರ ಬಂದ್ರೂ ನಮಗ ಎದುರು ನಿಂದ್ರೋ ಧೈರ್ಯ ಈ ಊರಾಗ ಯಾರಿಗೊ ಇಲ್ಲ. ನಾವು ಹೇಳಿದಷ್ಟು ನೀನು ಮಾಡು, ಆದಷ್ಟು ಬೇಗ ಪಂಚಾಯಿತಿನ್ನ ಕರಿ. ಮಾದೇವಿ ಮಾದಿಗರವಳಾಗಿ ಲಿಂಗಾದ್ಮ್ಯಾಲೇ ನೀರ್ ಹಾಕೋದಂದ್ರೇನು? ಇದಕ್ಕಿಂತ ಘೋರ ಅಪರಾಧ ಇನ್ನೇನಿದೆ? ಅಲ್ಲೇನ್ರಿ ಆಚಾರ್ಯರೇ ಎಂದು ಶಿವಾಚಾರ್ಯರು ಕೇಳಿದರು. ದಲಿತರು ಸೋಕಿದರೆ ಆ ಶಿವನ ಲಿಂಗಕ್ಕೂ ಮುಡಿಚೆಟ್ಟು ಆಗುತ್ತದೆಂಬ ಮನೋಭಾವವು ನಿರೂಪಿತಗೊಂಡಿದೆ. ಮೇಲ್ಜಾತಿಯವರ ಮನೋಭಾವ ಬದಲಾಗಬೇಕೆಂಬುದು ಕಥೆಯ ಒಟ್ಟು ಆಶಯವಾಗಿದೆ. ಇವರು ದಲಿತರನ್ನು ಮನುಷ್ಯರಂತೆ, ಮಾನವೀಯತೆಯ ನೆಲೆಯನ್ನು ಅರಿಯದೆ ವರ್ತಿಸುವುದು ವಿಷಾದನೀಯ. ಶಿಕ್ಷಣ ಕಲಿತ ದಲಿತ ಹುಡುಗರು ಆಚಾರ್ಯರ ದೌರ್ಜನ್ಯ, ಶೋಷಣೆಯನ್ನ, ಅರ್ಥೈಸಿಕೊಂಡು ಪ್ರಶ್ನಿಸುವ ಮನೋಭೂಮಿಕೆಯು ವ್ಯಕ್ತವಾಗುತ್ತದೆ. ಸರಕಾರ ರೊಕ್ಕ ಖರ್ಚು ಮಾಡ್ತದ ಅಂದ್ರೆ ಯಾಕ್ ಬಿಡ್ತೀರಿ? ಕಲ್ತು ನೀವು ಶ್ಯಾಣೇರಾದ್ರೆ ನಮ್ಗೇನು ಹೊಟ್ಟೇಕಿಚ್ಚಿಲ್ಲ. ನೀವು ಓದಿ ಬುದ್ಧಿವಂತರಾಗಿ, ಆದ್ರೆ ಜಗಳ ಜೂಟ ಮಾಡಬ್ಯಾಡರಿ ಹಿರೇರು ಹುಡುಗರಿಗೆ ಉಪದೇಶಿಸಿದರು. ದಲಿತರು ಶಿಕ್ಷಿತರಾಗುತ್ತಿರುವುದರಿಂದ ವೈಚಾರಿಕ ಆಲೋಚನೆಗಳಿಂದಾಗಿ ಮೇಲ್ಜಾತಿಯವರ ಮಡಿವಂತಿಕೆಗೆ ಪೆಟ್ಟು ಬಿದ್ದಾಂತಾಯಿತೆಂಬುವುದನ್ನು ಅನಾವರಣಗೊಳಿಸಲಾಗಿದೆ. ಮೇಲ್ಜಾತಿಯವರೆಲ್ಲ ಪಂಚಾಯಿತಿಗೆ ಕರೆಸಿದಾಗ ಅವರನ್ನೆಲ್ಲ ಸುಡಬೇಕೆಂಬ ದೃಢನಿರ್ಧಾರವನ್ನು ದಲಿತರು ಮಾಡುವ ವೃತ್ತಾಂತವನ್ನು ವಿವರಿಸಲಾಗಿದೆ. ಇವರ ಮನಸ್ಸಿನ ಬೆಂಕಿಯು ಅಶ್ವಸ್ಥ ಕಟ್ಟೆಯ ಮೇಲೆ ಆವರಿಸುವ ಬಗೆಯನ್ನೊಳಗೊಂಡಿದೆ.

ತಾಳಿದವನು ಬಾಳಿಯಾನು ಎಂಬಂತೆ ಇವರು ತಾಳಿ ತಾಳಿ ತಾಳ್ಮೆಯ ಕಟ್ಟೆ ಹೊಡೆದಾಗಲೇ ಅನಾಹುತ ಸಂಭವಿಸುವುದೆಂಬಾಂಶವನ್ನು ಸಾದರಪಡಿಸುವುದು. ದಲಿತರು ತಮ್ಮ ಮೇಲೆ ಆಗುತ್ತಿರುವ ಶೋಷಣೆಯನ್ನು ವೈಚಾರಿಕ ನೆಲೆಯಲ್ಲಿ ಖಂಡಿಸುವ ಬಗೆಯನ್ನೊಳಗೊಂಡಿದೆ. ಬಸಣ್ಣ ಓದು ಕಲ್ಸತೀನಿ ಅಂಬ ನೆವದಿಂದ ಕೆಳಜಾತಿಯವ್ರ ತಲೆಕೆಡ್ಸಿ ಮೇಲ್ಜಾತಿಯವರ ಕೂಡ ಜಗಳ ತೆಗಸ್ತಾನ. ನಾವ್ ದೊಡ್ ಕುಲ್ದವರು ಊರಾಗ ಬಾಳ್ವೆ ಮಾಡ್ದಂಗ ಆಗೇದ ಅಂತ ಶಿವಾಚಾರ್ಯರು ಸರಕಾರಕ್ಕ ದೂರು ಸಲ್ಸಿದ. ಒಟ್ಟಂದದಲ್ಲಿ ಮೇಲ್ಜಾತಿಯವರು ಕೆಳಜಾತಿಯವರ ಶೈಕ್ಷಣಿಕ ಪ್ರಗತಿಯನ್ನು ಸಹಿಸದೆ ಒಂದಲ್ಲ ಒಂದು ಉಪಾಯ ಮಾಡಿ ಮಾನಭಂಗ ಮಾಡಲು ಹೋಗಿ ಮೂರ್ಖರಾಗುವ ಬಗೆಯು ವಿಶ್ಲೇಷಣೆಗೊಂಡಿದೆ. ರಜಾಕಾರರ ಪ್ರಭುತ್ವವನ್ನು ಗಂಭೀರವಾಗಿ ಪರಿಗಣಿಸಿದ ಸಿದ್ದಣ್ಣನ ಮೇಲೆ ಅಲ್ಲೀಸಾಬ ಆಸೆಯನ್ನು ತೋರಿಸಿ ತನ್ನ ಕಡೆ ಸೆಳೆದುಕೊಳ್ಳಲು ಯತ್ನಿಸುವನು. 'ಸ್ವಾತಂತ್ರ್ಯ ವೀರ' ಪರಪ್ಪ ತುಂಬಾ ಆದರ್ಶತೆಯಿಂದ ನಡೆದುಕೊಂಡು ಸಿದ್ದಣ್ಣ ಜೈಲಿಗೆ ಹೋಗಿ ಬಂದ ಪರಪ್ಪನ ಮೂರ್ಖತನದ ಕಾರ್ಯವನ್ನು ಬಯಲಿಗೆಳೆಯುವ ಮಾನಭಂಗ ಮಾಡುವ ಸಂದರ್ಭವಿದೆ. ಆ ಸುವ್ವರ್‌ಗಳು ಅಂಜಿ ಓಡಿ ಓದ್ವು; ಏನ್ ಏರಸ್ತಾವ ಝುಂಡಾ?

ಹುಡುಗಾಟ್ಕಿ ಆಯ್ತೇನು? ಹಿಂದೂಸ್ತಾನ್‌ದಾಗ ಹೈಸೆತ್ತಾದ ನಮ್ಮೆದ್ರಿಗೆ ನಿಲ್ಲದು? ಎಂದು ರಜಾಕಾರರು ಜಂಬ ಕೊಚ್ಚಿಕೊಂಡರು. ಹೇಡಿಯಾಗಿ ಎಂಜಲ ತಿಂಬದಕ್ಕಿಂತ ಅಜಾದಿಯಾಗಿ ಪ್ರಾಣಕೊಡದು ಬೇಸಲ್ಲೇನು? ಏರ್ಸಿದ ಝುಂಡಾ ಹರ್‍ಯಲಿತ್ಯಾ? ಎಷ್ಟು ಸೊಕ್ಕು ನಿಂದ್? ನಿನ್ ಕಾಲಿಗೆ ಬುಳ್‌ಬೇಕಾ? ನೀನೆ ನಮ್ ಕಾಲಿಗೆ ಬುಳ್‌ಹೋತ್ ಬರ್ತದ ಅಂದ ಪರಪ್ಪ ಕೋಪಾದ್ರೀಕ್ತನಾಗಿ ವರ್ತಿಸುವನು. ಈ ನೀಚನ್ನ ಸ್ವಾತಂತ್ರ್ಯ ವೀರ ಅಂತ ಮೆರಿಸಿದ್ರ್ಯೂ? ಸನ್ಮಾನ ಮಾಡಿದ್ರ್ಯಾ? ಥೂ ನಾಚಿಗ್ಗೇಡಿಗಳೇ, ಧ್ವಜರೋಹಣ ಮಾಡಿದ ಮೇಲೆ ಓಡಿಹೋಗಮ್ಮ ನಡಿ, ರಜಾಕಾರ್‍ರು ನಮ್ಮನ್ನ ಕೊಲ್ಲಿಬಿಡ್ತಾರ ಅಂದು ಆವತ್ತು ಹೇಡಿಯಾಗಿ ಮಾತಾಡಿದೆಲ್ಲ ಎಂದು ಪರಪ್ಪ ಕಠೋರವಾಗಿ ಟೀಕಿಸಿದನು. ಆ ಲೋಡಿ ಮಕ್ಳು ಕಡಿಗಿ ನನ್ ಹೆಣ್ತಿ ಮ್ಯಾಲೆನೂ ಕೈಹಾಕಕ ಬಂದ್ರು. ನನ್ ಮನೆ ಲೂಟಿ ಮಾಡಿದ್ರು ನಾನವ್ರನ್ನ ಸುಮ್ನೇ ಬಿಡ್ತೀನ್ಯಾ? ಹೇಡಿ ಸೂಳೇ ಮಕ್ಳು, ಓಡಿಹೋಗ್ಯಾರ ತಲೆಮರಿಸಿಗೊಂಡು ತೀವ್ರವಾಗಿ ಖಂಡಿಸುವನು. ಸ್ವಾತಂತ್ರ್ಯಕ್ಕಾಗಿ ಪ್ರತಿಭಟಿಸಿದವನು ಪರಪ್ಪನಾದರೆ, ಹೆಸರು ಗಳಿಸುವ ಚಪಲದಿಂದ ಈ ಸಂದರ್ಭವನ್ನು ಬಳಸಿಕೊಂಡ ಸಿದ್ದಣ್ಣನ ಕುತಂತ್ರವು ಇಲ್ಲಿ ಆವರಿಸಿಕೊಂಡಿದೆ. ಪುರುಷ ಪ್ರಧಾನ ಸಮಾಜದಿಂದ ಸ್ತ್ರೀಯು ದೌರ್ಜನ್ಯ, ಶೋಷಣೆಗೆ ಒಳಗಾಗುವುದನ್ನು 'ಹಾವಮ್ಮ' ಕಥೆಯು ಚಿತ್ರಿಸುತ್ತದೆ. ನಾಕು ಮನೆ ಕೆಲಸ ಮಾಡುವ ಹಾವಮ್ಮ ಪುರುಷರ ಕಾಮಕ್ಕೆ ಬಲಿಯಾಗಿದ್ದಳಾದರೂ ಅದನ್ನು ಸ್ವೀಕರಿಸುವ ಮನಃಸ್ಥಿತಿಯನ್ನು ಹೊಂದಿದ್ದಳು. ಬೇಲಿ ಎದ್ದು ಹೊಲ ಮೇಯ್ದಂತೆ ಕೆಲಸ ಮಾಡುವ ಮನೆಯ ಪುರುಷರೇ ಹಾವಮ್ಮಳನ್ನು ಸಂಭೋಗಿಸುತ್ತಿರುವ ಹಿನ್ನಲೆಯಿದೆ. ಹೆಣ್ಣುಮಕ್ಕಳಿಗೆ ಸುತ್ತಮುತ್ತ ತನ್ನವರಿಲ್ಲದಿದ್ದರೆ ಅವಳು ಮಂದಿ ಪಾಲಾಗುತ್ತಾಳೆಂಬುದಕ್ಕೆ ಹಾವಮ್ಮ ಸೂಕ್ತ ನಿದರ್ಶನವಾಗಿ ಕಣ್ಣುಂದೆ ನಿಲ್ಲುತ್ತದೆ. ಒಂದು ಕಡೆ ಸ್ತ್ರೀ ಕುಲಕ್ಕೆ ಕಳಂಕವಾದಂತೆ ಬಿಂಬಿತಳಾಗುವಳು. ಮನೆಯ ಧಣೀ ಅವಳನ್ನು ಸಂಶಯಸ್ಥತವಾಗಿ ಕಂಡು ಅವಮಾನಿಸಿ, ಹೀಯಾಳಿಸಿ ತಿರಸ್ಕರಿಸುವ ಬಗೆಯು ಅನಾಔರಣಗೊಂಡಿದೆ. ಸುತ್ತಮುತ್ತ ಸಮಾಜದ ವ್ಯಂಗ್ಯ ಟೀಕೆಗೆ ಗುರಿಯಾಗಿರುವುದನ್ನು ಸ್ಪಷ್ಟೀಕರಿಸಲಾಗಿದೆ.

ಒಟ್ಟಾರೆಯಾಗಿ ಸ್ತ್ರೀ, ಬಡತನ, ಸ್ವಾತಂತ್ರ್ಯ ಸಮಾನತೆ, ಮೇಲ್ಜಾತಿ – ಕೆಳಜಾತಿಯವರ ಮೇಲಿನ ಶೋಷಣೆ, ದಬ್ಬಾಳಿಕೆ, ದೌರ್ಜನ್ಯ, ಧರ್ಮಕಲಹ ಹೀಗೆ ನಾನಾ ವಿವಿಧ ವಸ್ತುಗಳ ಹಿನ್ನಲೆಯಲ್ಲಿ ಇಲ್ಲಿನ ಕಥೆಗಳು ರೂಪುಗೊಂಡಿವೆ. ಸಮಾಜದಲ್ಲಿ ಪ್ರಸ್ತುತವೆನಿಸುವ ಹಲವಾರು ಕಥೆಗಳಲ್ಲಿ ಇಲ್ಲಿ ಕಾಣುತ್ತೇವೆ. ಲೈಂಗಿಕ ಮೋಹವು ಮನುಷ್ಯನನ್ನು ಕ್ರೋರವಾಗಿ ವರ್ತಿಸುವಂತೆ ಪ್ರೇರೇಪಿಸುವ ವಿವಿಧ ಅಂಶಗಳನ್ನು ಸೂಕ್ಷ್ಮವಾಗಿ ಇವರ ಕಥೆಗಳು ಪ್ರತಿಪಾದಿಸುತ್ತವೆ.

ನಮ್ಮ ಪ್ರದೇಶದಲ್ಲಿ ಅಕ್ಷರತೆಯ ಪ್ರಮಾಣ ಕಡಿಮೆಯಿರುವುದರಿಂದಾಗಿ, ಪ್ರಭುತ್ವದ ನೆಲೆಯಿಂದ ಅನೇಕ ಕಲಹಗಳು, ಅನ್ಯಾಯ, ಅತ್ಯಾಚಾರ, ದಬ್ಬಾಳಿಕೆ, ಮೇಲೂ – ಕೀಳು, ಹೀಗೆ ಅನೇಕ ಅಂಶಗಳನ್ನು ಲೇಖಕರು ಬೆಳಕು ಚೆಲ್ಲಿದ್ದಾರೆ. ಆರ್ಥಿಕತೆಯಿಂದಾಗಿ ಜನರು ತಮ್ಮ ಜೀವಗಳು ಬಲಿಕೊಟ್ಟಿದ್ದಾರೆ. ಈ ಎಲ್ಲಾ ಕಥೆಗಳಲ್ಲಿ ಮೂಢಿಬಂದಿರುವುದೆನೆಂದರೆ ಶೋಷಣೆಯ ವಿರುದ್ಧ ಧ್ವನಿಯನ್ನು ಎತ್ತುವುದು. ಸಾಮಾಜಿಕತೆಯನ್ನು ಗಮನಕ್ಕೆ ತೆಗೆದುಕೊಂಡು ಯಾವ ಸಣ್ಣ ಕಥೆಗಳನ್ನು ಬರೆದಿದ್ದಾರೊ? ಅವು ಇಂದಿನ ಸಮಾಜಕ್ಕೂ ಅನ್ವಯಿಸುವಂತಿವೆ. ಶಾಂತರಸರ ಸೃಜನಶೀಲ ಬರಹದಲ್ಲಿ ನೈಜ್ಯತೆ, ಮೌಲಿಕತೆ, ಸಂಪೂರ್ಣತೆ, ಆದರ್ಶತೆಯು ತಿಳಿದಿದೆ.

ಮನುಷ್ಯ ತನ್ನ ಮೂಲಭೂತತೆಯಿಂದ ಸಹಜವಾಗಿ ಬದುಕನ್ನು ರೂಪಿಸಿಕೊಳ್ಳುತ್ತಾನೆ. ಪರಂಪರೆಯಿಂದ ಪ್ರಶ್ನಿಸುವುದಲ್ಲದೆ ಪರಂಪರೆಯ ವಿರುದ್ಧ ಪ್ರತಿಭಟಿಸುವನು. ಶೋಷಣೆಯ ನೆಲೆಯನ್ನು ಖಂಡಿಸುವುದಾಗಿದೆ.

**ಪರಾಮರ್ಶನ ಗ್ರಂಥಗಳು**


1. ಸಂ. ಯು ಆರ್ ಅನಂತಮೂರ್ತಿ– ಶತಮಾನದ ಕತೆಗಳು
2. ಜಿ. ಎಚ್. ನಾಯಕ – ಕನ್ನಡ ಸಣ್ಣ ಕತೆಗಳು
3. ಶಾಂತರಸ – ಸಮಗ್ರ ಕತೆಗಳು
4. ಗಿರಡ್ಡಿ ಗೋವಿಂದರಾಜ – ಸಣ್ಣಕತೆಯ ಹೊಸ ಒಲವುಗಳು
5. ಜಿ. ಎಸ್. ಆಮೂರ – ಕನ್ನಡ ಕಥನ ಸಾಹಿತ್ಯ ಸಣ್ಣಕತೆ


❖❖❖

ಹರಿಯ ಚಿತ್ತ ಹರಿದತ್ತ
ಹರಿಗಳು ಹರಿದವು ಅಂದು
ಹರಿದುಕೊಳುವುದಸದಳವು
ಹರಿಗಳಿಗೂ ಹರಿಚಿತ್ತವಾಫೆಯನು

# ಭಾವವೆಂಬ ಮನೆಯೊಳಗಣ ಗೀತವೆಂಬ ಅತಿಥಿ

**ರೇಶ್ಮಾ ಭಟ್**
ಕನ್ನಡ ಉಪನ್ಯಾಸಕಿ
ಸರಕಾರಿ ಪ್ರಥಮ ದರ್ಜೆ ಕಾಲೇಜು, ವಾಮದಪದವು

ಮಾನವನ ಮನಸ್ಸಿನಲ್ಲಿ ಉತ್ಪತ್ತಿಯಾಗುವ ಚಿತ್ತವೃತ್ತಿಗಳೇ ಭಾವ. ಮನುಷ್ಯನು ಸಮಾಜದ ನಡುವೆ ಬಾಳುತ್ತಿರುವಾಗ ಹೊರಗಿನ ವಿಷಯಗಳು ಆತನ ಚಿತ್ತವನ್ನು ಅರಿತೋ ಅರಿಯದೆಯೋ ಕೆಣಕುತ್ತಿರುತ್ತವೆ. ಆಗ ಉತ್ಪತ್ತಿಯಾಗುವ ವಿವಿಧ ಆಲೋಚನೆಗಳೇ ಭಾವ. ಇಂತಹ ಅನೇಕ ಭಾವಗಳು ಪದ್ಯರೂಪದಲ್ಲಿ ಬಂದರೆ ಅದು ಭಾವಗೀತೆ ಎನಿಸಿಕೊಳ್ಳುತ್ತದೆ.

**"ಬನ್ನಿ ಭಾವಗಳೆ ಬನ್ನಿ ನನ್ನೆದೆಗೆ**
**ಕರೆಯುವೆ ಕೈಬೀಸಿ**
**ಬತ್ತಿದೆದೆಯಲಿ ಬೆಳೆಯಿರಿ ಹಸಿರನು**
**ಪ್ರೀತಿಯ ಮಳೆ ಸುರಿಸಿ"**

ಕವಿ ಮನಸ್ಸೊಂದು ಭಾವಗಳನ್ನು ತನ್ನೆದೆಗೆ ಕೈಬೀಸಿ ಕರೆಯುತ್ತಿದೆ. ಭಾವಗಳಿಲ್ಲದ ಮನಸ್ಸು ಬರಡು ಎಂಬ ಅಭಿಪ್ರಾಯ ಇಲ್ಲಿದೆ.

ಇಂಥಾ ಭಾವವೊಂದು ಸಣ್ಣ ಬಿಂದುವಿನಿಂದ ಪ್ರಾರಂಭವಾಗಿ ಅಕಾಶದೆತ್ತರಕ್ಕೆ ಬೆಳೆದು ನಮ್ಮನ್ನು ಆವರಿಸಿಕೊಳ್ಳುವುದೇ ಒಂದು ಬೆರಗು.

**"ಯಾವ ರಾಗ? ಮತ್ತೆ ಇದಾವ ರಾಗ?**
**ಎದೆಯಾಳದಿಂದೆದ್ದು ನಭನೀಲಿಗೇರುತಿದೆ?"**

ಅಷ್ಟು ಎತ್ತರಕ್ಕೆ ಬೆಳೆದ ಭಾವವೊಂದು ಅಮೂರ್ತವಾಗಿಯೇ ಉಳಿಯುವುದರಿಂದ ಸಂಗೀತದ ರಾಗವೊಂದರ ಹಾಗೆಯೇ ಕವಿ ಅದರ ಗುಂಗಿನಲ್ಲಿ ಇರುತ್ತಾನೆ. ಆದರೂ ಅದರ ಬಗ್ಗೆ ಏನನ್ನೂ ಹೇಳಲಾರ. ಅಕ್ಷರರೂಪಕ್ಕೆ ಬರುವವರೆಗೂ ಉತ್ತರವಿಲ್ಲದ ಪ್ರಶ್ನೆಯಂತೆ ಅದು ಅವನನ್ನು ಪೀಡಿಸುತ್ತದೆ. ಯಾವುದೋ ಒಂದು ಸನ್ನಿವೇಶದಲ್ಲಿ ಅದು ಮೂರ್ತರೂಪವನ್ನು ಪಡೆದುಕೊಳ್ಳುತ್ತದೆ. ಕ್ರೌಂಚ ಜೋಡಿಯಲ್ಲಿ ಒಂದು ಸತ್ತಾಗ ಕವಿಯಲ್ಲಿ ಉಕ್ಕಿದ ಕರುಣೆಯ ಭಾವವೇ ಶ್ಲೋಕವಾದುದು ನಮಗೆಲ್ಲ ತಿಳಿದ ವಿಷಯ. ಅದಕ್ಕೇ ಕ್ರೌಂಚಗಳ ಅಗಲಿಕೆಯ ಆ ಆರ್ತನಾದವನ್ನು 'ಗಿರಿವನಾ ಚೆಚ್ಚೇತನವೇ ಚೀತ್ಕರಿಸುವಂತೆ' ಎಂದು ರಸಋಷಿ ಕುವೆಂಪು ಅವರು ಹೇಳಿದುದು. ಆ ಚೀತ್ಕಾರಕ್ಕೆ ಒಂದು ಮನಸ್ಸನ್ನು ಘಾಸಿಗೊಳಿಸುವಷ್ಟು ಶಕ್ತಿಯಿತ್ತು. ಮನಸ್ಸಿಗೆ ಘಾತವಾದಾಗ, ಅದು ನೊಂದಾಗ ಹುಟ್ಟುವ ತೀವ್ರವಾದ ಭಾವನೆಗಳು ಎಲ್ಲೋ ಅಡಗಿದ್ದ ಅಮೂರ್ತ ಭಾವಗಳೊಂದಿಗೆ ಈಚೆ ಬಂದು ಅಕ್ಷರಗಳ ಮೂಲಕ ಮೂರ್ತರೂಪವನ್ನು ಪಡೆದುಕೊಳ್ಳುತ್ತವೆ. ಆದಿಕವಿಯನ್ನು ನೋವಿನ ಭಾವವೊಂದು ಹೀಗೆ ಹಿಂಡಿದೆಯೆಂದರೆ ಅನಂತರ ಬಂದ ಕಾವ್ಯಾದಿಗಳು ಇದರಿಂದ ಹೊರತಾಗಿರಲು ಸಾಧ್ಯವಿಲ್ಲ.

'ತೀವ್ರವಾದ ಭಾವದಾರೆಯ ನಿರಂತರ ಸ್ರೋತವೇ ಕಾವ್ಯ' ಎಂದು ಕವಿ ವರ್ಡ್ಸ್‌ವರ್ತ್ ಹೇಳಿದ್ದಾನೆ. 'ವಾಕ್ಯಂ ರಸಾತ್ಮಕಂ ಕಾವ್ಯಂ'– 'ರಸವೇ ಕಾವ್ಯದ ಜೀವಾಳ' ಎಂದು ಮೀಮಾಂಸಕಾರ ವಿಶ್ವನಾಥ ಹೇಳುತ್ತಾನೆ. ರಸವೆಂದರೆ ಇಂತಹ ಭಾವನೆಗಳು ಕವಿಯಲ್ಲಿಯೂ, ಪ್ರೇಕ್ಷಕ ಅಥವಾ ಓದುಗನಲ್ಲಿಯೂ ಹುಟ್ಟಿಸುವ ಭಾವ– ಪ್ರತಿಭಾವಗಳು. ಈ ತೀವ್ರ ಭಾವಗಳು ಸಮರ್ಥವಾದ ಪದಸಾಲುಗಳನ್ನೂ ಪ್ರಾಸಗಳನ್ನೂ ಹೊತ್ತುಕೊಂಡು ವಿಶೇಷವಾದ ಅಭಿವ್ಯಕ್ತಿಯ ಮೂಲಕ ಬಂದಾಗ ಅದರ ಪರಿಣಾಮ ಹೆಚ್ಚಾಗಿರುತ್ತದೆ.

**"ಭೃಂಗದ ಬೆನ್ನೇರಿ ಬಂತು ಕಲ್ಪನಾ ವಿಲಾಸ**
**ಮಸೆದ ಗಾಳಿ ಪಕ್ಕ ಪಡೆಯುತಿತ್ತು ಸಹಜ ಪ್ರಾಸ**
**ಮಿಂಚಿ ಮಾಯವಾಗುತ್ತಿತ್ತು ಒಂದು ಮಂದಹಾಸ"**

ಎಂದು ಬೇಂದ್ರೆಯವರು ಹೇಳಿದ್ದು ಇದನ್ನೇ. ಆದ್ದರಿಂದ ಭಾವಗೀತೆಯನ್ನು ರಸಗೀತೆ ಎಂದು ಕರೆಯಬೇಕು ಎನ್ನುವವರೂ ಇದ್ದಾರೆ.

ಭಾವಗೀತೆಗಳ ಮುಖ್ಯ ಲಕ್ಷಣವೆಂದರೆ, ಸಾಹಿತ್ಯವೊಂದು ಸಂಗೀತದ ರಾಗಗಳ ಸಹಚಾರಿಯಾಗುವುದು. ಸಂಗೀತಕ್ಕೆ ಭಾವಗಳನ್ನು ತೀವ್ರಗೊಳಿಸುವ ಸಾಮರ್ಥ್ಯವಿದೆ. ಸಾಹಿತ್ಯದೊಂದಿಗಿರುವ ಛಂದಸ್ಸು ಸಂಗೀತಕ್ಕೆ ಸಹಕರಿಸುತ್ತದೆ. ಹೀಗೆ ಭಾವಗೀತೆಗಳಲ್ಲಿ ಭಾವ ಪ್ರಧಾನತೆಯೊಂದಿಗೆ ಅಂತರ್ಗತವಾಗಿರುವ ಗೀತಗುಣವೂ ಮುನ್ನೆಲೆಗೆ ಬರುತ್ತದೆ.

ಕುವೆಂಪು ಅವರು ಕಾವ್ಯಸುಂದರಿಯನ್ನು "ಬುದ್ಧಿಭಾವಗಳ ವಿದ್ಯುದಾಲಿಂಗನದಿಂದ ಆವಿರ್ಭವಿಸಿರುವ ಪ್ರತಿಭಾ ರೂಪಸಿ" ಎಂದು ಕರೆದಿದ್ದಾರೆ. ಈ ಕಾವ್ಯ ಸುಂದರಿ ವಾಙ್ಮಯ ಶರೀರೆಯಾಗಿರುವುದರಿಂದ ಪದಗಳ ಬಳಕೆ ವಿವೇಚನಾಯುಕ್ತವಾಗಿರಬೇಕು. ಹೆಚ್ಚು ಹೆಚ್ಚು ಧ್ವನಿಗಳನ್ನು ಅದು ಸ್ಫುರಿಸುವಂತಿರಬೇಕು. ಇದನ್ನೇ ಪಾಶ್ಚಾತ್ಯ ಕಾವ್ಯಮೀಮಾಂಸಕಾರನೊಬ್ಬ ಬ್ಯಾಟರಿಯಲ್ಲಿ ಶಕ್ತಿ ತುಂಬಿದಂತೆ ಪದಗಳಲ್ಲಿ ಒಂದಕ್ಕಿಂತ ಹೆಚ್ಚು ಅರ್ಥಗಳು ತುಂಬಿ ಅದು ಚಾರ್ಜ್ ಆಗಿರಬೇಕು ಎನ್ನುತ್ತಾನೆ.

ಭಾವಗೀತೆಗಳಲ್ಲಿ ಅನೇಕ ವಿಧಗಳಿವೆ.

ಎಲಿಜಿ ಅಥವಾ ಶೋಕ ಗೀತೆ
ಸಾನೆಟ್ ಅಥವಾ ಸುನೀತ
ಓಡ್ ಅಥವಾ ಪ್ರಗಾಥ
ಹಾಡು
ಇಡಿಲ್ ಅಥವಾ ಕಿರುಚಿತ್ರ
ಸೀಸಪದ್ಯ
ಮುಕ್ತಕಗಳು
ವಚನಕವನಗಳು ಇತ್ಯಾದಿ.

ನಮ್ಮ ಕನ್ನಡಕ್ಕೆ ವಿಶಿಷ್ಟವಾದ ವಚನ ಸಾಹಿತ್ಯದಲ್ಲಿಯೂ ಭಾವಗೀತಾತ್ಮಕ ಎನಿಸಿಕೊಳ್ಳುವ ಹಲವಾರು ವಚನಗಳು ಇವೆ.

**"ಚಿಲಿಮಿಲಿ ಎಂದೋದುವ ಗಿಳಿಗಳಿರಾ**
**ನೀವು ಕಾಣಿರೇ ನೀವು ಕಾಣಿರೇ**
**ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ**

**ನೀವು ಕಾಣಿರೇ ನೀವು ಕಾಣಿರೇ**

**ಎನ್ನೊಡೆಯ ಚೆನ್ನ ಮಲ್ಲಿಕಾರ್ಜುನ ದೇವರ**

**ಕಂಡರೆ ಕರೆದು ತೋರಿರೇ"**

ಎಂದು ಪ್ರಶ್ನೆಗಳನ್ನು ಕೇಳುತ್ತಾ ಅಕ್ಕ ತನ್ನ ಚೆನ್ನನ ಬಗ್ಗೆ ಪ್ರಕೃತಿಯಲ್ಲಿ ವಿಚಾರಿಸುವುದು ಅತ್ಯಂತ ಕಾವ್ಯಾತ್ಮಕವಾದ ಒಂದು ಸನ್ನಿವೇಶ. ಸಾಹಿತ್ಯದೊಂದಿಗೆ ಶಾಸ್ತ್ರೀಯವಾದ ಸಂಗೀತ ಮೇಳಗೊಂಡು ಪಲ್ಲವಿ ಅನುಪಲ್ಲವಿಗಳು ಕೂಡಿ ರಚನೆಯಾಗಿರುವ ಹರಿದಾಸರ ಕೀರ್ತನೆಗಳನ್ನೂ ಭಾವಗೀತ ಪ್ರಕಾರಕ್ಕೆ ಸೇರಿಸಬಹುದು. ಅಲ್ಲದೆ ಕರ್ನಾಟಕ ಸಂಗೀತದ ರಾಗಸಹಿತವಾದ ತಾಳರಹಿತವಾದ ಉಗಾಬೋಗಗಳನ್ನೂ ಭಾವಗೀತಗಳೆಂದು ಕರೆಯಬಹುದು. ಉದಾಹರಣೆಗೆ ಪುರಂದರದಾಸರ ಈ ಉಗಾಭೋಗವನ್ನು ನೋಡಬಹುದು.

**'ತಂಬೂರಿ ಮೀಟಿದವ ಭವಾಬ್ಧಿ ದಾಟಿದವ**

**ಗೆಜ್ಜೆಯ ಕಟ್ಟಿದವ ಖಳರೆದೆ ಮೆಟ್ಟಿದವ**

**ಗಾಯನವ ಪಾಡಿದವ ಹರಿಮೂರ್ತಿ ನೋಡಿದವ...'**

ನಿಜಗುಣ ಶಿವಯೋಗಿಗಳು ಹಾಗೂ ಮುಪ್ಪಿನ ಷಡಕ್ಷರಿಗಳು ಹರಿದಾಸರಂತೆ ಸಂಗೀತ ಸಾಹಿತ್ಯಗಳನ್ನು ಸಮಾವೇಶಗೊಳಿಸಿದ ಭಾವಗೀತಕಾರರು. ಶಿವನ ನೃತ್ಯವನ್ನು ವರ್ಣಿಸುವ ಮುಪ್ಪಿನ ಷಡಕ್ಷರಿಯ ಒಂದು ಪದ್ಯ ನೋಡಿ.

**"ಧಿಮಿಕು ಧಿಮಿಕು ಧಿಮಿಕು ಧಿಮ್ಮಿ**

**ಧಿಮಿಕು ನಂದಿ ಕಾಯರುಗಳ**

**ಯಮಕ ಚಮಕ ಮೃದಂಗ ಭಜತಿ ನಾಟ್ಯಲೀಲನಂ**

**ಅಮಲ ವೀಣೆ ಸುಸ್ವರದಲಿ**

**ಗಮಪ ಧನಿಸ ರಿಸರಿ ಸರಿಸ**

**ಗಮಪ ಭಜತಿ ತುಂಬುರಾದಿ ನಾಟ್ಯಲೀಲನಂ"**

ಶಿವ ತನ್ನ ನೃತ್ಯದಲ್ಲಿ ಹೆಜ್ಜೆಯನ್ನು ಎತ್ತಿ ನೆಲಕ್ಕೆ ಇಡುವಂತೆ ರಚಿತವಾದ ಈ ಪದ್ಯ ರಾವಣ ರಚಿತ ಎನ್ನಲಾಗುವ ಶಿವತಾಂಡವ ಸ್ತೋತ್ರವನ್ನು ಹೋಲುತ್ತದೆ.

ಶಿವತಾಂಡವದ ಎರಡು ಸಾಲುಗಳನ್ನು ನೋಡೋಣ:

**"ಜಟಾಟವೀಗಲಜ್ಜಲಪ್ರವಾಹಪಾವಿತಸ್ತಲೇ**

**ಗಲೇವಲಂಬ್ಯ ಲಂಬಿತಾಂ ಭುಜಂಗತುಂಗಮಾಲಿಕಾಂ।**

**ಡಮಡ್ಡಮದ್ದಮಡ್ಡಮನ್ನಿನಾದವಡ್ಡಮರ್ವಯಂ**

**ಚಕಾರ ಚಂಡ ತಾಂಡವಂ ತನೋತುನಃಶಿವಃಶಿವಂ॥"**

ಇವೆಲ್ಲ ಅಕ್ಷರಗಳ ಮೂಲಕ ಕಟ್ಟಿಕೊಡುವ ಸುಂದರ ಚಿತ್ರಕಾವ್ಯಗಳು.

ಮುಪ್ಪಿನ ಷಡಕ್ಷರಿಗೆ ಶಿವತಾಂಡವ ಸ್ತೋತ್ರವೇ ಪ್ರೇರಣೆಯಾಗಿರಲೂ ಬಹುದು.

ಜನಪದ ಗೀತೆಗಳಂತೂ ನಮ್ಮ ನೆಲದ ಸಾರವನ್ನು ಹೀರಿ ಬೆಳೆದ ಆದಿಗೀತಗಳು.

**"ಯಾಕಳುವೆ ಎಲೆರಂಗ ಬೇಕಾದ್ದು ನಿನಗಿದೆ**

**ನಾಕೆಮ್ಮೆ ಕರೆದ ನೊರೆಹಾಲು। ಸಕ್ಕರೆ**

**ನೀ ಕೇಳಿದಾಗ ಕೊಡುವೆನು."**

'ಕಂದ' ಎನ್ನುವುದು ಕೆಲವು ಕಡೆ 'ರಂಗ' ಎಂದು ಬದಲಾಗಿದೆ. 'ನಿನಗೀವೆ'

ಎನ್ನುವುದು ಕೆಲವು ಕಡೆ 'ನಿನಗಿದೆ' ಎಂದಾಗಿದೆ. ಜನಪದ ಗೀತೆ ಪರಿಷ್ಕಾರಗೊಳ್ಳುತ್ತಾ ಸಾಗುವ ಒಂದು ಪ್ರಕಾರ. ಇಲ್ಲಿ ಪ್ರತಿಯೊಬ್ಬರಿಗೂ ತಮ್ಮ ಕ್ರಿಯಾಶೀಲತೆಯನ್ನು ತೋರಲು ಅವಕಾಶವಿದೆ. ಆದಿಪ್ರಾಸ ಕನ್ನಡಕ್ಕೆ ಸಹಜವಾದುದು. ಅಂಶಛಂದಸ್ಸು ಕನ್ನಡದ ಜಾಯಮಾನಕ್ಕೆ ಸಹಜವಾಗಿ ಹೊಂದಿಕೊಳ್ಳುವಂತಹುದು. ಸಹಜ ಭಾವವೊಂದು ಇಂತಹ ಸಹಜ ತಾಂತ್ರಿಕ ಅಂಶಗಳೊಂದಿಗೆ ಸೇರಿ ಸಹಜ ಭಾವಗೀತೆಯಾಗಿದೆ.

ಪ್ರಕೃತಿ ಗೀತೆಗಳು ಭಾವಗೀತೆ ಎಂಬ ಪ್ರಕಾರದೊಳಗೆ ಬರುವ ಒಂದು ವಿಭಾಗ. ನವೋದಯ ಕಾಲವು ಇಂತಹ ಅನೇಕ ಸುಂದರ ಪ್ರಕೃತಿ ಗೀತೆಗಳನ್ನು ನಮಗೆ ಕೊಟ್ಟಿದೆ. ಇದರ ಹಿಂದೆ ಇಂಗ್ಲಿಷ್ ರೊಮ್ಯಾಂಟಿಕ್ ಕಾವ್ಯದ ಪ್ರೇರಣೆ ಇದೆ.

**"ಹಸುರಾಗಸ ಹಸುರು ಮುಗಿಲು**
**ಹಸುರು ಗದ್ದೆಯಾ ಬಯಲು**
**ಹಸುರಿನ ಮಲೆ ಹಸುರು ಕಣಿವೆ**
**ಹಸುರು ಸಂಜೆಯೀ ಬಿಸಿಲು"**

ಪ್ರಕೃತಿ ಕವಿ ವರ್ಡ್ಸ್‌ವರ್ತನಿಂದ ಪ್ರೇರಣೆಗೊಂಡ ಕುವೆಂಪು ಅವರ ರಚನೆ ಇದು.

ಪ್ರಕೃತಿ ಗೀತೆಗಳಂತೆ ಪ್ರೇಮಗೀತೆಗಳನ್ನೂ ನವೋದಯ ಕಾಲವು ಹೇರಳವಾಗಿ ಕೊಟ್ಟಿದೆ.

**"ತಾರೆಗಳ ಮೀಟುವೆವು; ಚಂದಿರನ ದಾಟುವೆವು**
**ಒಲುಮೆಯೊಳಗೊಂದು ನಾವು**
**ನಮಗಿಲ್ಲ ನೋವು ಸಾವು"**

ಪ್ರಕೃತಿ ಹಾಗೂ ಗಂಡು ಹೆಣ್ಣುಗಳ ನಡುವಿನ ಪ್ರೇಮ ಭಾವಗೀತೆಗಳಿಗೆ ಒಳ್ಳೆಯ ಪ್ರೇರಣೆಯನ್ನು ನೀಡುತ್ತಾ ಬಂದಿರುವ ವಸ್ತುಗಳು.

ನಮ್ಮ ವಾಙ್ಮಯ ರಾಶಿಯಲ್ಲಿ ಹಿಂದೆ ಇದ್ದ ಪದ್ಯ, ಗದ್ಯಗಳ (ಗೀತ ಎಂಬ ಇನ್ನೊಂದು ಪ್ರಕಾರವೂ ಇದೆಯೆಂಬ ಸೂಕ್ಷ್ಮ ಅವಲೋಕನವೂ ಇದೆ) ನಡುವಣ ವ್ಯತ್ಯಾಸವು ಈಗ ಕಡಿಮೆಯಾಗಿದೆ. ಪಶ್ಚಿಮದ ಪ್ರೇರಣೆಯಿಂದಲೂ, ನಮ್ಮಲ್ಲಿ ಆದ ಕೆಲವು ಸಾಹಿತ್ಯಕ ಚಳುವಳಿಗಳಿಂದಲೂ ಈ ಬದಲಾವಣೆ ಘಟಿಸಿತು ಎನ್ನಬಹುದು. ಹಿಂದೆ ರಗಳೆ, ಷಟ್ಪದಿ, ತ್ರಿಪದಿ, ಸಾಂಗತ್ಯಾದಿಗಳಲ್ಲಿ ರಚನೆಗೊಳ್ಳುತ್ತಿದ್ದ ಕಾವ್ಯಗಳು ಹಾಡಲು ಅನುಕೂಲಕರವಾಗಿದ್ದವು. ಈಗ ಈ ಛಂದಸ್ಸುಗಳ ಬಳಕೆ ಅಪರೂಪವಾಗಿರುವುದು ಮಾತ್ರವಲ್ಲ ಇಂಥಾ ರಚನೆಗಳನ್ನು ಲಘುವಾಗಿ ಪರಿಗಣಿಸುವ ಮನಸ್ಥಿತಿಯೂ ಕನ್ನಡ ಸಾಹಿತ್ಯಲೋಕದಲ್ಲಿದೆ. ಇವೆಲ್ಲ ಕಾಲದ ಪರಿವರ್ತನೆಗಳು ಎಂದುಕೊಂಡರೂ ಗುಣಪತನವನ್ನು ಗುರುತಿಸದೆ ಇರಲು ಸಾಧ್ಯವಿಲ್ಲ. ಬರಿಯ ಭಾವ ಮಾತ್ರ ಇದ್ದು ಗೀತ ಇಲ್ಲದಿರುವ ಇವುಗಳನ್ನು ಕವನಗಳೆಂದು ಅಥವಾ ಕವಿತೆಗಳೆಂದು ಕರೆಯುವುದು ಯಾಕೆ? ಉತ್ತಮ ಗದ್ಯಗಳೆಂದೇ ಹೇಳಬಹುದಲ್ಲವೇ? ಎಂಬ ಪ್ರಶ್ನೆಯೊಂದು ನಮ್ಮೆಲ್ಲರ ಎದುರು ಬಂದು ನಿಲ್ಲುತ್ತದೆ.

**'ಇದ್ದಿಲಂಗಡಿಯಲ್ಲಿ ಕೆಲಸದ ಪೆಂಟಯ್ಯನಿಗೆ**
**ಇದ್ದುದು ಒಂದೇ ಒಂದು ಅಂಗಿ ಗಿರಾಕಿಗಳ ಮನೆಗೆ**
**ಇದ್ದಿಲು ಸಪ್ಲೈ ಮಾಡುವಾಗಲೂ ರಾತ್ರಿ'**

ಪ್ರಸಿದ್ಧ ಕವಿ ತಿರುಮಲೇಶ್ವರರ 'ಪೆಂಟಯ್ಯನ ಅಂಗಿ' ಎಂಬ ಕವನಧ ಆರಂಭಧ ಮೂರು ಸಾಲುಗಳಿವು. ಆದಿ ಪ್ರಾಸ ಇದೆಯಾದರೂ ಅದನ್ನು ಸಾಧಿಸುವಲ್ಲಿ ಸಾಲುಗಳ

ಅಸಮಾನತೆಯುಂಟಾಗಿದೆ. ಇಲ್ಲಿ ಬೇರೆ ಯಾವುದೇ ಛಂದೋ ನಿಯಮಗಳು ಪಾಲನೆಯಾಗಿಲ್ಲವಾದ್ದರಿಂದ ಇದನ್ನು ಹಾಡಲು ಸಾಧ್ಯವಿಲ್ಲ. ಆದರೂ ಸಾಲುಗಳಲ್ಲಿ ರಚನೆಗೊಂಡದ್ದರಿಂದ ಇದನ್ನು ಕವನವೆಂದು, ನವ್ಯಕಾವ್ಯವೆಂದು, ಸಂಕೇತರೂಪಿ ಕಾವ್ಯವೆಂದು ಇಂಥವುಗಳನ್ನು ಕರೆಯಬಹುದು ಎನ್ನುವವರಿದ್ದಾರೆ.

**'ಇದು ನಿಮ್ಮ**

**ಕಿವಿಗೆ ಪದ್ಯದಂತೆ ಕೇಳಿಬರದಿದ್ದರೂ**

**ಅಚ್ಚಾದಾಗ**

**ನಿಮ್ಮ ಕಣ್ಣಿಗೆ ಪದ್ಯದಂತೆ ಕಾಣುತ್ತದೆ'**

ಎಂಬ ಜಿ.ಪಿ.ರಾಜರತ್ನಂ ಅವರ ಸ್ವತಂತ್ರ ಛಂದೋರೂಪಗಳ ಬಗೆಗಿನ ಹೇಳಿಕೆಯನ್ನು ಗಮನಿಸಬಹುದು.

'ಕೊಡದಿರು ಶರಧಿಗೆ ಷಟ್ಪದಿಯ ದೀಕ್ಷೆಯನು' ಎಂದ ವಿ.ಕೃ. ಗೋಕಾಕರು 'ಉಕ್ಕಲಿ ಚಿಮ್ಮಲಿ ಸಮುದ್ರದ ಸ್ವಾತಂತ್ರ್ಯ' ಎನ್ನುತ್ತಾ ಮುಂದಿನ ಕಾವ್ಯದ ಹಾದಿ ಹೇಗಿರಬೇಕು ಎಂಬುದನ್ನು ತಮ್ಮ 'ಪ್ರತಿಜ್ಞೆ' ಕವನದಲ್ಲಿ ಸ್ಪಷ್ಟಪಡಿಸಿದ್ದರು.

ಬೇಂದ್ರೆಯವರೇ 'ಅನುಭಾವಿ ಗೀತೆಗಳು' ಎಂದು ಕರೆದುಕೊಂಡಿರುವ 'ಏಲಾಗೀತೆ'ಯ ಕೆಲವು ಹಂತಿಗಳನ್ನು ನೋಡೋಣ.

**'ಏಲಾವನ ಲವಲೀಬನ ಲವಂಗ ಬನಗಳಲೀ**

**ನಾಗಲತಾ ಸಂಕುಲ ಬನವಾಸಿಯ ಜನಗಳಲೀ**

**ಲೀಲಾಂದೋಲಿತ ದೋಲಾ ಲಲನಾಮಣಿಗಳಲೀ...'**

'ಲವಂಗ ಬನಗಳಲೀ' ಎಂಬುದು ಕಿವಿಗೆ ಬಿದ್ದಾಗ ಸಂಸ್ಕೃತ ಕವಿ ಜಯದೇವ ನೆನಪಿಗೆ ಬರುತ್ತಾನೆ. ಈತನ 'ಗೀತಗೋವಿಂದ' ಎಷ್ಟೋ ಭಾವಗೀತೆಗಳಿಗೆ ಪ್ರೇರಣೆಕೊಟ್ಟಂತಹ ಕೃತಿ. ಮೇಲಿನ ಸಾಲುಗಳಲ್ಲಿ 'ಲ'ಕಾರದ ಪುನರಾವರ್ತನೆಯಿಂದ ನಾದ ಮಾಧುರ್ಯ ಸೃಷ್ಟಿಯಾಗಿದೆಯಾದರೂ ಭಾವ ಸಂಚಾರವು ಇಲ್ಲಿ ಅಗ್ರಾಹ್ಯವಾಗಿಯೇ ಉಳಿದುಬಿಡುತ್ತದೆ. 'ಅನುಭಾವಿ ಗೀತೆ' ಎಂದು ಕವಿಯೇ ಹೇಳಿಕೊಂಡಿರುವುದರಿಂದ ಕವಿಗಾದ ಸೂಕ್ಷ್ಮ ದರ್ಶನ ಯಾ ಅನುಭಾವ ಓದುಗರಾದ ನಮಗೆ ದಕ್ಕದೆ ಇದ್ದರೆ ಆಶ್ಚರ್ಯಪಡಬೇಕಿಲ್ಲ.

'ಇಷ್ಟು ಸಾಕೆಂದಿದ್ದೆಯಲ್ಲೋ ಇನ್ನು ಏನಿದು ಬೇಸರ?' ಎಂದು ಪ್ರಶ್ನಿಸುತ್ತಾ ಕವಿ ಗೋಪಾಲಕೃಷ್ಣ ಅಡಿಗರು ನಾವೆಲ್ಲ ಯಾವುದೋ ಮೋಹದ ಮುರಲಿಯ ದನಿಯಿಂದ ಪ್ರೇರಣೆಗೊಂಡು ಇಲ್ಲದ್ದನ್ನು ದಕ್ಕಿಸಿಕೊಳ್ಳುವುದಕ್ಕಾಗಿ ಹಂಬಲಿಸುತ್ತಿದ್ದೇವೆ ಎಂಬ ಭಾವವನ್ನು ತಮ್ಮ ಪ್ರಸಿದ್ಧ 'ಮೋಹನ ಮುರಲಿ'ಯಲ್ಲಿ ತುಂಬಿದ್ದಾರೆ. ಇದು ಅವರ ಹೆಸರನ್ನು ಚಿರಸ್ಥಾಯಿಯಾಗಿಸಿದ ಸುಂದರ ಕಲಾಸೃಷ್ಟಿ. ಅಂತ್ಯಪ್ರಾಸದೊಂದಿಗೆ ಮೂರು ನಾಲ್ಕು ಮಾತ್ರೆಗಳ ಮಿಶ್ರಲಯ ಕುಣಿಕುಣಿಯುತ್ತಾ ಸಾಗಿದರೂ ಪದಗಳು ನಮ್ಮೊಳಗೆ ರವಾನಿಸುವ ವಿಷಾದದ ಭಾವವೊಂದು ನಮ್ಮನ್ನು ಸ್ತಬ್ಧಗೊಳಿಸುತ್ತದೆ. 'ಕರೆಯಿತು' 'ಸೆಳೆಯಿತು' ಎಂಬ ನಾಲ್ಕು ಲಘುಗಳ ನಾಲ್ಕನೇ ಗಣ ಪಲ್ಲವಿಗೊಂದು ಚಾರುಮೆರುಗನ್ನು ತಂದಿದೆ. ಮಣ್ಣಿನ ಕಣ್ಣು, ಮಿಂಚಿನ ಕೈ, ಸುಪ್ತ ಸಾಗರ, ಮೊಳೆಯದ ಅಲೆ ಮುಂತಾದ ಪದಗಳು ಈ ಪದ್ಯದ ಮೂಲ ಆಶಯವನ್ನು ಪಸರಿಸುವಲ್ಲಿ ಸಹಕರಿಸಿವೆ.

ಕೃಷ್ಣ ರಾಧೆಯರ ದಿವ್ಯಪ್ರೇಮದ ಜೊತೆಗೆ ಉದ್ದೀಪನ ಭಾವಗಳಾಗಿ ಬರುವ

ಯಮುನೆ, ಬೃಂದಾವನ, ಮುರಳಿ, ಗೋಪಗೋಪಿಕೆಯರು, ಗೋವುಗಳು, ಹಾಲುಮೊಸರು... ಇವೆಲ್ಲವು ಅಸಂಖ್ಯಾತ ಭಾವಗೀತೆಗಳಿಗೆ ವಸ್ತುವಾಗಿವೆ. ಜಯದೇವನ 'ಗೀತಗೋವಿಂದ' ಇವುಗಳಿಗೆ ಪ್ರೇರಣೆಯನ್ನೊದಗಿಸಿತು ಎಂದು ಹಿಂದೆ ಹೇಳಿರುವಂತೆ ಕನ್ನಡದಲ್ಲೂ ಇದು ಅನೇಕ ಗೀತಗಳ ಹುಟ್ಟಿಗೆ ಕಾರಣವಾಯ್ತು.

**'ಹಾಲ ನಿವೇದಿಸಿ ಆತ್ಮವನರ್ಪಿಸಿ**
**ಮುಕ್ತಿಯ ಹೊಂದುವ ಸೌಮ್ಯಮುಖಿ**
**ಹಾಲನು ಮಾರಿ ಹರಿಯನು ಕೊಳ್ಳುವ**
**ನಾವೇ ಧನ್ಯರು ಕಮಲಮುಖಿ'**

ಇಂಥಾ ಕವನಗಳು ಗಾನಕ್ಕೆ ಮಾತ್ರವಲ್ಲದೆ ನೃತ್ಯಕ್ಕೆ, ಶಿಲ್ಪಕ್ಕೆ, ಚಿತ್ರಕ್ಕೆ ಎಲ್ಲದಕ್ಕೂ ಒದಗಿ ಬಂದು ನಮ್ಮ ಕಲಾ ಸಂಸ್ಕೃತಿಯನ್ನು ಔನ್ನತ್ಯಕ್ಕೇರಿಸಿತು. ಕೃಷ್ಣನ ಜೊತೆಗಿನ ಆಟಗಳೆಲ್ಲ ಅಂತ್ಯದಲ್ಲಿ ಮುಕ್ತಿಯ ಕಡೆಗೆ ಹೊರಳಿಕೊಳ್ಳುವುದು ಈ ಕವನಗಳ ವೈಶಿಷ್ಟ್ಯ. ಕೃಷ್ಣನಿಲ್ಲದ ನಮ್ಮ ಕಲಾ ಜಗತಿಯನ್ನು ಊಹಿಸಿಕೊಳ್ಳುವುದೂ ಅಸಾಧ್ಯ ಎಂದು ಕಲಾ ರಸಿಕರು ಹೇಳಿರುವುದು ಇದೇ ಕಾರಣಕ್ಕೆ.

ಚಕೋರಗಳು ಬೆಳದಿಂಗಳ ಹಾಲನ್ನು ಕುಡಿದು ಬದುಕುವವು ಎಂಬುದು ಪ್ರಾಚೀನ ಕವಿಸಮಯ. ಕನ್ನಡದಲ್ಲಿ ಚಕೋರಗಳನ್ನು ಜೊನ್ನವಕ್ಕಿಗಳು ಎಂದು ಕರೆದಿದ್ದಾರೆ. ಈ ಕಲ್ಪನೆಯೇ ಅತ್ಯಂತ ಮಧುರವಾದುದು. ಇಂಥಾ ಚಕೋರಗಳಲ್ಲಿ ಹೆಣ್ಣು ಚಕೋರಿಯನ್ನು (ಪ್ರೇಯಸಿ) ಚಂದ್ರಮಂಚಕ್ಕೆ ಆಹ್ವಾನಿಸುವುದು ಕವಿ ಕಲ್ಪನೆಯ ಉತ್ತುಂಗ ಶೃಂಗವಾಗಿದೆ.

**'... ಕ್ಷೀರಸಾಗರದಲ್ಲಿ ತೇಲುವ**
**ಬಾಗುಚಂದ್ರನ ತೂಗು ಮಂಚಕೆ**
**ಬಾ, ಚಕೋರಿ ಬಾ...'**

ಭಾವಗೀತೆಯೊಂದು ಇಂಥಾ ವಸ್ತುವನ್ನೂ ಶೀಲವಾಗಿಯೇ ನಿಭಾಯಿಸಬಲ್ಲುದು. ಹೀಗೆ ನಿಭಾಯಿಸುವಲ್ಲಿ ಭಾಷೆ ಎಷ್ಟು ಸಹಕರಿಸುತ್ತದೆ ಎಂಬುವುದನ್ನು ಇಲ್ಲಿ ಕಾಣಬಹುದು. ಮೂರು ನಾಲ್ಕರ ಲಯ ಭಾವಗೀತೆಗಳಿಗೆ ಒಪ್ಪವಾಗಿ ಒಪ್ಪುತ್ತದೆ. ಪ್ರಾಚೀನ ಕವಿಗಳು ತಮ್ಮ ಕಾವ್ಯಗಳಲ್ಲಿ ಶೃಂಗಾರವನ್ನು ನಿರ್ವಹಿಸಿದ ರೀತಿಯೂ ಇಂಥಾ ಗೀತೆಗಳಿಗೆ ಪ್ರೇರಣೆಯನ್ನೊದಗಿಸಿರಬಹುದು.

ಭಾವಗೀತೆಗಳು ಮೊದಲು ಕವಿಯ ಭಾವದಲ್ಲಿ ಜನ್ಮ ತಳೆದು ನಂತರ ಅಪ್ರಯತ್ನವಾಗಿ ಅದು ಪದ ಪ್ರತಿಮೆಗಳೊಂದಿಗೆ ಮೂಡಿ ಬಂದಾಗ ಅದರ ಶಕ್ತಿ ಸಂಪೂರ್ಣವಾಗಿ ಪ್ರಕಟವಾಗುತ್ತದೆ. ಇದು ತನ್ನ ನಾದಗತಿಯಿಂದ ಅನಕ್ಷರಸ್ತರನ್ನೂ ಕಾವ್ಯಾಸಕ್ತರನ್ನಾಗಿಸುವ ಶಕ್ತಿಯನ್ನು ಹೊಂದಿರುವುದರಿಂದ ಉಳಿದೆಲ್ಲ ಸಾಹಿತ್ಯ ಪ್ರಕಾರಗಳಿಗಿಂತ ಹೆಚ್ಚು ಚೈತನ್ಯಶೀಲ ಹಾಗೂ ವಿಶಿಷ್ಟವಾದುದು ಎನ್ನಬಹುದು. ಶಾಸ್ತ್ರೀಯ ಸಂಗೀತ ಕೃತಿಗಳ ಬಗ್ಗೆ ಹೇಳುವಾಗ ವಿದ್ವಾಂಸರೊಬ್ಬರು 'ಸಂಗೀತದ ಮನೆಯಲ್ಲಿ ಸಾಹಿತ್ಯ ಅತಿಥಿಯಂತೆ' ಎಂದ ಮಾತನ್ನು ಭಾವಗೀತೆಗೆ ಅನ್ವಯಿಸುವುದಾದರೆ, ಒಂದು ಕವಿತೆಯು ಒಳ್ಳೆಯ ಭಾವಗೀತೆ ಆಗಬೇಕಾದರೆ 'ಸಾಹಿತ್ಯದ ಮನೆಯಲ್ಲಿ ಸಂಗೀತ ಅತಿಥಿಯಂತೆ' ಎನ್ನಬಹುದು.

❖❖❖

# ಶಿಶಿಲರ 'ಬೆಳಕಿನೆಡೆಗೆ' ಕಥಾಸಂಕಲನದ ಒಂದು ನೋಟ

**ಜಿ. ಶೀಲಾವತಿ**
ಸಂಶೋಧನಾ ವಿದ್ಯಾರ್ಥಿನಿ
ಹಾ.ಮಾ.ನಾ ಸಂಶೋಧನಾ ಕೇಂದ್ರ,
ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಮಹಾವಿದ್ಯಾಲಯ ಉಜಿರೆ

ಪ್ರಭಾಕರ ಪ್ರಭಾಕರ ಶಿಶಿಲರು ಪ್ರಾಧ್ಯಾಪಕರಾಗಿ, ಕಥೆ ಕಾದಂಬರಿಗಳ ಲೇಖಕರಾಗಿ ಮತ್ತು ಅರ್ಥಶಾಸ್ತ್ರ ವಿಷಯಕ್ಕೆ ಸಂಬಂಧಿಸಿದ ಪಠ್ಯಪುಸ್ತಕಗಳ ಕರ್ತೃವಾಗಿ ನಾಡಿನೆಲ್ಲೆಡೆ ಪ್ರಸಿದ್ಧರಾದವರು.

ಈ ಲೇಖನದಲ್ಲಿ ಶಿಶಿಲರ 'ಬೆಳಕಿನೆಡೆಗೆ' ಎನ್ನುವ ಹೆಸರಿನ ಕಥಾಸಂಕಲನದ ಕಥೆಗಳನ್ನು ಸಮೀಕ್ಷಿಸಲಾಗಿದೆ. ಇಲ್ಲಿರುವ ಎಲ್ಲ ಕಥೆಗಳಿಗೂ ಧರ್ಮದ ಲೇಪನವಿದೆ. ಇಲ್ಲಿರುವ ಹತ್ತು ಕಥೆಗಳು ಮುಸ್ಲಿಂ ಬದುಕಿಗೆ ಸಂಬಂಧಿಸಿದ ಕಥೆಗಳು ಆಗಿರುವುದು ಒಂದು ವಿಶೇಷ. ಮುಸ್ಲಿಮೇತರರು ಒಂದು ಮುಸ್ಲಿಂ ಬದುಕಿನ ಕಥಾಸಂಕಲನವನ್ನು ಹೊರತರುವುದು ಈಗಿನ ರಾಜಕೀಯ ಸಾಮಾಜಿಕ ಸ್ಥಿತಿಯಲ್ಲಿ ಒಂದು ಅಪೂರ್ವ ವಿದ್ಯಮಾನ.

ಕಥೆಗಾರ ಶಿಶಿಲರು 'ಬೆಳಕಿನೆಡೆಗೆ' ಕಥಾಸಂಕಲನ ಹುಟ್ಟಿನ ಬಗ್ಗೆ ಹೀಗೆ ಹೇಳುತ್ತಾರೆ. ತಾಲಿಬಾನಿಗಳು ತಮ್ಮ ಪೈಶಾಚಿಕ ಕೃತ್ಯಗಳಿಂದ ವಿಶ್ವವನ್ನು ತಲ್ಲಣಗೊಳಿಸಿದ್ದಾರೆ. ದೇವೋ ದುರ್ಬಲ ಪಾತಕ: ಎಂಬ ಮಾತು ಅಫ್ಘಾನಿಸ್ತಾನ, ಸೋಮಲಿಯ ಮತ್ತು ನೈಜೀರಿಯಾದಂತಹ ದೇಶಗಳಲ್ಲಿ ನಿಜವಾಗಿದೆ. ಪಾತಕಿ ತಾಲಿಬಾನಿಗಳನ್ನು ಕೆಲವು ಸರ್ವಾಧಿಕಾರಿ ರಾಷ್ಟ್ರಗಳು ಬೆಂಬಲಿಸುತ್ತಿರುವುದು ವಿಶ್ವ ತಲ್ಲಣದಿಂದ ನೋಡುತ್ತಿದೆ. ತಲ್ಲಣವೇ ಸಾಹಿತ್ಯ ಸೃಷ್ಟಿಗೆ ಕಾರಣವಾಗುವ ಕಾಲದಲ್ಲಿ ನಾವಿದ್ದೇವೆ.

ನನ್ನ ಕಥೆಗಳು ಹುಟ್ಟಿದ್ದು ಕೂಡ ತಲ್ಲಣದಲ್ಲೇ. ಕ್ಷುಲ್ಲಕ ಕಾರಣಕ್ಕಾಗಿ ನಮ್ಮ ಊರು ಹೊತ್ತಿ ಉರಿದುದರ ಪರಿಣಾಮವಾಗಿ 'ಸೇತುವೆ' ನಿರ್ಮಾಣವಾಯಿತು. ಶಾಬಾನೋ ಪ್ರಕರಣ 'ಬೆಳಕಿನೆಡೆಗೆ' ಬರೆಯಿಸಿತು. ನಮ್ಮೂರಿನ ಏಕೈಕ ಮುಸ್ಲಿಂ ಕುಟುಂಬದ ತಲ್ಲಣದಲ್ಲಿ 'ಒಂಟಿ ಬ್ಯಾರಿಯು ಅವಭೃತ ಉತ್ಸವವೂ' ಕಥೆ ಬರೆದೆ. ಕೋಮು ಆಧಾರದಲ್ಲಿ ವೋಟಿಗಾಗಿ ಸಮಾಜ ಧ್ರುವೀಕರಣಕ್ಕೆ ರಾಜಕೀಯ ಶಕ್ತಿಗಳು ಪಡುವ ಪ್ರಯತ್ನ 'ಹುಲಿ ಹುಸ್ಸೇನ್' ಕಥೆ ಹೊರಬರುವಂತೆ ಮಾಡಿತ್ತು. ರಾಜೀವ್ ಗಾಂಧಿಯ ಕಗ್ಗೊಲೆ 'ಗುಜರಿ ಅದ್ದಿಲಿಚ್ಚನ ಜಿಹಾದಿ'ಯನ್ನು ಬರೆಯಿತು. ತರವಾಡುಗಳು ಮೂಡನಂಬಿಕೆಯ ತವರು ಆಗುತ್ತಿರುವ ದುರಂತ ವಾಸ್ತವಕ್ಕೆ 'ಪ್ರೇತಾತ್ಮ ಮೋಕ್ಷಾರ್ಥ' ಸಾಕ್ಷ್ಯ ನುಡಿಯುತ್ತದೆ. ಪ್ರಾಣಿ ಮತ್ತು ಮಾನವನ ಸುಮಧುರ ಬಾಂಧವ್ಯವನ್ನು 'ಆಲಿಮಾಳ ಆಡು' ಎತ್ತಿಹಿಡಿಯುತ್ತದೆ. ಕೊರೊನಾ ಕಾಲದ ಭ್ರಷ್ಟತೆ ಮತ್ತು ಕ್ರೌರ್ಯದ ಪರಿಣಾಮವಾಗಿ 'ಧರೆ ಹತ್ತಿ ಉರಿದೊಡೆ' ಹೊರಬಂತು. ಸಮನ್ವಯದ ಬದುಕಿಗೆ ತ್ಯಾಗದ ಅಗತ್ಯವಿದೆ ಎಂದು 'ಧರ್ಮ ಕರ್ಮವನುಳಿದು' ಕಥೆ ಹೇಳುತ್ತದೆ.

ರಾಜಕಾರಣವು ಮಾನವೀಯತೆಯನ್ನು ಹೇಗೆ ಮರೆಸುತ್ತದೆ ಎನ್ನುವುದಕ್ಕೆ 'ಧರ್ಮೋ ರಕ್ಷತಿ' ಉತ್ತಮ ಉದಾಹರಣೆಯಾಗಬಲ್ಲದು.

ಈ ಕಥಾ ಸಂಕಲನ ಮೊದಲ ಕಥೆ ಸೇತುವೆ ಧಾರ್ಮಿಕ ಸಂಪ್ರದಾಯವನ್ನು ಮೀರಿ ನಿಂತ ಮಾನವೀಯತೆಯ ಆಶಯವನ್ನು ಪ್ರತಿಪಾದಿಸುತ್ತದೆ. ಕ್ಷುಲ್ಲಕ ಕಾರಣದಿಂದ ಉಂಟಾದ ಗಲಭೆ ಕೋಮುಗಲಭೆಯಾಗಿ ಎರಡು ಊರು ಸುಟ್ಟುಹೋಯಿತು. ಗಲಭೆಯ ದಿನ ನೀರುಳ್ಳಿ ತರಲೆಂದು ಹೋದ ಹೆಣ್ಣೊಬ್ಬಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆದಾಗ ಅಲ್ಲಿಗೆ ಬಂದ ಮೊಯಿನುದ್ದಿನ್ ಎಂಬಾತ ರಕ್ಷಿಸಿ ಅವಳ ಮನೆಗೆ ಕರೆತಂದು ಬಿಡುತ್ತಾನೆ. ಗಂಡನಿಂದ ತಿರಸ್ಕೃತಗೊಂಡ ಅವಳು 'ನೀನು ನನ್ನ ಗಂಡನಲ್ಲದಿದ್ದರೆ ನಾನು ನಿನ್ನ ಹೆಂಡತಿಯು ಅಲ್ಲ. ತೆಗೆದುಕೋ ನೀನು ಕಟ್ಟಿದ್ದನ್ನು ಎಂದು ಮಂಗಳಸೂತ್ರವನ್ನು ಕಿತ್ತು ಅವನ ಮುಖಕ್ಕೆ ಎಸೆದು ಥೂ... ಎಂದು ಕ್ಯಾಕರಿಸಿ ಉಗುಳಿ ಉನ್ಮಾದಕ್ಕೆ ಒಳಗಾದವಳಂತೆ ಓಡಿ ಕರಾಳ ರಾತ್ರಿಯ ಕಪ್ಪು ಕತ್ತಲಲ್ಲಿ ಕರಗಿಹೋದಳು.'(ಪು.ಸಂ.4) ಇಲ್ಲಿ ಸ್ತ್ರೀ ಬಂಡೇಳುವುದನ್ನು ಬಂಡಾಯ ಕಥೆಗಾರರಾದ ಶಿಶಿಲರು ನಿರೂಪಿಸಿದ್ದಾರೆ.

ಗಂಡನಿಂದ ತಿರಸ್ಕೃತರಾದ ಅವಳು ಹೊಳೆಗೆ ಹಾರಿದಾಗ ಮೊಯಿನುದ್ದೀನ್ ರಕ್ಷಿಸುತ್ತಾನೆ. ಬದುಕಿಸಿದವರೇ ನನಗೊಂದು ಬದುಕು ಕೊಡಿ ಎಂದು ಆಕೆ ಕಣ್ಣೀರಿಟ್ಟಾಗ ಕರೆದುಕೊಂಡು ಹೋಗಿ ಮದುವೆಯಾದ ಪರಿಣಾಮ ರೇಷ್ಮಾ ಹುಟ್ಟಿದಳು. ರೇಷ್ಮಾಳಿಗೂ ಈ ಸಂಗತಿ ತಿಳಿದಿರಲಿಲ್ಲ. ಕಥೆ ಬರೆಯಲು ಹೊಸ ವಸ್ತು ಹುಡುಕಿಕೊಂಡು ಬಂದ ಸದಾಶಿವ ರಾವ್ ಕಥೆಗೊಂದು ಅಂತ್ಯ ಹುಡುಕುತ್ತಾ ಮೊಯಿನುದ್ದಿನನ ಬಳಿಗೆ ಬಂದಾಗ ತಿರಸ್ಕೃತಗೊಂಡವಳ ಗಂಡ ಆತನೆಂದು ತಿಳಿಯುತ್ತದೆ.

ಮುಸ್ಲಿಂ ಕುಟುಂಬದಲ್ಲಿ ತಲಾಕ್ ಪದ್ಧತಿಯಿಂದಾಗಿ ಸ್ತ್ರೀಯರು ಅನುಭವಿಸುವ ನೋವು ಸಂಕಷ್ಟವನ್ನು 'ಬೆಳಕಿನೆಡೆಗೆ' ಕಥೆ ನಿರೂಪಿಸುತ್ತದೆ. ಮುಸ್ಲಿಂ ಸಮಾಜದ ಸ್ತ್ರೀ ಶೋಷಣೆಯ ವಸ್ತು 'ಬೆಳಕಿನೆಡೆಗೆ' ಕಥೆಯಾಗಿದೆ' ಎನ್ನುತ್ತಾರೆ ಸುಂದರ ಕೇನಾಜೆಯವರು. (ಸಾಹಿತಿ ಶಿಶಿಲ; 2013; ಪುಟ ಸಂಖ್ಯೆ 23). ಮೌಲವಿಯೊಬ್ಬರು ತಮ್ಮ ಸಮಾಜದ ವೃದ್ಧ ಮಹಿಳೆ ಶಬಾನಳಿಗೆ ಸಮಾಜದೊಂದಿಗೆ ಬದುಕಬೇಕಾದರೆ ಶರಿಯತ್‌ನ ನಿಯಮಗಳನ್ನು ಅನುಸರಿಸಬೇಕು ಎಂದು ಬುದ್ಧಿವಾದ ಹೇಳಿ ತಲಾಕ್ ನೀಡಿದ ಗಂಡ ಮಹಮದ್‌ನ ವಿರುದ್ಧ ಹಾಕಿದ ಕೇಸನ್ನು ವಾಪಾಸು ತೆಗೆದುಕೊಳ್ಳುವಂತೆ ಮನವೊಲಿಸುತ್ತಾನೆ. ಆದರೆ ಮಗಳು ದಿಲ್ಶಾದ್ ತಲಾಕ್ ನೀಡಿದ ತನ್ನ ಗಂಡ ಇಮ್ತಿಯಾಜ್‌ನ ವಿರುದ್ಧ ಕೇಸ್ ಹಾಕಿರುವುದು ತಂದೆಯನ್ನು ಸಂಕಷ್ಟಕ್ಕೀಡು ಮಾಡುತ್ತದೆ. ವಿದ್ಯಾವಂತೆ, ಶಿಕ್ಷಕಿಯಾದ ದಿಲ್ಶಾದ್ "ಇಮ್ತಿನಾಜ್ ನಂತವನೊಡನೆ ಬದುಕುವುದಕ್ಕಿಂತ ಬೇರಾಗುವುದೇ ಮೇಲು. ನನಗೇನು ಹೆದರಿಕೆಯಿಲ್ಲ ಅಬ್ಬಾ ಜಾನ್. ನನ್ನ ಇಷ್ಟ ಪ್ರಕಾರ ಓದಿಸಿದ್ದೀರಿ. ನನ್ನ ಇಷ್ಟದ ಕೆಲಸವೂ ಇದೆ. ಬದುಕಲಿಕ್ಕೆ ನಾನೇನು ಕಷ್ಟಪಡಬೇಕಾಗಿಲ್ಲ."(ಪುಟ 13) ಎನ್ನುವುದು ಆರ್ಥಿಕವಾಗಿ ಸಬಲಗೊಂಡ ದಿಲ್ಶಾದಳ ಮಾತು. ಆದರೆ ಆರ್ಥಿಕವಾಗಿ ಸ್ವತಂತ್ರಳಲ್ಲದ ಶಬಾನಾ ಧರ್ಮದ ಹೆಸರಿನಲ್ಲಿ ನಡೆಯುವ ಅನ್ಯಾಯಕ್ಕೆ ಒಳಗಾಗುವ ಚಿತ್ರಣವನ್ನು ಕಥೆ ನಿರೂಪಿಸುತ್ತದೆ.

ಮುಸಲ್ಮಾನರೇ ಇರದಿದ್ದ ಕಪಿಲಳ್ಳಿ ಎಂಬ ಊರೊಂದರಲ್ಲಿ ಒಂಟಿ ಬ್ಯಾರಿಯೊಬ್ಬ ನೆಲೆ ನಿಂತು ಊರಿನವರ ಮನಗೆದ್ದು ಊರವರಲ್ಲೊಬ್ಬನಾಗಿ ಬೆರೆತು

ಬಾಳಿದ ಕಥೆ 'ಒಂಟಿ ಬ್ಯಾರಿಯು ಅವಭೃತ ಉತ್ಸವವೂ'. ಹಿಂದೂ-ಮುಸ್ಲಿಮ್ ಸಾಮರಸ್ಯವನ್ನು ಒಡಮೂಡಿಸುವ ಕಥೆಯಿದು. ಹಕ್ಕಿಯ ಬರಗಾಲದ ಸಂದರ್ಭದಲ್ಲಿ ರಾಜಂದರಿ (ಬಿದಿರಕ್ಕಿ) ಯನ್ನು ಒಂಟಿ ಬ್ಯಾರಿಯ ಹೆಂಡತಿ ಉಮ್ಮ ತಂದು ಕಲ್ತಪ್ಪ ಮಾಡಿಕೊಡುತ್ತಿದ್ದು, 'ಓಂ ಶ್ರೀ ಕಪಿಲೇಶ್ವರ ಭವನ ಕಪಿಲಳ್ಳಿ' ಎಂದು ಹಿಂದುಗಳ ಮಧ್ಯದಲ್ಲಿ ಹಿಂದೂ ಹೆಸರನ್ನು ಬೋರ್ಡ್ ಹಾಕಿದ್ದು, ಅವಭೃತಕ್ಕೆಂದು ಕಪಿಲೇಶ್ವರ ಉತ್ಸವಮೂರ್ತಿ ಪಟ್ಟಣಕ್ಕೆ ಸವಾರಿ ಹೊರಟಾಗ ಒಂಟಿ ಬ್ಯಾರಿ ಸ್ಟೂಲೊಂದರಲ್ಲಿ ಕಾಯಿ-ಹಣ್ಣು, ಆರತಿ, ತಟ್ಟೆ, ಎಣ್ಣೆ, ಬತ್ತಿ, ಕರ್ಪೂರ, ಅಗರಬತ್ತಿ ಇಟ್ಟು 'ಈ ದೇವರ ಮುಂದೆ ನಿಂತು ಸತ್ಯ ಹೇಳುತ್ತಿದ್ದೇನೆ ಜಾತ್ರೆ ಶುರುವಾದಂದಿನಿಂದ ನನ್ನ ಹೋಟೆಲಲ್ಲಿ ಕೋಳಿ-ಮೀನು ಮಾಡಿಲ್ಲ. ಇಂದು ಮನೆಗೆ, ಅಂಗಳಕ್ಕೆ ಸೆಗಣಿ ಸಾರಿಸಿ ಈಗೊಮ್ಮೆ ತಪಸ್ವಿನಿಯಲ್ಲಿ ಮಿಂದು ಶುಚಿಯಾಗಿದ್ದೇನೆ. ಈ ಊರು ನನಗೆ ಅನ್ನ ಕಂಡುಕೊಳ್ಳುವ ದಾರಿ ತೋರಿಸಿದೆ. ಅದಕ್ಕೆ ಕಪಿಲೇಶ್ವರನಿಗೆ ಇದು ನಮ್ಮ ಕೃತಜ್ಞತೆ. ಬೇರೆ ಮಾತಾಡದೆ ನಮ್ಮ ಕಾಣಿಕೆಯನ್ನು ದೇವರು ಒಪ್ಪಿಸಿಕೊಳ್ಳಬೇಕು.'(ಬೆಳಕಿನೆಡೆಗೆ; ಪುಟ 20) ಎಂದಾಗ ಭಯೋತ್ಪಾದಕನೆಂದು ಹಣೆಪಟ್ಟಿ ಕಟ್ಟಿ ಊರಿಂದ ಹೊರಹಾಕಲು ಪ್ರಯತ್ನಪಟ್ಟವರೇ 'ಒಂಟಿ ಬ್ಯಾರಿಗಳು ಈಗ ನಮ್ಮ ಊರಿನವರು, ನಮ್ಮ ದೇವರನ್ನು ಒಪ್ಪಿಕೊಳ್ಳುವ ದೊಡ್ಡ ಗುಣ ಅವರದ್ದು. ಅವರು ಕಪಿಲೇಶ್ವರ ಮೆಚ್ಚುವ ಕೆಲಸ ಮಾಡಿದ್ದಾರೆ. ಕಪಿಲೇಶ್ವರನ ಅವರ ಸೇವೆಯನ್ನು ಸ್ವೀಕರಿಸಲಿ' (ಪುಟ 20) ಎಂದರು. ಹೊಂದಿಕೊಂಡು ಬಾಳಿದರೆ ಎಂಥ ವೈರುಧ್ಯ ಪರಿಸ್ಥಿತಿಯಲ್ಲೂ ಬದುಕಲು ಸಾಧ್ಯ ಎಂಬುದು ಈ ಕಥೆಯ ತಿರುಳಾಗಿದೆ. ಈ ಎಲ್ಲಾ ಸಂಗತಿಗಳು ಒಂಟಿ ಬ್ಯಾರಿಯ 'ದೇವರೆಲ್ಲಾ ಒಂದೇ' ಎಂಬ ಗಾಢವಾದ ನಂಬಿಕೆಯಿಂದ ಪ್ರೇರಿತವಾಗಿದ್ದು ಊರವರ ಮನಗೆಲ್ಲುವಲ್ಲಿ ಯಶಸ್ವಿಯಾಗಿತ್ತು.

ಮೊಹರಂ ಮತ್ತು ನವರಾತ್ರಿಯ ಸಂದರ್ಭದಲ್ಲಿ ಹುಲಿವೇಷ ಹಾಕುತ್ತಿದ್ದ ಹುಲಿ ಹುಸೇನ್ ಹಿಂದುಗಳ ಹಬ್ಬವಾದ ನವರಾತ್ರಿಯ ದಿವಸ ಹುಲಿವೇಷ ಹಾಕಬಾರದು ಎಂದು ವಾಯುಪುತ್ರ ಸೇನೆಯ ಅಧ್ಯಕ್ಷ ಭೀಮಪ್ಪಯ್ಯ ತಾಕೀತು ಮಾಡುತ್ತಾನೆ. ವಿದ್ಯೆ ತಲೆಗೆ ಹತ್ತದ ಹುಸೇನ್‌ಗೆ ತಂದೆ ಹುಲಿಹೈದರ್ ಹುಲಿ ವೇಷ ಹಾಕಲು ಹೇಳುತ್ತಾನೆ. ನವರಾತ್ರಿಯ ಸಂದರ್ಭದಲ್ಲಿ ಮುಸಲ್ಮಾನನಾದ ಹುಸೇನ್ ವೇಷ ಹಾಕಬಾರದು ಎಂದು ಹೇಳಿದ ಭೀಮಪ್ಪಯ್ಯನ ಮಾತನ್ನು ತಂದೆಗೆ ಹೇಳಿದಾಗ 'ಇದು ನೂರಾರು ವರ್ಷಗಳಿಂದ ಬಂದ ಸಂಪ್ರದಾಯ ಇದನ್ನು ನಿಲ್ಲಿಸಲು ಭೀಮಪ್ಪಯ್ಯ ಯಾರು ಇದನ್ನು ದೇವಿ ಚಾಮುಂಡಿ ಒಪ್ಪುವುದಿಲ್ಲ. ನಾಳೆಯೇ ಇದು ಇತ್ಯರ್ಥವಾಗಲಿ. ನಾವು ಮಹಾಮಂಗಳಾರತಿ ಹೊತ್ತಿಗೆ ದೇವಸ್ಥಾನಕ್ಕೆ ಹೋಗುವ. ಆಗ ಮುಕ್ತೇಸರು ಇರುತ್ತಾರೆ.'(ಪುಟ 28) ಎಂದು ಹೋದಾಗ ಸ್ವಲ್ಪ ಉದ್ವೇಗದ ವಾತಾವರಣ ಉಂಟಾಯಿತು. ಭೀಮಪ್ಪಯ್ಯನ ಮಗು ಹೆಂಡತಿಯ ತೆಕ್ಕೆಯಿಂದ ಬಿಡಿಸಿಕೊಂಡು ಹಣಕಿಕ್ಕುವ ಪ್ರಯತ್ನದಲ್ಲಿ ಬಾವಿಗೆ ಬಿದ್ದಿತ್ತು. ಹುಲಿ ಹುಸೇನ್ ಬಾವಿಗೆ ಹಾರಿ ಮಗುವನ್ನು ಮೇಲಕ್ಕೆತ್ತಿ ತಂದಾಗ ಹೆಂಡತಿ ಅವನ ಕಾಲ ಸ್ಪರ್ಶ ಮಾಡಿ ಹಣೆಗೊತ್ತಿಕೊಂಡಳು. ಇದನ್ನು ಗಮನಿಸಿದ ಮೊಕ್ತೇಸರರು 'ಆ ತಾಯಿ ಚಾಮುಂಡಿ ಎಲ್ಲವನ್ನು ಇತ್ಯರ್ಥ ಮಾಡಿಬಿಟ್ಟಳು ಹೈದರ್ ಸಾಹುಕಾರೇ ಲಾಗಾಯ್ತಿನಿಂದ ನಡೆದು ಬಂದ ಸಂಪ್ರದಾಯ ಮುಂದುವರಿಯಲಿ' (ಅದೇ; ಪುಟ 28) ಎಂದನು. ಧರ್ಮಕ್ಕಿಂತ ಮಾನವೀಯತೆ ಮುಖ್ಯ. ಆಪತ್ಕಾಲದಲ್ಲಿ ಸಹಾಯ ಮಾಡಿದವನೇ ನಿಜವಾದ ಬಂಧು.

ಹೀಗೆ ಹುಲಿವೇಷ ಹಾಕಬಾರದೆಂಬ ತೀವ್ರವಾದಿಯ ಧರ್ಮಾಂಧತೆಯನ್ನು ಮೀರಲು ಹುಲಿ ಹುಸೇನ್‌ಗೆ ಸಾಧ್ಯವಾಯಿತು.

ಭಾರತವನ್ನು ಕಾಡುತ್ತಿರುವ ಉಗ್ರಗಾಮಿಗಳ ಚಟುವಟಿಕೆಯ ವಸ್ತುವಾಗುಳ್ಳ ಕಥೆ 'ಗುಜರಿ ಅದ್ದಿಲಿಚ್ಚನ ಜಿಹಾದಿಯು'. ಮುಸ್ಲಿಮರು ಹತ್ತಾರು ಮಕ್ಕಳನ್ನು ಹಡೆಯುವವರು. ದೇವರು ಕೊಡುವ ಮಕ್ಕಳನ್ನು ಬೇಡ ಎಂದು ತೀರ್ಮಾನಿಸಲು ನಮಗೆ ಹಕ್ಕಿಲ್ಲ ಎಂಬ ಧಾರ್ಮಿಕ ಆದೇಶವನ್ನು ಪಾಲಿಸುವವರು. ಆದರೆ ಈ ಆದೇಶವನ್ನು ಧಿಕ್ಕರಿಸಿ ಎಂಟು ಮಕ್ಕಳನ್ನು ಹೆತ್ತು ನಲವತ್ತಕ್ಕೆ ಎಪ್ಪತ್ತರ ಮುದುಕಿಯಾಗಿ ಹೋಗಿರುವ ಹೆಂಡತಿ ಬೀಬಿ ಬಿಪಾತುಮ್ಮ ಮತ್ತೆ ಗರ್ಭ ಧರಿಸಿ ಸಾವಿನ ಬಾಗಿಲ ಬಳಿ ಹೋಗದಂತೆ ಮಾಡಲು ಯಾರಿಗೂ ಗೊತ್ತಾಗದಂತೆ ಆಪರೇಷನ್ ಮಾಡಿಸಿಕೊಳ್ಳುವುದು, ಇದನ್ನು ಗಂಡ ಗುಜರಿ ಅದ್ದಿಲಿಚ್ಚ ವಿರೋಧ ತೋರಿಸದೆ ಒಪ್ಪಿಕೊಳ್ಳುವುದು, ಕತೆಯ ಒಂದು ಭಾಗವಾದರೆ ಜಿಹಾದ್, ಉಗ್ರಗಾಮಿ, ಭಯೋತ್ಪಾದನೆ ಇಂಥ ಯಾವುದೇ ವಿಷಯಗಳ ಬಗ್ಗೆ ಏನೇನೋ ತಿಳಿಯದ ಗುಜರಿ ಅದ್ದಿಲಿಚ್ಚ ಆಕಸ್ಮಿಕವಾಗಿ ಭಯೋತ್ಪಾದಕರ ಬಲೆಗೆ ಬಿದ್ದು ಆತ್ಮಾಹುತಿ ಮಾಡಿಕೊಳ್ಳಬೇಕಾಗಿ ಬಂದದ್ದು ಕಥೆಯ ಇನ್ನೊಂದು ಭಾಗ. ಊರಿಗಾಗಿ ಹಾಗೂ ಕುಟುಂಬದ ಉಳಿವಿಗಾಗಿ ತನ್ನ ಪ್ರಾಣವನ್ನೇ ಬಲಿಕೊಡಲು ಸಿದ್ಧವಾಗಿರುವ ಜನರ ಪ್ರತಿನಿಧಿಯಾಗಿ ಅದ್ದಿಲಿಚ್ಚ ಇಲ್ಲಿ ಬಿಂಬಿತವಾಗುತ್ತಾನೆ.

ಆತ್ಮಕ್ಕೆ ಮೋಕ್ಷ ಕಲ್ಪಿಸುವ ಸಲುವಾಗಿ ಹಿರಿಯರೊಬ್ಬರು ದರ್ಗಾವೊಂದಕ್ಕೆ ಹೋಗಿ ಹೆಂಗಸಿನ ಪರವಾಗಿ ಜರತಾರಿ ಸೀರೆ, ರವಿಕೆ ಕಣ, ಒಂದು ಡಜನ್ ಬಳೆ, ಅರಸಿನ, ಕುಂಕುಮ ಅರ್ಪಿಸಿ ಹರಕೆ ತೀರಿಸಿದ ವಿಶೇಷ ಘಟನೆಯೊಂದರ ಕಥೆ 'ಪ್ರೇತಾತ್ಮ ಮೋಕ್ಷಾರ್ಥ'. ನಿವೃತ್ತ ಮೇಷ್ಟ್ರೊಬ್ಬರು ತಮ್ಮ ವಂಶದ ಮಹಿಳೆಯೊಬ್ಬಳು ಮುಸಲ್ಮಾನನನ್ನು ಮದುವೆಯಾಗಿ ಹೋಗಿದ್ದ ಕಾರಣ ಮುಂದೆ ಮೃತಳಾದ ಆಕೆಯ ಆತ್ಮವನ್ನು ಮಾತೃಧರ್ಮಕ್ಕೆ ಮರಳಿಸಿ ಆಕೆಗೆ ಸದ್ಗತಿ ಸಲ್ಲಿಸುವ ಸಲುವಾಗಿ ದರ್ಗಾಕ್ಕೆ ಹೋಗಿ ಅಲ್ಲಿಯ ಮೌಲವಿಯ ಜೊತೆ ಮಾತನಾಡಿ ತನ್ನ ಕರ್ತವ್ಯವನ್ನು ಮುಗಿಸಿ ಬರುತ್ತಾರೆ. ಕಥೆಯ ಮಧ್ಯದಲ್ಲಿ ಭಯೋತ್ಪಾದಕರು ಬಂದು ಮಸೀದಿಯಲ್ಲಿ ನಿಲ್ಲಲು ಆಶ್ರಯ ಕೇಳಿದಾಗ ಅವರನ್ನು ಮೌಲವಿ ಓಡಿಸುತ್ತಾನೆ. ಎರಡು ಧರ್ಮಗಳ ನಂಬಿಕೆ ಆಚಾರ–ವಿಚಾರಗಳ ಕುರಿತು ಇಬ್ಬರ ನಡುವೆಯೂ ಸಣ್ಣ ಆದರೆ ಆರೋಗ್ಯಪೂರ್ಣ ಚರ್ಚೆ ನಡೆಯುತ್ತದೆ. ವೈಯಕ್ತಿಕ ನಂಬಿಕೆಗಳ ಹೊರತಾಗಿಯೂ ಇಂಥ ಆಚರಣೆಗಳ ಅನಿವಾರ್ಯತೆಯಿಂದ ಮೇಷ್ಟು ದರ್ಗಾಕ್ಕೆ ಬಂದು ಹರಕೆ ಸಲ್ಲಿಸಿದ ಕಥೆಯಲ್ಲಿ ಧಾರ್ಮಿಕ ಹೊಂದಾಣಿಕೆಯ ಅನಿವಾರ್ಯತೆಯಿದೆ. 'ತನ್ನ ಆಲೋಚನೆಗಳಿಗೆ ವಿರುದ್ಧವಾಗಿರುವುದನ್ನು ಪ್ರಶ್ನಿಸಿ ಬಹಿಷ್ಕಾರಕ್ಕೆ ಒಳಗಾಗುವುದಕ್ಕಿಂತ ಪ್ರವಾಹದೊಟ್ಟಿಗೆ ಹೋಗುವುದು ಒಳಿತು' (ಅದೇ; ಪುಟ 50) ಎಂದು ಮೇಷ್ಟು ರಾಜಿ ಮಾಡಿಕೊಂಡು ಜೀವನ ಮುಂದುವರಿಸಿದರು.

'ಆಲಿಮಾಳ ಆಡು' ಕಥೆಯಲ್ಲಿ ಆಲಿಮಾಳ ಆಡಿನ ಮರಿ ಕುಟ್ಟನ ಮೇಲಿನ ಪ್ರೀತಿ ಚಿತ್ರಿತಗೊಂಡಿದೆ. ಕಥೆಗಾರರು ಹೇಳುವಂತೆ ಪ್ರಾಣಿ ಮತ್ತು ಮಾನವನ ಸುಮಧುರ ಬಾಂಧವ್ಯವನ್ನು 'ಅಲಿಮಾಳ ಆಡು' ಎತ್ತಿಹಿಡಿಯುತ್ತದೆ. ಅವಳ ಅಣ್ಣ ಇದ್ದಕ್ಕಿದ್ದಂತೆ ಮನೆ ಬಿಟ್ಟು ಹೋಗಿದ್ದ. ತಾಯಿ–ತಂದೆ ಟೂರು ಹೋದಾಗ ಕಡಲಿನ ಸುನಾಮಿಗೆ ತುತ್ತಾಗಿದ್ದರು. ಎಡೆಬಿಡದೆ ಕಣ್ಣೀರು ಸುರಿಸುವ ಅಲಿಮಾಳಿಗೆ ಆಡಿನಮರಿಯನ್ನು ಕಂದು

ಕೊಡಬೇಕಾಯಿತು. ಅವಳಿಗಾಗಿ ತಂದಿದ್ದ ಆಡಿನಮರಿ ಕುಟ್ಟ ಅವಳ ಜೀವವಾಗಿತ್ತು. ಆಡಿನಮರಿ ಕುಟ್ಟನ ಹಾವಳಿಯಿಂದ ಮದರಸದ ಮುಕ್ರಿಚ್ಚ ಬಹಳ ಕ್ರುದ್ಧನಾಗಿದ್ದ. ತನ್ನ ಪಂಚೆಯನ್ನು ಕಚ್ಚಿ ಎಳೆದು ಮಕ್ಕಳೆದುರು ಅವಮಾನಕ್ಕೊಳಪಡಿಸಿದ, ಬುದ್ಧಿ ಕೆಡವಿದ ಕುಟ್ಟನನ್ನು ಆಲಿಮಾಳ ಮನೆಗೆ ಬಂದು ಅಲಿಮಾಲನ್ನೂ ಸೇರಿಸಿ ಹೊಡೆದ ಮುಕ್ರಿಚ್ಚನನ್ನು ಕುಟ್ಟ ಗುಮ್ಮಿ ಕೆಡವಿ, ಸ್ಕೂಟರಿನ ಪೆಟ್ರೋಲ್ ಚೆಲ್ಲಿ ಹೋಗುವಂತೆ ಮಾಡಿದಾಗಲಂತೂ ಆತನ ಸಿಟ್ಟಿಗೆ ಪಾರವೇ ಇಲ್ಲದಂತಾಗಿದೆ. ಕುಟ್ಟನಿಗೆ ಬಾಸುಂಡೆ ಬರುವ ಹಾಗೆ ಬಾರಿಸಿದರೂ ರೋಷ ಕಡಿಮೆಯಾಗಲಿಲ್ಲ. ಅಂತಹ ಕುಟ್ಟ ಕಾಣೆಯಾದಾಗ ಎಲ್ಲರ ಮನ ಕರಗುತ್ತದೆ.

ಕುಟ್ಟನನ್ನು ಹುಡುಕುತ್ತಾ ಮನೆ ಮನೆ ಅಲೆದರು ಎಲ್ಲೂ ಕಾಣಿಸಲಿಲ್ಲ ಅಕ್ಕ–ಭಾವ ಆಹಾರ ತೆಗೆದುಕೊಳ್ಳುವಂತೆ ಅಲಿಮಾಲನ್ನು ಎಷ್ಟು ಒತ್ತಾಯಿಸಿದರೂ ಅವಳು ಏನನ್ನು ಮುಟ್ಟಲಿಲ್ಲ. ಸರಿರಾತ್ರಿಯಲ್ಲಿ 'ಮೇ' ಸ್ವರ ಕೇಳಿ ಟಾರ್ಚ್ ಹಿಡಿದು ನೋಡಿದರೆ ಮುಕ್ರಿಚ್ಚ ಕುಟ್ಟನನ್ನು ಗೂಟಕ್ಕೆ ಕಟ್ಟಿ ಹಾಕುತ್ತಿದ್ದ. ಈ ಕಥೆಯಲ್ಲಿ ಅಲಿಮಾಳ ಭಾವನ ಹಾಸ್ಯ ಮತ್ತು ಪ್ರೀತಿ ಓದುಗರ ಮನಸ್ಸನ್ನು ಸೂರೆಗೊಳ್ಳುತ್ತದೆ.

2020–21ನೇ ಕಾಲಘಟ್ಟದಲ್ಲಿ ಜಗತ್ತನ್ನು ಕಾಡಿದ ಕೊರೋನ ಸಂದರ್ಭದ ಘಟನೆಗಳನ್ನಾಧರಿಸಿದ ಕಥೆ 'ಧರೆ ಹೊತ್ತಿ ಉರಿದೊಡೆ'. ಬಡ ಕುಟುಂಬವೊಂದರ ಹೆಂಗಸು ಕರೋನ ವೈರಸ್ ಎಂದು ಆತಂಕಕ್ಕೆ ಒಳಗಾಗಿ ತನ್ನ ಗಂಡನನ್ನು ಆಸ್ಪತ್ರೆಗೆ ಸೇರಿಸಲು ಪರದಾಡಿ, ನಂತರ ಮುಖಂಡರ ಪ್ರಭಾವದಿಂದ ಸೇರಿಸಲಾದ ಕಥೆ ಈ ಕಾಲದ ಸಂಗತಿಗಳ ಪ್ರಾತಿನಿಧಿಕ ರೂಪ ಎನ್ನಬಹುದು. ಕೊರೋನಾ ಸಂದರ್ಭದಲ್ಲಿ ಎಲ್ಲ ಜನರು ಕಷ್ಟ ಅನುಭವಿಸಿದರೆ ಆಸ್ಪತ್ರೆಗಳವರು ಮಾತ್ರ ಪರಿಸ್ಥಿತಿಯ ದುರ್ಲಾಭ ಪಡೆದು ಕೊಂಡದ್ದು ಎಲ್ಲರಿಗೂ ತಿಳಿದಿರುವ ಸಂಗತಿ. ಜ್ವರಪೀಡಿತ ಗಂಡನನ್ನು ಆಸ್ಪತ್ರೆಗೆ ಸೇರಿಸಲು ಹೋದಾಗ 'ಒಂದು ಆಸ್ಪತ್ರೆಯ ಅಧಿಕಾರಿ ಖಾಲಿ ಇಲ್ಲ ಎಂದ. ಇನ್ನೊಬ್ಬ ಸ್ಟಾಫ್ ಇಲ್ಲವೆಂದ. ಮತ್ತೊಬ್ಬ ನಮ್ಮಲ್ಲಿ ಕೋವಿಡ್ ಪರೀಕ್ಷೆಯ ಲ್ಯಾಬ್ ಇಲ್ಲವೆಂದ. ಮಗದೊಬ್ಬ ಕೋವಿಡ್ ಪರೀಕ್ಷೆ ಮಾಡಿಸಿಕೊಂಡು ಬನ್ನಿ ಕೋವಿಡ್ ಇಲ್ಲವೆಂದಾದರೆ ಅಡ್ಮಿಟ್ ಮಾಡಿಕೊಳ್ಳುತ್ತೇನೆ ಎಂದ. ಐದನೇ ಆಸ್ಪತ್ರೆಯ ಅಧಿಕಾರಿ 'ಅಮ್ಮಾ ಇಪ್ಪತ್ತೈದು ಸಾವಿರ ಕೊಡದೆ ಅಡ್ಮಿಟ್ ಮಾಡುವುದಿಲ್ಲ' (ಪುಟ 68) ಎಂದು ಬಿಟ್ಟರೆ, ಗಂಡ ಸತ್ತನೆಂದಾಗ ಆಸ್ಪತ್ರೆಯಲ್ಲಿದ್ದ ಅಧಿಕಾರಿ 'ನಿನ್ನ ಗಂಡ ಕೊರೋನದಿಂದ ತೀರಿಹೋದ. ಹೆಣವನ್ನು ನಾವೇ ವಿಲೇವಾರಿ ಮಾಡಬೇಕಾಗುತ್ತದೆ. ನಿಮಗೆ ಕೊಡುವ ಹಾಗಿಲ್ಲ. ನಿನಗೆ ಮುಖ ನೋಡಬೇಕಾದರೆ ಐದುಸಾವಿರ ಕೊಡು' (ಅದೇ; ಪುಟ 71) ಎಂದು ಗದರಿಸಿದ. ಮುಂದೆ ಶವ ಬಿಚ್ಚಿ ನೋಡಿದಾಗ ಕಣ್ಣುಗಳಿರಲಿಲ್ಲ, ಕಿಡ್ನಿ ಇರಲಿಲ್ಲ, ಶಿಶ್ನವನ್ನು ಮೇಲೆತ್ತಿ ನೋಡಿದಾಗ ಅದು ಸುನ್ನತ್ ಆಗದ ಶಿಶ್ನ. ಇಲ್ಲೆಲ್ಲಾ ಆಸ್ಪತ್ರೆಯ ಅಧಿಕಾರಿಗಳ ಅಮಾನವೀಯತೆ, ಬೇಜವಾಬ್ದಾರಿತನ, ಲಂಚಗುಳಿತನ ಎದ್ದು ತೋರುತ್ತದೆ. ಇದರೊಂದಿಗೆ ರಾಜ್ಯಕೀಯ ಲಾಭ ಪಡೆಯಲೆತ್ನಿಸುವವರ ದುರಾಚಾರವನ್ನು ಕಥೆ ನಿರೂಪಿಸುತ್ತದೆ. ಲಾಕ್ಡೌನ್ ಕಾರಣ ದುಡಿಮೆ ಇಲ್ಲದೆ ತಿನ್ನಲು ಆಹಾರಕ್ಕಾಗಿ ಪರದಾಡಿ ಜ್ವರಪೀಡಿತ ಗಂಡನ ಚಿಕಿತ್ಸೆಗೆ ಒಂದಷ್ಟು ಆಭರಣವನ್ನೇ ಒಪ್ಪಿಸಬೇಕಾದ ಅನಿವಾರ್ಯತೆ. ಇವೆಲ್ಲವುಗಳಿಂದ ಬೆಂದ ಬಡ ಹೆಣ್ಣೊಬ್ಬಳ ಪಾಲಿಗೆ ಧರೆಯೇ ಹೊತ್ತಿ ಉರಿದಂತೆ ಭಾಸವಾಗುತ್ತದೆ. ಬಡತನ, ಅಸಹಾಯಕತೆ, ಹತಾಶೆ

ಇತ್ಯಾದಿಗಳೆಲ್ಲ ಸಮ್ಮಿಳಿತವಾಗಿ ಆಕೆಯ ಬದುಕನ್ನು ದುರಂತಗೊಳಿಸಿದ ಸಂದರ್ಭಗಳು ಅನಾವರಣಗೊಂಡಿವೆ.

ಆಂಗ್ಲ ಕಥೆಯಿಂದ ಸ್ಫೂರ್ತಿ ಪಡೆದು ಬರೆದ 'ಧರ್ಮ ಕರ್ಮವನ್ನುಳಿದು' ಕಥೆ 'ಬೆಳಕಿನೆಡೆಗೆ' ಸಂಕಲನ ಉಳಿದ ಕಥೆಗಳಿಗಿಂತ ಭಿನ್ನವಾದುದು. ಈ ಕಥೆಯಲ್ಲಿ ಬಡತನ, ಅಸಹಾಯಕತೆ, ಧರ್ಮದ ಹೆಸರಿನಲ್ಲಿ ನಡೆಯುವ ಅಧರ್ಮದ ಚಿತ್ರಣವಿದ್ದರೂ ಬಹಳಷ್ಟು ಸಕಾರಾತ್ಮಕ ಅಂಶಗಳನ್ನು ಗಮನಿಸಬಹುದು.

ಜೈನಾಬಿ ಮತ್ತು ಕಾಸಿಮನಿಗೆ ಶಾಹಿನ ಎಂಬ ಒಬ್ಬಳು ಮಗಳಿರುತ್ತಾಳೆ. ತಾನು ಮತ್ತೊಮ್ಮೆ ಗರ್ಭ ಧರಿಸುವಂತೆ ಇಲ್ಲವೆಂಬ ಸತ್ಯವನ್ನು ತಿಳಿದ ಗಂಡನಿಗೆ ಮತ್ತೊಂದು ಮದುವೆಯಾಗುವಂತೆ ಹೇಳುತ್ತಾಳೆ. ಗಂಡನ ಸುಖವನ್ನೇ ಬಯಸುವ ಭಾರತೀಯರಿಗೆ ಇದು ಮಾಮೂಲಾದರೂ ಗಂಡ ಕಾಸೀಮನಿಗೆ ಪಥ್ಯವಾಗುವುದಿಲ್ಲ. ಮುಲ್ಲಾನ ಬಳಿ ಹೋಗಿ ಹೇಳಿದಾಗ 'ನೋಡು ಕಾಸೀಮ, ಅಷ್ಟ ಪುತ್ರವತಿ ಭವ ಎಂದು ಆಶೀರ್ವಾದ ಮಾಡುತ್ತಿದ್ದ ಅವರೇ ಈಗ ಎರಡಕ್ಕೆ ನಿಲ್ಲಿಸುತ್ತಿದ್ದಾರೆ. ಬೈಬಲು ಹೇಳುವುದನ್ನೆಲ್ಲಾ ಯಾವ ಕಿರಿಸ್ತಾನ ಕೇಳುತ್ತಾನೆ. ನಮ್ಮ ಕುರಾನ್ ನಲ್ಲಿ ಚಿಕ್ಕ ಕುಟುಂಬದ ಮತ್ತು ಆಪರೇಷನ್ ಬಗ್ಗೆ ಏನನ್ನೂ ಹೇಳುವುದಿಲ್ಲ. ಆದ್ದರಿಂದ ನಿನ್ನ ಸಮಸ್ಯೆಗೆ ಶಾಸ್ತ್ರೀಯ ಉತ್ತರವಿಲ್ಲ. ಇರುವುದು ವ್ಯಷ್ಟಿ ನೆಲೆಯ ಉತ್ತರ. ನಿನಗೆ ಇನ್ನೊಂದು ಮದುವೆ ಬೇಕೆನಿಸಿದರೆ ಆಗು. ಒಬ್ಬಳು ಹೆಂಡತಿ ಇರುವಾಗ ಇನ್ನೊಬ್ಬಳನ್ನು ಆದರೆ ಅದು ನೈತಿಕವಾಗಿ ತಪ್ಪು ಎಂದು ಅನಿಸಿದರೆ ನೀನು ಆಪರೇಷನ್ ಮಾಡಿಸಿಕೋ. ಅದಕ್ಕೂ ಧರ್ಮಕ್ಕೂ ಯಾವ ಸಂಬಂಧವೂ ಇಲ್ಲ.' (ಪುಟ ಸಂಖ್ಯೆ 79.) ಧಾರ್ಮಿಕ ಕಾರಣಕ್ಕಾಗಿ ಕುಟುಂಬ ಯೋಜನೆಯನ್ನು ಒಪ್ಪದಿದ್ದರೂ ಆಪರೇಷನ್ ಮಾಡಿಸಿಕೊಳ್ಳುವುದು ಧರ್ಮಬಾಹಿರವಾಗಲಾರದು ಎಂದು ಹೇಳಿದ್ದರಿಂದ ಕುಟುಂಬ ಯೋಜನೆ ಮಾಡಿಸಿಕೊಂಡ. ಹಾಗೆಯೇ ಭರತನಾಟ್ಯ ಒಂದು ಕಲೆಯಾದ ಕಾರಣ ಮಗಳು ಶಾಹಿನ ನಾಟ್ಯವಾಡುವ ಧರ್ಮ ವಿರೋಧಿಯಲ್ಲ ಎಂದು ಧೈರ್ಯ ನೀಡುತ್ತಾನೆ. ಕಥೆಯ ಅಂತ್ಯ ತುಂಬಾ ಹೃದಯವಿದ್ರಾವಕ ವಾದದ್ದು. ಮಗಳ ಭರತನಾಟ್ಯ ಡ್ರೆಸ್ಸಿಗೆ ತಾಯಿಯ ಮಿಸ್ರಿ ಮಾಲೆಯನ್ನು ಮಾರುವುದು ಹಾಗೂ ತಂದೆ ಜೀವನ ಸಾಗಿಸಲು ಇದ್ದ ಏಕೈಕ ಸಾಧನವಾದ ಆಪೇ ರಿಕ್ಷಾವನ್ನು ಮಾರುವುದು ಭಾರತದ ಬಡತನವನ್ನು ಪ್ರತಿನಿಧಿಸುತ್ತದೆ.

ಕೊಡಗಿನ ದೊಡ್ಡ ವೀರರಾಜನ ಸುತ್ತ ಹೆಣೆದ ಕಥೆ 'ಧರ್ಮೋ ರಕ್ಷತಿ'. ಟಿಪ್ಪುವಿನ ವಶದಲ್ಲಿದ್ದ ದೊಡ್ಡವೀರರಾಜ ಟಿಪ್ಪುಸುಲ್ತಾನನ ಸೇನಾಧಿಕಾರಿ ಖಾದರ್ ಖಾನನ ಸಹಾಯದಿಂದ ತಪ್ಪಿಸಿಕೊಂಡು ಕೊಡಗರ ನೆರವಿನಿಂದ ಟಿಪ್ಪುವಿರುದ್ಧ ಯುದ್ಧ ಮಾಡಿ ಗೆದ್ದ ಸಂದರ್ಭವನ್ನು ಕಥೆ ಒಳಗೊಂಡಿದೆ.

ಟಿಪ್ಪುವಿಗೆ ನಿಷ್ಠರಾಗಿದ್ದರೂ ಕೆಲವು ಸಂದರ್ಭಗಳಲ್ಲಿ ತನಗೆ ಸರಿ ಕಂಡದ್ದನ್ನು ಮಾಡುವ ಮೂಲಕ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವ ಖಾದರ್ ಖಾನನ ವರ್ತನೆ ಗೊತ್ತಿದ್ದರೂ ಟಿಪ್ಪು ಅವನನ್ನು ಶಿಕ್ಷಿಸುವುದಿಲ್ಲ. ಬದಲಿಗೆ ದೊಡ್ಡವೀರರಾಜನನ್ನು ನನ್ನ ಪರ ನಿಲ್ಲುವಂತೆ ಮಾಡಲು ಅವನ ಮನವೊಲಿಸುವುದಕ್ಕೆ ಖಾದರ್ ಖಾನನನ್ನೇ ಕಳಿಸುತ್ತಾನೆ. ಆದರೆ ದೊಡ್ಡವೀರರಾಜ ಖಾದರ್ ಖಾನ್ ನನ್ನ ಮಾತುಗಳಿಗೆ ಗೌರವ ನೀಡುತ್ತಾರೆಯೇ ವಿನಹ ಟಿಪ್ಪುವಿನ ಪರ ನಿಲ್ಲುವುದಿಲ್ಲ ಬಲಾತ್ಕಾರದಲ್ಲಿ ದೊಡ್ಡವೀರ ರಾಜ ಮತ್ತು ತಮ್ಮಂದಿರಾದ ಅಪ್ಪಾಜಿರಾಜ ಲಿಂಗರಾಜನನ್ನು ಮಾಡಿಸಿದ್ದು, ದೊಡ್ಡವೀರ

ರಾಜನ ದೊಡ್ಡಮ್ಮನ ಮೂವರು ಹೆಣ್ಣು ಮಕ್ಕಳಲ್ಲಿ ಮೊದಲ ದೊಡ್ಡವರಿಬ್ಬರನ್ನು ಟಿಪ್ಪು ಸುಲ್ತಾನ್ ತನ್ನ ರಾಣಿಯರನ್ನಾಗಿ ಮಾಡಿದ್ದು ದೊಡ್ಡ ವೀರರಾಜನಿಗೆ ನುಂಗಲಾರದ ತುತ್ತಾಗಿತ್ತು. ಇಲ್ಲಿ ಟಿಪ್ಪು ಸುಲ್ತಾನ್ ಸ್ತ್ರೀಯರ ಭಾವನೆಗಳಿಗೆ ಬೆಲೆ ಕೊಡದೆ ತನ್ನಿಷ್ಟದಂತೆ ಮದುವೆಯಾದರೂ ಅವರ ದೇವರ ಪೂಜೆ, ವ್ರತಗಳನ್ನು ಮಾಡಲು ಅವಕಾಶ ಮಾಡಿ ಕೊಟ್ಟಿದ್ದ ಎಂಬುದಾಗಿ ಕಥೆಗಾರರು ನಿರೂಪಿಸಿದ್ದಾರೆ.

ಕಥೆಯ ಕೊನೆಯ ಭಾಗದಲ್ಲಿ ಟಿಪ್ಪುಸುಲ್ತಾನ್ ಸೋತಾಗ ಆತ ಇಸ್ಲಾಮಿಗೆ ಸೇರಿಸಿದ್ದ ಕೊಡಗಿನವರಲ್ಲಿ ಹೆಚ್ಚಿನವರು ಶ್ರೀರಂಗಪಟ್ಟಣದಿಂದ ತಪ್ಪಿಸಿಕೊಂಡು ಬಂದುಬಿಟ್ಟರು. ದೊಡ್ಡ ವೀರರಾಜ ಖಾಲಿ ಇದ್ದ ಜಾಗವನ್ನು ಅವರಿಗೆ ಹಂಚಿ ಅವರನ್ನು ತಮ್ಮ ಜಾತಿಗೆ ಸೇರಿಸಿಕೊಳ್ಳಲು ವಿನಂತಿಸಿದ. ಆದರೆ ಜಾತಿ ಮುಖಂಡರು ಒಪ್ಪಲಿಲ್ಲ. ದೊಡ್ಡವೀರರಾಜ ಒಂದು ನಿರ್ಧಾರಕ್ಕೆ ಬಂದು 'ಶ್ರೀರಂಗಪಟ್ಟಣದಿಂದ ಬಂದವರಿಗೆ ಇಸ್ಲಾಂ ಬೇಕೆಂದಾದರೆ ಮಸೀದಿ ನಿರ್ಮಾಣ ಮಾಡಿಕೊಡುತ್ತೇನೆ. ಬೇಡವೆಂದಾದರೆ ನಿಮಗೆ ಲಿಂಗದೀಕ್ಷೆ ಮಾಡಿ ಶಿವಾಚಾರಗಳನ್ನಾಗಿ ಮಾಡುತ್ತೇನೆ. ಮಹಾದೇವನಿಗೆ ಜಾತಿಮತಗಳ ಗೊಡವೆಯಿಲ್ಲ' ಎಂದನು. (ಪುಟ ಸಂಖ್ಯೆ 93)

ಪ್ರಭಾಕರ ಶಿಶಿಲರ 'ಬೆಳಕಿನೆಡೆಗೆ' ಕಥಾಸಂಕಲನದ ಕಥಾವಸ್ತುವಿನಲ್ಲಿ ವೈವಿಧ್ಯವಿದೆ. ಈ ಕಥಾಸಂಕಲನದಲ್ಲಿರುವ ಕಥೆಗಳು ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದವು. ಧರ್ಮದ ಸಮನ್ವಯವನ್ನು ಸಂಸ್ಕೃತಿಗಳ ಸಮನ್ವಯದ ಮೂಲಕ ಸಾಧಿಸಬೇಕೆಂದು ಇಲ್ಲಿನ ಹೆಚ್ಚಿನ ಕಥೆಗಳು ಪ್ರತಿಪಾದಿಸುತ್ತವೆ. ಸಂಸ್ಕೃತಿಯ ಬಹುತ್ವವನ್ನು ಗೌರವಿಸುವುದೇ ಧರ್ಮ ಸಮನ್ವಯದ ತಿರುಳು ಎಂಬುದನ್ನು ಇಲ್ಲಿನ ಕಥೆಗಳು ಸಾರುತ್ತವೆ. ಆದರೂ ಕಥೆಗಾರರಿಗೆ ಮುಸ್ಲಿಮೇತರರಲ್ಲಿ ಇರುವ ಅಸಮಾಧಾನವನ್ನು ಕಥೆಗಳು ಸಾರಿ ಹೇಳುತ್ತದೆ.

**ಪರಾಮರ್ಶನ ಗ್ರಂಥಗಳು**


1. ಬೆಳಕಿನೆಡೆಗೆ; ಪ್ರಭಾಕರ ಶಿಶಿಲ; 2021; ಟಿ.ಎಂ ಶಾಹಿದ್, ತೆಕ್ಕಿಲಾ ಪ್ರತಿಷ್ಠಾನ, ಅರಂತೋಡು, ಸುಳ್ಯ
2. ಸಾಹಿತ್ಯ ಶಿಶಿಲ; ಮಾಧವ ಪೆರಾಜೆ; (ಸಂ) 2013; ರಾಜ್ ಪ್ರಕಾಶನ, ಮೈಸೂರು.
3. ವಿದ್ಯಾ ಸುವರ್ಣ; ಪ್ರಭಾಕರ ಶಿಶಿಲ; 2008; ವಿಸ್ಮಯ ಅಫ್ಸೆಟ್ ಪ್ರಿಂಟರ್ಸ್, ಮೈಸೂರು.


❖❖❖

ಹರಿಯೊದಗಿದ ವಿದುರನಿಗೆ
ಭಕುತಿಹಾಲ ಭುಂಜಿಸುತ
ಹರಿದೊಗೆಯುವುದಸದಳವು
ಹರಿಗೆ ಭಕ್ತಿರಸಪಾಶವನು

# ಎಫ್.ಎ. ಹಾಯೆಕ್ ದೃಷ್ಟಿಯಲ್ಲಿ ಬುದ್ಧಿಜೀವಿಗಳು ಮತ್ತು ಸಮಾಜವಾದ

**ಅಜಕ್ಕಳ ಗಿರೀಶ ಭಟ್**
ಪ್ರೊಫೆಸರ್
ಸರಕಾರಿ ಪ್ರಥಮ ದರ್ಜೆ ಕಾಲೇಜು, ಸಿದ್ಧಕಟ್ಟೆ–574237

ಅರ್ಥಶಾಸ್ತ್ರ ಕ್ಷೇತ್ರದಲ್ಲಿ ನೊಬೆಲ್ ಬಹುಮಾನವನ್ನು ಪಡೆದ ಆಸ್ಟ್ರಿಯನ್–ಬ್ರಿಟಿಷ್ ಅರ್ಥಶಾಸ್ತ್ರಜ್ಞ ಫ್ರೆಡೆರಿಕ್ ಎ ಹಾಯೆಕ್ (1899–1992) ಕೇವಲ ಅರ್ಥಶಾಸ್ತ್ರಕ್ಕೆ ಸೀಮಿತವಾಗಿದ್ದವರಲ್ಲ. ರಾಜ್ಯಶಾಸ್ತ್ರ, ಮನೋವಿಜ್ಞಾನಗಳಂತಹ ಕ್ಷೇತ್ರಗಳಲ್ಲೂ ಪರಿಣತಿಯನ್ನು ಹೊಂದಿದ್ದರು. ಅರ್ಥಶಾಸ್ತ್ರಕ್ಕೆ ಅವರ ಕೊಡುಗೆಗಳೇನು ಎಂಬ ಬಗ್ಗೆ, ಅಲ್ಲದೆ ಸಮಾಜ, ರಾಜಕಾರಣ, ಅರ್ಥಶಾಸ್ತ್ರ ಮುಂತಾದ ವಿವಿಧ ವಿಚಾರಗಳಿಗೆ ಸಂಬಂಧಿಸಿ ಅವರ ನಿಲುವುಗಳೇನು ಎಂಬ ಬಗ್ಗೆ ಬೇಕಾದಷ್ಟು ಮಾಹಿತಿ ವಿಕಿಪೀಡಿಯ ಮುಂತಾದ ಜಾಲತಾಣಗಳಲ್ಲಿ ಸಿಗುತ್ತದೆ. ಮುಖ್ಯವಾಗಿ ವ್ಯಕ್ತಿ ಸ್ವಾತಂತ್ರ್ಯವನ್ನು ಪ್ರತಿಪಾದಿಸಿದ ಉದಾರವಾದಿ ತಾತ್ತ್ವಿಕತೆಯನ್ನು(ಲಿಬರಲಿಸಂ) ಹಾಯೆಕ್ ಹೊಂದಿದ್ದರು. ಪಶ್ಚಿಮದೇಶಗಳಲ್ಲಿ ಅರ್ಥಶಾಸ್ತ್ರ, ರಾಜಕಾರಣ ಮುಂತಾದ ಕ್ಷೇತ್ರಗಳ ಮೇಲೆ ಉದಾರವಾದ ಅಥವಾ ಲಿಬರಲಿಸಂ ಬೀರಿದ ಪ್ರಭಾವದ ಬಗ್ಗೆ ಸಾಕಷ್ಟು ಸಾಹಿತ್ಯ ಬಂದಿದೆ. ಲಿಬರಲ್, ಡೆಮಾಕ್ರಾಟ್, ಕನ್ಸರ್ವೇಟಿವ್ ಮುಂತಾದ ಪದಗಳು ಸಾಪೇಕ್ಷವಾಗಿ ಬಳಕೆಯಾಗುತ್ತವೆ. ರಾಜಕೀಯ ಲಿಬರಲಿಸಂ, ಆರ್ಥಿಕ ಲಿಬರಲಿಸಂ – ಮುಂತಾದ ವಿವಿಧ ಛಾಯೆಗಳೂ ಇವೆ. ಭಾರತದಂಥ ದೇಶಗಳಲ್ಲಿ ಎಡಪಂಥೀಯರು ತಮ್ಮನ್ನು ಲಿಬರಲ್‌ಗಳು ಎಂದು ಕರೆದುಕೊಳ್ಳುವುದುಂಟು. ಮಾರ್ಕ್ಸ್‌ವಾದಿಗಳೇ ಮೊದಲಾಗಿ ಬೇರೆ ಬೇರೆ ವಿಚಾರಧಾರೆಗಳಿಗೆ ಸೇರಿದವರು ಲಿಬರಲಿಸಮ್ಮಿನ ಬಗ್ಗೆ ಟೀಕೆ ಟಿಪ್ಪಣಿಗಳನ್ನು ಮಾಡಿದ್ದುಂಟು. ಅದು ಪ್ರತ್ಯೇಕ ಚರ್ಚೆ. ಇಲ್ಲಿ ಅದರ ಬಗ್ಗೆ ಹೆಚ್ಚಿನ ವಿವರ ಅಗತ್ಯವಿಲ್ಲ. ಹೀಗಾಗಿ ಆ ಬಗ್ಗೆ ಹೆಚ್ಚು ದೀರ್ಘಗೊಳಿಸದೆ, ಅವರ ಬರೆಹದಲ್ಲಿ ನನ್ನ ಕುತೂಹಲ ಕೆರಳಿಸಿದ ಭಾಗದ ಬಗ್ಗೆಯಷ್ಟೇ ಇಲ್ಲಿ ಚರ್ಚಿಸುವೆ.

ಎಫ್.ಎ. ಹಾಯೆಕ್ ಅವರ ಸ್ಟಡೀಸ್ ಇನ್ ಫಿಲಾಸಫಿ, ಪೊಲಿಟಿಕ್ಸ್ ಅಂಡ್ ಇಕನಾಮಿಕ್ಸ್ (1967) ಅನ್ನುವ ಪುಸ್ತಕದ ಒಂದು ಅಧ್ಯಾಯದಲ್ಲಿ ಹೇಳಲಾದ ವಿಚಾರಗಳನ್ನು ಈ ಲೇಖನದಲ್ಲಿ ಪರಿಚಯಿಸಲು ಯತ್ನಿಸಲಾಗಿದೆ. ಹಾಯೆಕ್ ಅವರ ಲೇಖನದಲ್ಲಿರುವ ಸುದೀರ್ಘ ಇಂಗ್ಲಿಷ್ ವಾಕ್ಯಗಳ ಮಾರ್ಮಿಕತೆಯು ಉಳಿಯುವ ಹಾಗೆ ಕನ್ನಡಕ್ಕೆ ಅನುವಾದಿಸುವುದು ನನಗೆ ಕಷ್ಟ. ಆದ್ದರಿಂದ ಹಾಯೆಕ್ ಮಾತುಗಳ ಧ್ವನಿಯು ಅನುವಾದದಲ್ಲಿ ಕಳೆದುಹೋಗಬಾರದು ಎಂಬ ಕಾರಣಕ್ಕೆ ಹಾಗೂ ಹಾಯೆಕ್ ಅವರ ಗಹನ ವಿಚಾರಗಳು ಆದಷ್ಟು ಸ್ಪಷ್ಟವಾಗಲಿ ಎನ್ನುವ ಕಾರಣಕ್ಕೆ ಕೆಲವು ಮುಖ್ಯ ಸಾಲುಗಳನ್ನು ಇಂಗ್ಲಿಷಿನಲ್ಲಿಯೇ ನೀಡಲಾಗಿದೆ.

*****

ನಾನಿಲ್ಲಿ ಕೈಗೆತ್ತಿಕೊಂಡಿರುವ ಅಧ್ಯಾಯದ ಶೀರ್ಷಿಕೆ "The Intellectuals and Socialism" – "ಬುದ್ಧಿಜೀವಿಗಳು ಮತ್ತು ಸಮಾಜವಾದ". ಈ ಅಧ್ಯಾಯದ ಆರಂಭದಲ್ಲಿಯೇ ಬುದ್ಧಿಜೀವಿಗಳು ಸಮಾಜದಲ್ಲಿ ಹೊಂದಿರುವ ಪ್ರಭಾವದ ಬಗ್ಗೆ ಹಾಯೆಕ್ ಪ್ರಸ್ತಾಪಿಸುತ್ತಾರೆ. ರಾಜಕಾರಣದ ಮೇಲೆ ಅಥವಾ ಮತದಾನದ ಮೇಲೆ ಬುದ್ಧಿಜೀವಿಗಳು ತಕ್ಷಣಕ್ಕೆ ಹೇಳಿಕೊಳ್ಳುವಂಥ ಪ್ರಭಾವವನ್ನು ಬೀರಲಾರರು; ಆದರೂ ಎಲ್ಲಾ ಪ್ರಜಾಸತ್ತಾತ್ಮಕ ದೇಶಗಳಲ್ಲಿ ಬುದ್ಧಿಜೀವಿಗಳು ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವಲ್ಲಿ ಅಪಾರ ಪ್ರಭಾವವನ್ನು ಹೊಂದಿರುತ್ತಾರೆ ಎಂದು ಹಾಯೆಕ್ ಹೇಳುತ್ತಾರೆ. ಇದು ಸರಿಯಾದ ಮಾತು. ಈಗ ಜಾಲತಾಣಗಳಂತಹ ಸಾಮಾಜಿಕ ಮಾಧ್ಯಮಗಳು ಮತ್ತು ಇತರ ಮಾಧ್ಯಮಗಳ ಬಾಹುಳ್ಯದಿಂದಾಗಿ 'ಬುದ್ಧಿ'ಯ ಅಭಿವ್ಯಕ್ತಿಯಲ್ಲಿ 'ಬುದ್ಧಿಜೀವಿ'ಗಳ ಏಕಸ್ವಾಮ್ಯ ಇಲ್ಲಎನ್ನಬಹುದು. ಆದರೆ, ಈ ಸಾಲುಗಳನ್ನು ಹಾಯೆಕ್ ಬರೆದ ಕಾಲದಲ್ಲಿ ಅಂದರೆ, 1967ರ ಮಟ್ಟಿಗಂತೂ ಇದು ಬಹಳ ಸರಿಯಾದುದು. ಯಾಕೆಂದರೆ, ಆಗ ಪತ್ರಿಕೆಗಳೇ ಅಭಿವ್ಯಕ್ತಿ ಮಾಧ್ಯಮಗಳಾಗಿದ್ದವು ಮತ್ತು ಆಗಿನ ಕಾಲದಲ್ಲಿ ಬರೆಯುವ ಅಥವಾ ಅಭಿವ್ಯಕ್ತಿಸುವ ಅಪೇಕ್ಷೆಯಿದ್ದ ಎಲ್ಲರಿಗೂ ಪತ್ರಿಕೆಗಳಲ್ಲಿ ಬರೆಯಲು ಅವಕಾಶವಿರಲಿಲ್ಲ. ಆಗಿನ ಕಾಲದ ಪ್ರಮುಖ ಜ್ಞಾನಾಧಿಕಾರ ಕೇಂದ್ರಗಳೆಂದರೆ ಪತ್ರಿಕೆಗಳು ಮತ್ತು ವಿಶ್ವವಿದ್ಯಾನಿಲಯಗಳಂತಹ ಸಂಸ್ಥೆಗಳು.

ಹಿಂದಿನ ನೂರು ವರ್ಷಗಳ ಚರಿತ್ರೆಯನ್ನು ನೋಡಿದರೆ ಸಮಾಜವಾದವೆಂಬುದು ಯಾವತ್ತೂ ದುಡಿಯುವ ವರ್ಗದ ಚಳುವಳಿ ಆಗಿರಲಿಲ್ಲ ಎಂದು ಗೊತ್ತಾಗುತ್ತದೆ ಎಂದು ಹಾಯೆಕ್ ಹೇಳುತ್ತಾರೆ. ಹಾಯೆಕ್ ಪ್ರಕಾರ ಥಿಯರಿಸ್ಟ್‌ಗಳು ಕೆಲವು ಅಮೂರ್ತ ಚಿಂತನೆಗಳ ಮೂಲಕ ಸಮಾಜವಾದವನ್ನು ರೂಪಿಸಿದರು ಮತ್ತು ಅಂತಹ ಬುದ್ಧಿಜೀವಿಗಳ ಸುದೀರ್ಘಕಾಲದ ಮನವರಿಕೆಯ ಪ್ರಯತ್ನದ ಬಳಿಕವಷ್ಟೇ ಅದನ್ನು ದುಡಿಯುವ ವರ್ಗದವರು ತಮ್ಮ ಕಾರ್ಯಸೂಚಿಗಳಲ್ಲಿ ಅಳವಡಿಸಿಕೊಳ್ಳಲಾರಂಭಿಸಿದರು. ವಿವಿಧ ದೇಶಗಳಲ್ಲಿ ಸಮಾಜವಾದವು ರಾಜಕೀಯವಾಗಿ ಪ್ರಭಾವಿ ಎನಿಸಿಕೊಳ್ಳುವ ಮೊದಲಿನ ಹಲವು ವರ್ಷಗಳಲ್ಲಿ ಅದು ಬುದ್ಧಿಜೀವಿಗಳ ಚಿಂತನೆಯ ಭಾಗವಾಗಿತ್ತು.

ಬುದ್ಧಿಜೀವಿಗಳನ್ನು 'ಪ್ರೊಫೆಶನಲ್ ಸೆಕೆಂಡ್ ಹ್ಯಾಂಡ್ ಡೀಲರ್ಸ್ ಇನ್ ಐಡಿಯಾಸ್' –'professional secondhand dealers in ideas' ಎಂದು ಎಫ್.ಎ. ಹಾಯೆಕ್ ಕರೆಯುತ್ತಾರೆ! ಬುದ್ಧಿಜೀವಿ ಅನ್ನಿಸಿಕೊಳ್ಳಬೇಕಾದರೆ ಆತ ಒರಿಜಿನಲ್ ಥಿಂಕರ್ ಆಗಿರಬೇಕಿಲ್ಲ; ನೈಜ ವಿದ್ವಾಂಸನಾಗಿರಬೇಕಿಲ್ಲ; ಅಥವಾ ತಜ್ಞ ಆಗಿರಬೇಕಿಲ್ಲ! ಅವರು ಬೇರೆಡೆಯಿಂದ ಪಡೆದ ಐಡಿಯಾಗಳನ್ನು ಹರಡುವವರು; ಹಂಚುವವರು ಅಷ್ಟೇ. "The typical intellectual need be neither; he need not possess special knowledge of anything in particular, nor need he even be particularly intelligent, to perform his role as intermediary in the spreading of ideas. What qualifies him for his job is the wide range of subjects on which he can readily talk and write, and a position or habits through which he becomes acquainted with new ideas sooner than those to whom he addresses himself."

ಈ ಬುದ್ಧಿಜೀವಿಗಳ ವರ್ಗವು ಯಾವೆಲ್ಲ ಕ್ಷೇತ್ರಗಳನ್ನು ಒಳಗೊಂಡಿದೆಯೆಂದರೆ ಅವುಗಳನ್ನು ಪಟ್ಟಿ ಮಾಡುವುದು ಕಷ್ಟ ಎಂದು ಹಾಯೆಕ್ ಹೇಳುತ್ತಾರೆ. ಈ

ವರ್ಗವು ಪತ್ರಕರ್ತರು, ಶಿಕ್ಷಕರು, ಮಂತ್ರಿಗಳು, ಪ್ರಾಧ್ಯಾಪಕರು, ರೇಡಿಯೋದಲ್ಲಿ ಮಾತನಾಡುವವರು, ಸಾಹಿತಿಗಳು, ವ್ಯಂಗ್ಯಚಿತ್ರಕಾರರು, ಕಲಾವಿದರು ಇವರನ್ನೆಲ್ಲ ಒಳಗೊಳ್ಳುತ್ತದೆ ಎಂದು ಹೇಳುತ್ತಾ ಮುಂದುವರಿಸಿ ಹಾಯೆಕ್ ನೀಡುವ ಟಿಪ್ಪಣಿ ಮಾರ್ಮಿಕವಾಗಿದೆ. (ಮಂತ್ರಿಗಳನ್ನೂ ಬುದ್ಧಿಜೀವಿಗಳ ಪಟ್ಟಿಯಲ್ಲಿ ಹಾಯೆಕ್ ಸೇರಿಸಿದ್ದಾರೆ ಎಂಬುದುಗಮನಾರ್ಹ.) ಇವರೆಲ್ಲ ವಿಚಾರಗಳನ್ನು ಇನ್ನೊಬ್ಬರಿಗೆ ಹೇಳುವುದರಲ್ಲಿ ನುರಿತವರೇ. ಆದರೆ ಅವರು ಹೇಳುವ ವಿಷಯದ ಬಗ್ಗೆ ಅವರ ಅರಿವು ಅಷ್ಟಕ್ಕಷ್ಟೇ. ಹಾಯೆಕ್ ಹೇಳುವಂತೆ, "-all of whom may be masters of the techniques of conveying the ideas but are usually amateurs so far as the substance of what they convey is concerned."

ನಮ್ಮ ನಮ್ಮ ತಜ್ಞತೆಯ ಕಾರ್ಯಕ್ಷೇತ್ರದ ಹೊರಗಿನ ವಿಷಯಗಳ ಮಟ್ಟಿಗೆ ನಾವೆಲ್ಲರೂ ಜನಸಾಮಾನ್ಯರೇ. ಅಂತಹ ವಿಷಯಗಳ ಮಟ್ಟಿಗೆ ನಾವೆಲ್ಲ ಅಭಿಪ್ರಾಯ ರೂಪಿಸುವವರನ್ನು ಅಥವಾ ಪ್ರತಿಯೊಂದರ ಬಗ್ಗೆಯೂ ಅಭಿಪ್ರಾಯ ನೀಡುವವರನ್ನು, ಅಂದರೆ ಬುದ್ಧಿಜೀವಿಗಳನ್ನು ಅವಲಂಬಿಸುತ್ತೇವೆ. ನಾವು(ಜನಸಾಮಾನ್ಯರು) ಏನನ್ನು ತಿಳಿಯಬೇಕು; ಯಾವ ಅಭಿಪ್ರಾಯ ನಮ್ಮನ್ನು ತಲುಪಬೇಕು ಎನ್ನುವುದೆಲ್ಲ ಬುದ್ಧಿಜೀವಿಗಳು ನಿರ್ಣಯಿಸಿದಂತಿರುತ್ತದೆ. ಅಂದರೆ, ಹಾಯೆಕ್ ಹೇಳುವಂತಹ ಅತಿ ಮುಖ್ಯ ಮಾತು ಇದು: ವಿಜ್ಞಾನ, ವೈದ್ಯಕೀಯ, ತಂತ್ರಜ್ಞಾನ ಮುಂತಾದ ಯಾವುದೇ ವೃತ್ತಿಪರ ಕ್ಷೇತ್ರದ ನಿಜವಾದ ತಜ್ಞರ ಅಥವಾ ಸ್ವೋಪಜ್ಞ ಚಿಂತಕರು ಮಾಡಿದಂತಹ ಸಾಧನೆಗಳ ಫಲವನ್ನು ಕೂಡ ನಾವು ಅರಿಯುತ್ತೇವೋ ಇಲ್ಲವೋ ಎನ್ನುವುದು ಬುದ್ಧಿಜೀವಿಗಳು ಅದನ್ನು ಪ್ರಚುರಪಡಿಸಲು ಬಯಸುತ್ತಾರೋ ಇಲ್ಲವೋ ಅನ್ನುವುದನ್ನು ಅವಲಂಬಿಸಿರುತ್ತದೆ.– "It is the intellectuals in this sense who decide what views and opinions are to reach us, which facts are important enough to be told to us, and in what form and from what angle they are to be presented. Whether we shall ever learn of the results of the work of the expert and the original thinker depends mainly on their decision."

ಇದನ್ನು ಹಾಯೆಕ್ ಬರೆಯುವ ಹೊತ್ತಿಗಷ್ಟೇ ಅಲ್ಲ; ಭಾರತದ ಮಟ್ಟಿಗೆ ಈ ಒಂದೊಂದು ಪದವೂ ಸುಮಾರು 2000 ನೇ ಇಸವಿಯವರೆಗೂ ಸತ್ಯವೇ ಆಗಿತ್ತು ಅನ್ನುವುದನ್ನು ನಾವು, –ಈಗ ಮಧ್ಯವಯಸ್ಸನ್ನು ತಲುಪಿದ ತಲೆಮಾರಿನವರು – ನೆನಪಿಸಿಕೊಳ್ಳಬಹುದು. ಇಲ್ಲಿ ಪರಿಸ್ಥಿತಿ ಬದಲಾದುದು ಅಂತರಜಾಲ ಎಲ್ಲರಿಗೂ ತಲುಪಿ ಸಾಮಾಜಿಕ ಮಾಧ್ಯಮಗಳು ಅಭಿವ್ಯಕ್ತಿಯ ಅವಕಾಶವನ್ನು ನೀಡಿದ ಬಳಿಕ. ಅದಕ್ಕಿಂತ ಹಿಂದೆ ಭಾರತದ ಮುಂಚೂಣಿ ಪತ್ರಿಕೆಗಳ ಅಂಕಣಗಳು ಹೇಗೆ ನಿರ್ದಿಷ್ಟ ವಿಚಾರಧಾರೆಗಳನ್ನು ಮುಂದಿಡುತ್ತಿದ್ದವು ಎನ್ನುವುದನ್ನು ನೆನಪು ಮಾಡಿಕೊಂಡರೆ ಇದು ಸ್ಪಷ್ಟವಾಗುತ್ತದೆ.

ಐಎಎಸ್, ಐಎಫ್ಎಸ್ ಇತ್ಯಾದಿ ಪರೀಕ್ಷೆಗಳಿಗೆ ಓದುವವರು 'ದ ಹಿಂದೂ' ಪತ್ರಿಕೆಯ ಸಂಪಾದಕೀಯ ಪುಟದಲ್ಲಿರುವ ಅಂಕಣಗಳನ್ನು ಓದಬೇಕು ಎಂಬ ಸಲಹೆ ಚಾಲ್ತಿಯಲ್ಲಿರುವುದು ಬಹಳ ಮಂದಿಗೆ ಗೊತ್ತಿರಬಹುದಾದ ಸಂಗತಿ. ಆದರೆ ಅಲ್ಲಿ ಪ್ರಕಟವಾಗುವುದು ನಿರ್ದಿಷ್ಟ ಧೋರಣೆಯ, ಅಂದರೆ ಬಹುಮಟ್ಟಿಗೆ ಎಡಪಂಥೀಯ ಧೋರಣೆಯ ಲೇಖನಗಳು ಎನ್ನುವುದನ್ನು ಗಮನಿಸಬೇಕು. ಅಂದರೆ ಕೆಲವು

ತಲೆಮಾರುಗಳ ಸಾಮಾನ್ಯಜ್ಞಾನವನ್ನು ಮತ್ತು ವರ್ತಮಾನದ ಆಗುಹೋಗುಗಳ ಬಗೆಗಿನ ಅಭಿಪ್ರಾಯವನ್ನು ಅದೇ ಮಾದರಿಯಲ್ಲಿ ರೂಪಿಸುವ ಕೆಲಸ ನಡೆಯುತ್ತದೆ. ದೇಶದ ಅತ್ಯುನ್ನತ ಹಂತದ ಅಧಿಕಾರಿಗಳು ಅಥವಾ ನೀತಿನಿರೂಪಣೆ ಮಾಡುವವರ ಸಾಮಾನ್ಯಜ್ಞಾನವು ಹೀಗೆ ರೂಪಿಸಲ್ಪಟ್ಟುದನ್ನು ನಾವು ಭಾರತದಲ್ಲಿ ಕಾಣುತ್ತೇವೆ.

ಇತಿಹಾಸದ ಪಠ್ಯಪುಸ್ತಕಗಳನ್ನು ಹೇಗೆ ರಚಿಸಬೇಕುಎನ್ನುವ ಬಗ್ಗೆ ನೆಹರೂವಿಯನ್‌ಇತಿಹಾಸಕಾರರ ನಿಲುವುಗಳನ್ನು ನೆನಪು ಮಾಡಿಕೊಳ್ಳಬೇಕು. ರಾಷ್ಟ್ರೀಯ ಪಠ್ಯಕ್ರಮಗಳನ್ನು ರೂಪಿಸುವಾಗ ಯಾವೆಲ್ಲ ರೀತಿಯಲ್ಲಿ ಬುದ್ಧಿಜೀವಿಗಳು ರಾಜಕೀಯವನ್ನು ಮಾಡುತ್ತಾರೆನ್ನುವುದು ಗುಟ್ಟಿನ ವಿಚಾರವೂ ಅಲ್ಲ. ಎಸ್.ಎಲ್. ಭೈರಪ್ಪನವರು ಇದನ್ನು ಸ್ವಾನುಭವದಿಂದ ದಾಖಲಿಸಿಯೂ ಇದ್ದಾರೆ. ಅದೇ ರೀತಿ ಸಾವರ್ಕರರ ವಿಚಾರಗಳನ್ನು ಹೇಗೆ ತಿರುಚಿ ಅವರೇ ದ್ವಿರಾಷ್ಟ್ರ ಸಿದ್ಧಾಂತವನ್ನು ಮೊದಲು ಪ್ರತಿಪಾದಿಸಿದವರು ಎಂಬ ಸುಳ್ಳನ್ನು ಸ್ಥಾಪಿಸಲಾಗಿದೆ ಎನ್ನುವುದನ್ನೂ ಗಮನಿಸಬಹುದು. ಡಾ. ಅಂಬೇಡ್ಕರ್ ಅವರ ಯಾವೆಲ್ಲ ವಿಚಾರಗಳನ್ನು ಮರೆಮಾಚಲಾಗಿದೆ ಎನ್ನುವುದೆಲ್ಲ ಈಗ ಅವರೆಲ್ಲರ ಸಮಗ್ರ ಸಾಹಿತ್ಯವನ್ನು ಓದಿದಾಗ ಗೊತ್ತಾಗುತ್ತದೆ. ಈಚಿನವರೆಗೆ ಅಥವಾ ಅಂತರಜಾಲ ಸಾಮಾನ್ಯ ಜನರ ಕೈಬೆರಳಿಗೂ ಬರುವವರೆಗೆ ಸಾವರ್ಕರರಂಥವರ ಸಮಗ್ರ ಸಾಹಿತ್ಯವೂ ಸುಲಭದಲ್ಲಿ ಲಭ್ಯವಾಗುತ್ತಿರಲಿಲ್ಲ.

ದೆಹಲಿಯ ಜವಾಹರಲಾಲ್ ವಿಶ್ವವಿದ್ಯಾಲಯದಲ್ಲಿ ವಿಜ್ಞಾನದ ಹಲವು ವಿಭಾಗಗಳೂ ಸೇರಿದಂತೆ ಅನೇಕ ಜ್ಞಾನಶಾಖೆಗಳು ಇದ್ದರೂ ಕೂಡ ಜೆಎನ್‌ಯು ಎಂದ ತಕ್ಷಣ ಇತಿಹಾಸ, ರಾಜ್ಯಶಾಸ್ತ್ರ ಇಂಥ ಕೆಲವು ಸಮಾಜವಿಜ್ಞಾನ ಅಥವಾ ಮಾನವಿಕ ವಿಭಾಗಗಳಲ್ಲಿ ಇರುವ/ಇದ್ದ ರೊಮಿಲಾ ಥಾಪರ್ ಮುಂತಾದ ಕೆಲವೇ 'ಬುದ್ಧಿಜೀವಿ'ಗಳ ಹೆಸರು ಮಾತ್ರ ನಮ್ಮ ಮನಸ್ಸಿಗೆ ಬರುವುದು ಯಾಕೆ ಎನ್ನುವುದೂ ಚಿಂತನೀಯ ವಿಚಾರ.

ಜೆಎನ್‌ಯುವಿನ ಉದಾಹರಣೆಯನ್ನೇ ಇನ್ನಷ್ಟು ವಿಸ್ತರಿಸುವುದಾದರೆ, ಅಲ್ಲಿ School of Languages, Literature and Culture Studies ªÀÄvÀÄÛ School of Social Science ಅಡಿಯಲ್ಲಿ ಒಟ್ಟು ಇಪ್ಪತ್ತಾರು ಅಜಟಿಣಡಿಜ ಜೆಂಡಿ ಖಣಣಜುಜ ಇವೆ. ಅಲ್ಲಿ ಇವಲ್ಲದೆ ಇತರ ವಿಭಾಗಗಳು ತುಂಬ ಇವೆ. ಒಟ್ಟು ಅರುವತ್ತಕ್ಕಿಂತಲೂ ಹೆಚ್ಚು ಸ್ಕೂಲ್/ಸೆಂಟರ್ ಫಾರ್ ಸ್ಟಡೀಸ್ ಇವೆ. ಆದರೆ ಜೆಎನ್‌ಯು ಎಂದರೆ ಅಲ್ಲಿ ಸದ್ದು ಮಾಡುವುದು ಸಮಾಜವಿಜ್ಞಾನ, ಇಂಟರ್ ನ್ಯಾಶನಲ್ ಸ್ಟಡೀಸ್ ಮುಂತಾದ ವಿಭಾಗಗಳು!! ಹೀಗಾಗಿ ಓಋಖಈ ನಲ್ಲಿ ಜೆಎನ್‌ಯುಗೆ ಒಂದನೇ, ಎರಡನೇ ರೇಂಕ್ ಎಂದಾಗ ಎಡಪಂಥೀಯರು ಕುಣಿದಾಡುತ್ತಾರೆ!! ಎಡದವರನ್ನು ಆಗದವರ ಮುಖ ಸಣ್ಣದಾಗುತ್ತದೆ!! ಆದರೆ ಸಂಶೋಧನೆ, ಬೋಧನೆ ಇತ್ಯಾದಿ ಕೆಲಸಗಳು ಇತರ ವಿಭಾಗಗಳಲ್ಲೂ ನಡೆಯುತ್ತವೆ. ರೇಂಕ್ ಸಿಗಲು ಅವುಗಳು ಕೂಡ ಕಾರಣ. ಮತ್ತು ಆ ವಿಜ್ಞಾನ ವಿಭಾಗಗಳೆಲ್ಲ ಸದ್ದು ಮಾಡುವುದಿಲ್ಲ. ಯಾಕೆಂದರೆ ಅವು ಎಡಪಂಥೀಯ ಅಲ್ಲ!!

ಸಮಾಜವಿಜ್ಞಾನ ವಿಭಾಗಗಳ ಸಮಾಜವಾದ ಅಥವಾ ಎಡಪಂಥೀಯತೆಯ ಹಿಂದೆ ಗ್ರಹಿಕಾ ಸಾಮರ್ಥ್ಯದ ಕಾರಣವೂ ಇದೆಯೇ? ಎಂಬ ಪ್ರಶ್ನೆಯೂ ಹುಟ್ಟುತ್ತದೆ. ಇದನ್ನು ಪರಿಶೀಲಿಸಲು ಹತ್ತನೇ ತರಗತಿ ಮತ್ತು ಅಥವಾ ಪಿಯುಸಿ ಅಂಕಪಟ್ಟಿ ಚಾಲೆಂಜ್ ಒಂದನ್ನು ಮಾಡಬಹುದು.

ಮುಖ್ಯ ಸಂಗತಿ ಏನೆಂದರೆ, ಸಮಾಜವಿಜ್ಞಾನ, ಭಾಷೆಗಳಂಥ ವಿಭಾಗಗಳಲ್ಲಿ, "ಬಹುಸತ್ಯಗಳಿವೆ; ಸತ್ಯಕ್ಕೆ ಅನೇಕ ಮುಖಗಳಿವೆ" ಅಂತೆಲ್ಲ ಹೇಳಿ ಸತ್ಯಕ್ಕೆ ಹೊರತಾದ್ದನ್ನೇ ಸಂಶೋಧನೆ ಎಂದು ಮುಂದಿಡಬಹುದು. ವಿಜ್ಞಾನದಲ್ಲಿ ಹಾಗಾಗುವುದಿಲ್ಲ. ಈವರೆಗೆ ಸ್ಥಾಪಿತವಾದ ಸತ್ಯವನ್ನೇ ಅವಲಂಬಿಸಿ ಸಂಶೋಧನೆ ಮುಂದುವರಿಯಬೇಕು.

ಇನ್ನೂ ಮುಖ್ಯವಾದ ಸಂಗತಿ ಏನೆಂದರೆ, ಜೆಎನ್‌ಯುವಿನ ಸಮಾಜವಿಜ್ಞಾನ ವಿಷಯಗಳು, ಭಾಷೆಗಳು ಮತ್ತು ಇತರ ಕೆಲವು ವಿಭಾಗಗಳ ಒಟ್ಟು 165 ಪ್ರೊಫೆಸರು/ಅಸೋಸಿಯೇಟ್ ಪ್ರೊಫೆಸರು/ಅಸಿಸ್ಟೆಂಟ್ ಪ್ರೊಫೆಸರುಗಳು 2020 ಮತ್ತು 2022ರ ನಡುವಿನ ಮೂರು ವರ್ಷಗಳಲ್ಲಿ ಬರೆದ ಒಟ್ಟು (ಪುನಃ ಹೇಳುತ್ತಿದ್ದೇನೆ; ಎಲ್ಲರೂ ಸೇರಿ ಒಟ್ಟು; ತಲಾ ಅಲ್ಲ) best peer reviewed articles / recent articleಗಳ ಸಂಖ್ಯೆಯನ್ನು ನಾನು ಆ ವಿಶ್ವವಿದ್ಯಾಲಯದ ಜಾಲತಾಣದಲ್ಲಿ ನೋಡಿದೆ. ನೀವು ನೋಡಿದರೆ ಬೆಚ್ಚಿ ಬೀಳುತ್ತೀರಿ!! 165 ಮಂದಿ ಬೋಧಕರದು ಒಟ್ಟು ಲೇಖನಗಳು 60ಕ್ಕೆ ಮೀರಿ ಇಲ್ಲ.

NIRFನ ರೇಂಕಿಂಗ್‌ನಲ್ಲಿ ಎರಡನೇ ಸ್ಥಾನ ಪಡೆದ ಜೆಎನ್‌ಯುನಲ್ಲಿ ಇಷ್ಟರ ಮಟ್ಟಿಗೆ ಸಂಶೋಧನ ಲೇಖನಗಳಿದ್ದರೆ ಇನ್ನು ದೇಶದ ಇತರ ವಿವಿಗಳಲ್ಲಿ ಎಷ್ಟು ಅಗಾಧವಾದ ಸಂಶೋಧನೆಗಳಾಗಬಹುದು, ಊಹಿಸಿ. (ಮೊದಲ ಸ್ಥಾನ IISc ಆದ್ದರಿಂದ ಬಹು ವಿಭಾಗಗಳುಳ್ಳ ವಿವಿಗಳಲ್ಲಿ ಜೆಎನ್‌ಯುನದು ಮೊದಲನೆ ಸ್ಥಾನವೇ ಎನ್ನಬಹುದು).

ಹೀಗೆ ನಮಗೆ ಅದಾಗಲೇ ಗೊತ್ತಿರುವ ಸಂಗತಿಗಳನ್ನು ಹಾಯೆಕ್ ಅವರ ಲೇಖನ ಮತ್ತಷ್ಟು ಸ್ಪಷ್ಟಗೊಳಿಸುತ್ತಾ ಹೋಗುತ್ತದೆ.

ಹಾಯೆಕ್ ಹೇಳುವಂತೆ, ವಿಜ್ಞಾನಿಗಳ ಅಥವಾ ಇತರ ಕ್ಷೇತ್ರಗಳ ತಜ್ಞರ ಪ್ರಸಿದ್ಧಿಯು ಈ ಬುದ್ಧಿಜೀವಿ ವರ್ಗದ ಕಾರಣದಿಂದಾಗಿಯೇ ಆಗಿರುತ್ತದೆ ಎನ್ನುವ ಸಂಗತಿಯು ಜನಸಾಮಾನ್ಯರ ಅರಿವಿಗೆ ಅಷ್ಟಾಗಿ ಬರಲಿಕ್ಕಿಲ್ಲ. ಎಷ್ಟೋ ಬಾರಿ ನಿಜವಾದ ಅರ್ಹತೆಯಿಲ್ಲದೆ, ಕೇವಲ ಬುದ್ಧಿಜೀವಿಗಳು 'ಪ್ರಗತಿಪರ' ಎಂದು ಭಾವಿಸುವ ರಾಜಕೀಯ ಧೋರಣೆಗಳನ್ನು ಹೊಂದಿರುವ ಕಾರಣದಿಂದಲೇ ವಿಜ್ಞಾನದಂತಹ ಕ್ಷೇತ್ರದಲ್ಲಿ ಬಹುದೊಡ್ಡ ವಿಜ್ಞಾನಿಗಳೆಂದು ಪ್ರಸಿದ್ಧರಾದವರ ಉದಾಹರಣೆಗಳು ಸಿಗುತ್ತವೆ ಎನ್ನುತ್ತಾರೆ ಹಾಯೆಕ್. ಹಾಗೆಂದು ಸಮಾಜವಾದವನ್ನು ನೆಚ್ಚಿಕೊಳ್ಳದ ವಿಜ್ಞಾನಿಗಳಂತಹ ತಜ್ಞರಿಗೆ ಈ ಬಗೆಯ ಡೋಂಗಿ ಪ್ರಸಿದ್ಧಿ (ಸ್ಯೂಡೋ ರೆಪ್ಯುಟೇಶನ್) ಅಥವಾ ಮಾನ್ಯತೆ ಸಿಗುವುದಿಲ್ಲ ಎನ್ನುವುದನ್ನೂ ಹಾಯೆಕ್ ಗುರುತಿಸುತ್ತಾರೆ.

ಕೆಲವು ನಿರ್ದಿಷ್ಟ ಜ್ಞಾನಾಧಿಕಾರ ಕೇಂದ್ರಗಳಲ್ಲಿ ಸೇರಿಕೊಂಡ ತಕ್ಷಣ ನಿಜವಾದ ವಿದ್ವಾಂಸರು ಕೂಡ ಬುದ್ಧಿಜೀವಿಗಳಾಗಿ ಬದಲಾಗುವ ಚೋದ್ಯವನ್ನೂ ಹಾಯೆಕ್ ಹೇಳುತ್ತಾರೆ. (ವಿಶ್ವವಿದ್ಯಾಲಗಳು, ಮಾಧ್ಯಮ ಇತ್ಯಾದಿ ಕ್ಷೇತ್ರದಗಳನ್ನು ಸೂಚಿಸಲು ಜ್ಞಾನಾಧಿಕಾರ ಕೇಂದ್ರ ಎನ್ನುವ ಪದವನ್ನು ಇಲ್ಲಿ ಬಳಸಿದ್ದು ನಾನು. ಆ ಅರ್ಥದ ಪದವನ್ನು ಹಾಯೆಕ್ ಬಳಸಿಲ್ಲ).

“The point which is important for us, however, is that the scholar who takes charge of an institute or foundation, the scholar who becomes an editor or the active promoter of an organization serving a particular cause, all rapidly cease to be scholars or experts and become intellectuals

in our sense, people who judge all issues not by their specific merits but, in the characteristic manner of intellectuals, solely in the light of certain fashionable general ideas. The number of such institutions which breed intellectuals and increase their number and power grows every day.”

ಹಾಯೆಕ್ ಹೇಳುವ ಪ್ರಕಾರ, ನಿಜವಾದ ವಿದ್ವಾಂಸರು ಅಥವಾ ತಜ್ಞರು ಇಂತಹ ಬುದ್ಧಿಜೀವಿಗಳ ಬಗ್ಗೆ ಅವಜ್ಞೆ ಅಥವಾ ತಿರಸ್ಕಾರ ಭಾವವನ್ನು ಹೊಂದಿರುವುದು ಮತ್ತು ಈ ಬುದ್ಧಿಜೀವಿಗಳು ಹೊಂದಿರುವ ಪ್ರಭಾವವನ್ನು ಗುರುತಿಸದೆ ಇರುವುದು ಕೂಡ ಸಹಜವೇ. ಬುದ್ಧಿಜೀವಿಗಳು ತಾವು ಮಾತನಾಡುವ ವಿಚಾರಗಳ ಬಗ್ಗೆ ಮೇಲುಮೇಲಿನ ತಿಳುವಳಿಕೆಯನ್ನಷ್ಟೇ ಹೊಂದಿರುತ್ತಾರೆ ಮತ್ತು ಅವರು ಹೊಂದಿರುವ ಬುದ್ಧಿಮತ್ತೆಯು ಸೀಮಿತವಾಗಿರುತ್ತದೆಯಾದರೂ ಅವರು ಹೊಂದಿರುವ ಪ್ರಭಾವವನ್ನು ಅವಗಣಿಸುವುದು ದೊಡ್ಡ ತಪ್ಪಾದೀತು ಎಂದು ಹಾಯೆಕ್ ಎಚ್ಚರಿಸುತ್ತಾರೆ. “But it would be a fatal mistake to underestimate their power for this reason. Even though their knowledge may be often superficial, and their intelligence limited, this does not alter the fact that it is their judgement which mainly determines the views on which society will act in the not too distant future.”

ಜ್ಞಾನವನ್ನು ಮತ್ತು ಐಡಿಯಾಗಳನ್ನು ಹರಡಲು ಆಧುನಿಕ ಸಮಾಜವೆಂಬ ದೇಹವು ಬೆಳೆಸಿಕೊಂಡ ಒಂದು ಅಂಗವಾಗಿ ನಾವು ಬುದ್ಧಿಜೀವಿ ವರ್ಗವನ್ನು ಪರಿಗಣಿಸಬಹುದು. ಹೊಸ ಗ್ರಹಿಕೆಗಳು ಮತ್ತು ಪರಿಕಲ್ಪನೆಗಳು ಈ ಬುದ್ಧಿಜೀವಿ ವರ್ಗದ ನಿರ್ಣಯಗಳು ಮತ್ತು ಅಭಿಪ್ರಾಯಗಳ ಮೂಲಕವೇ ಹಾದು ಬಂದು ಸಾಮಾನ್ಯ ಜನಸಮೂಹವನ್ನು ತಲುಪಬೇಕಾಗುತ್ತದೆ. ಬಂಡವಾಳಶಾಹಿಗಳ ಮಾಲಕತ್ವದಲ್ಲಿರುವ ಪತ್ರಿಕೆಗಳು ಅಥವಾ ಸಮಾಜವಾದಿಯಲ್ಲದ ಸರಕಾರದ ಅಡಿಯಲ್ಲಿರುವ ಪ್ರಸಾರ ಮಾಧ್ಯಮಗಳು ಕೂಡ ಸಮಾಜವಾದಿ ಬುದ್ಧಿಜೀವಿಗಳ ಪ್ರಭಾವದಿಂದ ತಪ್ಪಿಸಿಕೊಳ್ಳಲಾರವು; ತಮ್ಮ ತಮ್ಮ ಕ್ಷೇತ್ರಗಳಲ್ಲಿ ತಜ್ಞರಾದವರು ಕೂಡ ಇತರ ವಿಷಯಗಳ ಬಗ್ಗೆ ಸಮಾಜವಾದಿಗಳಾದ ಬುದ್ಧಿಜೀವಿಗಳನ್ನೇ ಅವಲಂಬಿಸುವ ಪರಿಸ್ಥಿತಿ ಇದೆ ಎಂದು ಹಾಯೆಕ್ ಗುರುತಿಸುತ್ತಾರೆ. “The result of this is that today in most parts of the Western world even the most determined opponents of socialism derive from socialist sources their knowledge on most subjects on which they have no first-hand information.” ಸಮಾಜವಾದಿ ‘ಬುದ್ಧಿಜೀವಿ’ಗಳಲ್ಲಿ ಎಲ್ಲಾ ವಿಷಯಗಳ ಬಗ್ಗೆಯೂ ಮಾಹಿತಿ ಇರುತ್ತದೆ. ಹಾಯೆಕ್ ಹೇಳುವಂತೆ ಅದು ಮೇಲುಮೇಲಿನದೇ ಮಾಹಿತಿ ಇರಬಹುದು; ಅದೇನೇ ಇದ್ದರೂ ಬುದ್ಧಿಜೀವಿಗಳಿಗೆ ಎಲ್ಲ ವಿಷಯಗಳ ಬಗ್ಗೆಯೂ ಮಾತನಾಡುವ ಲೈಸೆನ್ಸ್ ಇದೆ ತಾನೆ!

*****

ಬುದ್ಧಿಜೀವಿಗಳು ಸಮಾಜವಾದದ ಕಡೆಗೆ ಆಕರ್ಷಿತರಾಗುವುದು ಯಾಕೆ ಎನ್ನುವ ಕಾರಣಗಳನ್ನು ಕಂಡುಕೊಳ್ಳುವುದು ಬಹಳ ಮುಖ್ಯ ಎಂದು ಹಾಯೆಕ್ ಹೇಳುತ್ತಾರೆ. ಈ ಬಗೆಯ ಸಮಾಜವಾದಿ ಪೂರ್ವಗ್ರಹಕ್ಕೆ ಕಾರಣ ಸ್ವಾರ್ಥ ಅಥವಾ ಯಾವುದೋ ದುಷ್ಟ ಉದ್ದೇಶ ಎಂದು ಹಾಯೆಕ್ ಭಾವಿಸುವುದಿಲ್ಲ. ಬದಲಾಗಿ ಹೆಚ್ಚಿನ ಸಂದರ್ಭಗಳಲ್ಲಿ

ಅದು ಒಳ್ಳೆಯ ಉದ್ದೇಶದ ಪ್ರಾಮಾಣಿಕ ದೃಢನಂಬಿಕೆಯೇ ಆಗಿರುತ್ತದೆ. ಒಳ್ಳೆಯ ಉದ್ದೇಶದ ಜನರು ಹೀಗೆ ಸಮಾಜಕ್ಕೆ ಹಾನಿಕರವೆನಿಸುವ ವಿಚಾರಗಳನ್ನು ಪ್ರಚಾರ ಮಾಡುತ್ತಾರೆಂದರೆ ಅದು ನಿಜವಾದ ದೋಷ (ಜೆನ್ಯುಯಿನ್ ಎರರ್) ಎಂದು ಪರಿಗಣಿಸಬೇಕು ಎಂದು ಹಾಯೆಕ್ ಹೇಳುತ್ತಾರೆ.

ಬುದ್ಧಿಜೀವಿಗಳ ಈ ದೋಷಕ್ಕೆ ಅಥವಾ ಪೂರ್ವಗ್ರಹಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ಹಾಯೆಕ್ ಗುರುತಿಸುತ್ತಾರೆ. ಒಂದು, ಕೆಲವು ಸಾಮಾನ್ಯ ದೃಷ್ಟಿಕೋನ ಅಥವಾ ಐಡಿಯಗಳ ಹಿನ್ನೆಲೆಯಲ್ಲಿ ಅವರು ಎಲ್ಲ ನಿರ್ದಿಷ್ಟ ಸನ್ನಿವೇಶಗಳನ್ನು ನೋಡಿ ನಿರ್ಣಯಿಸುತ್ತಾರೆ. ಎರಡನೆಯದಾಗಿ, ಯಾವುದೇ ಕಾಲದಲ್ಲಿ ಇರಲಿ, ಆ ಕಾಲದಲ್ಲಿ ಕಂಡುಕೊಂಡ ಕೆಲವು ಹೊಸ ಸತ್ಯಗಳನ್ನು ಸಾಮಾನ್ಯೀಕರಣಗೊಳಿಸಿ ಎಲ್ಲವಕ್ಕೂ ಅನ್ವಯಿಸುವ ಕಾರಣದಿಂದಾಗಿ ಇಂತಹ ನಿಜವಾದ ದೋಷಗಳು ಕಾಣಿಸಿಕೊಳ್ಳುತ್ತವೆ. ಬುದ್ಧಿಜೀವಿಗಳು ಒಂದು ಸಂಗತಿಯನ್ನು ನೋಡುವ ಬಗೆ ಹೇಗೆ? “...the intellectual judges new ideas not by their specific merits but by the readiness with which they fit into his general conceptions, into the picture of the world which he regards as modern or advanced. It is through their influence on him and on his choice of opinions on particular issues that the power of ideas for good and evil grows in proportion with their generality, abstractness, and even vagueness. As he knows little about the particular issues, his criterion must be consistency with his other views, suitability to combine them into a coherent picture of the world.” ಹೀಗೆ ಹೊಸ ಐಡಿಯಾಗಳು ಅಥವಾ ಹೊಸ ಸತ್ಯಗಳು ಅನಾವರಣಗೊಂಡಾಗ ಬುದ್ಧಿಜೀವಿಗಳು ತಮ್ಮ ತಲೆಯಲ್ಲಿ ಅದಾಗಲೇ ಇರುವ ಕೆಲವು ಜನರಲ್ ಆದ ಐಡಿಯಾಗಳಿಗೆ ಈ ಹೊಸ ನಿರ್ದಿಷ್ಟ ಐಡಿಯಾಗಳನ್ನು ಅಥವಾ ಹೊಸದಾಗಿ ತಿಳಿದುಕೊಂಡ ನಿರ್ದಿಷ್ಟ ಸತ್ಯಗಳನ್ನು ಹೊಂದಿಸುವ ಕೆಲಸ ಮಾಡುತ್ತಾರೆ.

ಹಾಯೆಕ್ ಬುದ್ಧಿಜೀವಿಗಳ ಬೌದ್ಧಿಕ ಫ್ಯಾಶನ್‌ಗಳ ಬಗ್ಗೆ ಹೇಳುವುದು ಚೆನ್ನಾಗಿದೆ. ಬುದ್ಧಿಜೀವಿಗಳು ಅನ್ವಯಿಸಿಕೊಳ್ಳುವ ಹೊಸತಾದ ಪರಿಕಲ್ಪನೆಗಳು ಜನರಲ್ ಆಗಿದ್ದಷ್ಟು ಅಂದರೆ ಕಡಿಮೆ ನಿರ್ದಿಷ್ಟವಾಗಿದ್ದಷ್ಟು ಅಥವಾ ಅಸ್ಪಷ್ಟವಾಗಿದ್ದಷ್ಟೂ ಅವುಗಳು ಹೆಚ್ಚು ವ್ಯಾಪಕವಾಗಿ ಪ್ರಭಾವ ಬೀರುತ್ತವೆ! “One could give a long list of such intellectual fashions and catchwords which in the course of two or three generations have in turn dominated the thinking of the intellectuals. Whether it was the ‘historical approach’ or the theory of evolution, nineteenth century determinism and the belief in the predominant influence of environment as against heredity, the theory of relativity or thebelief in the power of the unconscious- every one of these general conceptions has been made the touchstone by which innovations in different fields have been tested. It seems as if the less specific or precise (or the less understood) these ideas are, the wider may be their influence.”

ಹಾಯೆಕ್ ಅವರ ಈ ಮೇಲಿನ ಮಾತುಗಳು ಸರಿಯಾಗಿ ಮನದಟ್ಟಾಗಬೇಕಾದರೆ

ಈಚಿನ ಕೆಲವು ವರ್ಷಗಳಲ್ಲಿ, ಕ್ವಾಂಟಮ್ ಫಿಸಿಕ್ಸಿನ ತಲೆಬುಡ ಗೊತ್ತಿಲ್ಲದ ಕನ್ನಡದ ಕೆಲವು ಲೇಖಕರು ಕೂಡ ತಮ್ಮ ಭಾಷಣಗಳಲ್ಲಿ, ಬರವಣಿಗೆಗಳಲ್ಲಿ ಕ್ವಾಂಟಮ್..... ಕ್ವಾಂಟಮ್ ಎಂಬಿತ್ಯಾದಿ ಪದಗಳನ್ನು ಬಳಸಿರುವುದನ್ನು ನೋಡಬೇಕು. ಅದೇರೀತಿ ತಮಗೆ ಬೇಕಾದ 'ಸತ್ಯ'ಗಳನ್ನು ಮಾತ್ರ ಬಳಸಿಕೊಳ್ಳಲು ಅನುಕೂಲವಾಗುವಂತೆ, ವಿಜ್ಞಾನದ 'ಸಾಪೇಕ್ಷತಾ ಸಿದ್ಧಾಂತ' ಮತ್ತು 'ಪ್ರಿನ್ಸಿಪಲ್ ಅಫ್ ಅನ್‌ಸರ್ಟನಿಟಿ' ಇವನ್ನೆಲ್ಲಾ ಉಲ್ಲೇಖಿಸುತ್ತಾ ಇತಿಹಾಸದಲ್ಲಿ ಬಹುಸತ್ಯಗಳು ಇರುತ್ತವೆ, ಸತ್ಯವು ನಾವು ನಿಂತ ನೆಲೆಯನ್ನು ಅವಲಂಬಿಸಿರುತ್ತದೆ ಎಂದು ಹೇಳುವುದನ್ನು ಕೇಳುತ್ತೇವೆ. ಹಾಗೆಯೇ ಕಳೆದ ಕೆಲವು ದಶಕಗಳಲ್ಲಿ ಆಧುನಿಕೋತ್ತರವಾದವು (ಪೋಸ್ಟ್‌ಮಾಡರ್ನಿಸಮ್) ಪಶ್ಚಿಮದಲ್ಲಿ ಹೊಸದಾಗಿ ಕಾಣಿಸಿಕೊಂಡಿತು ಎಂಬ ಕಾರಣಕ್ಕೆ ಮತ್ತು ಕನ್ನಡದ ಬಹಳ ಮಂದಿಗೆ ಅದು ಗೊತ್ತಿಲ್ಲ ಎನ್ನುವ ಕಾರಣಕ್ಕೆ ಕನ್ನಡದ ಒಂದಿಬ್ಬರು ಲೇಖಕರು ಅದನ್ನು ತಮ್ಮ ಸಂಕಥನಕ್ಕೆ ಸೇರಿಸಿಕೊಂಡು ಬಹಳ ದೊಡ್ಡ ಚಿಂತಕರು ಎನಿಸಿಕೊಂಡುದನ್ನು ನೆನಪಿಸಿಕೊಳ್ಳಬಹುದು. ವಾಸ್ತವವಾಗಿ ಆ ಆಧುನಿಕೋತ್ತರವಾದವನ್ನು ಇವರ ಸಮಾಜವಾದಕ್ಕೆ ಅಥವಾ ಮಾರ್ಕ್ಸ್‌ವಾದಕ್ಕೆ ಕಸಿ ಮಾಡಲು ಸಾಧ್ಯವೇ ಇಲ್ಲ! ಈ ವೈರುಧ್ಯವನ್ನೂ ಕನ್ನಡದ ಅನೇಕ ಓದುಗರು ಗಮನಿಸಲೇ ಇಲ್ಲ. ವಿಮರ್ಶಕರಂತೂ ಬೆರಗಿನಿಂದ ಆಧುನಿಕೋತ್ತರ ಕನ್ನಡ ಬುದ್ಧಿಜೀವಿಗಳನ್ನು ಹೊಗಳಿದ್ದೇ.

******

ಬುದ್ಧಿಜೀವಿಗಳು ತಮ್ಮ ಮೂಗಿನ ನೇರಕ್ಕೆ ಎಲ್ಲವನ್ನೂ ನೋಡಿ ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವುದರಿಂದ ಒಟ್ಟಾರೆಯಾಗಿ ಸಮಾಜಕ್ಕೆ ಆಗುವ ಹಾನಿಯೇನು ಎನ್ನುವುದನ್ನು ಸೂಚಿಸಲು ಹಾಯೆಕ್ ಯತ್ನಿಸುತ್ತಾರೆ. ಅವರ ಪ್ರಕಾರ, ಸಮಾಜ ವ್ಯವಸ್ಥೆಯಲ್ಲಿ ಇರುವ ಸಮಸ್ಯೆಗಳನ್ನು ಬುದ್ಧಿಜೀವಿಗಳು ನೋಡುವ ದೃಷ್ಟಿಕೋನಕ್ಕೆ ಕೆಲವು ಬಾರಿ ವೈಜ್ಞಾನಿಕ ಕ್ಷೇತ್ರದಲ್ಲಿ ಆದ ಬೆಳವಣಿಗೆ ಕಾರಣವಾಗಿರುತ್ತದೆ. ಮುಂದುವರಿದು ಹಾಯೆಕ್ ಹೇಳುವಂತೆ, ನಿರ್ದಿಷ್ಟ ವಿಷಯಗಳ ಬಗ್ಗೆ ಬುದ್ಧಿಜೀವಿಗಳ ದೋಷಪೂರಿತ ದೃಷ್ಟಿಯ ಹಿಂದೆ ಈಚಿನ ವೈಜ್ಞಾನಿಕ ಕ್ಷೇತ್ರದ ಸಾಧನೆಯ ಪ್ರತಿಷ್ಠೆ ಇರುತ್ತದೆ. ಅಷ್ಟೇ ಅಲ್ಲ; ವ್ಯುತ್ಕ್ರಮವಾಗಿ, ವಿಜ್ಞಾನದಂತಹ ತಜ್ಞ ಕ್ಷೇತ್ರಗಳಲ್ಲಿ ಯಾರಿಗೆ ಮಹತ್ತ್ವ ಸಿಗಬೇಕು ಎನ್ನುವುದು ಕೂಡ ಬುದ್ಧಿಜೀವಿ ವಲಯದ ನಿರ್ಣಯಗಳನ್ನೇ ಅವಲಂಬಿಸಿರುತ್ತದೆ. "..it is in such instances that their erroneous views on particular issues may for a time seem to have all the prestige of the latest scientific achievements behind them..... But in such an instance a false belief will appear with all the prestige of a result of the latest scientific knowledge. Although in the particular field to which this belief is applied, all the scientific evidence may be against it, it will nevertheless, before the tribunal of the intellectuals and in the light of the ideas which govern their thinking, be selected as the view which is best in accord with the spirit of the time. The specialists who will thus achieve public fame and wide influence will thus not be those who have gained recognition by their peers, but will often be men whom the other experts regard as

cranks, amateurs, or even frauds, but who in the eyes of general public nevertheless become the best-known exponents of their subject."

ಸಾಮಾಜಿಕ ವಿಷಯಗಳಿಗೆ ಸಂಬಂಧಿಸಿದಂತೆ ವಿಜ್ಞಾನದಲ್ಲಿನ ಬೆಳವಣಿಗೆಗಳಿಗೆ ಅಥವಾ ವೈಜ್ಞಾನಿಕ ಸಾಧನೆಗಳಿಗೆ ಬುದ್ಧಿಜೀವಿಗಳ ಮೂಲಕ ಅಷ್ಟು ಮಹತ್ತ್ವ ಸಿಗಲು ಕಾರಣವೇನು? ಕಳೆದ ನೂರು ವರ್ಷಗಳಲ್ಲಿ ನಿಸರ್ಗದ ಅನೇಕ ಶಕ್ತಿಗಳನ್ನು ಮಾನವನು ತನ್ನ ವೈಜ್ಞಾನಿಕ ಅನ್ವೇಷಣೆಗಳ ಮೂಲಕ ನಿಯಂತ್ರಿಸುವುದರಲ್ಲಿ ಯಶಸ್ವಿಯಾಗಿದ್ದಾನಲ್ಲವೆ; ಅದೇ ರೀತಿ ಸಮಾಜವನ್ನು ಕೂಡ ನಿಯಂತ್ರಿಸಿದರೆ ಮನುಷ್ಯನ ಸ್ಥಿತಿಗತಿ ಉತ್ತಮಗೊಂಡು ತಮಗೆ ಬೇಕಾದಂತಹ ಸಮಾಜವನ್ನು ಸೃಷ್ಟಿ ಮಾಡಲು ಸಾಧ್ಯ ಎನ್ನುವ ಗಾಢ ನಂಬಿಕೆ ಇದರ ಹಿಂದಿದೆ ಎಂದು ಹಾಯೆಕ್ ಸೂಚಿಸುತ್ತಾರೆ. "...That, with the application of engineering techniques, the direction of all forms of human activity according to a single coherent plan should prove to be as successful in society as it has been in innumerable engineering tasks, is too plausible a condition not to seduce most of those who are elated by the achievement of the natural sciences."

ಹೀಗೆ ಅಂತಿಮವಾಗಿ ಸಮಾಜದ ಎಲ್ಲ ಕ್ಷೇತ್ರಗಳನ್ನು ಬುದ್ಧಿಜೀವಿಗಳ ದೃಷ್ಟಿಧೋರಣೆಗಳೇ ಆಳುತ್ತವೆ. ಆದ್ದರಿಂದ ಆ ದೃಷ್ಟಿ–ಧೋರಣೆಗಳಲ್ಲಿ ಇರುವ ದೋಷಗಳನ್ನು ಗುರುತಿಸುವುದು ಮತ್ತು ಅದಕ್ಕೆ ಕಾರಣಗಳನ್ನು ಕಂಡುಕೊಳ್ಳುವುದು ಅಗತ್ಯ ಎಂದು ಹಾಯೆಕ್ ಪ್ರತಿಪಾದಿಸುತ್ತಾರೆ.

******

ಬುದ್ಧಿಜೀವಿಗಳು ಸಮಾಜವಾದದತ್ತ ಹೆಚ್ಚಾಗಿ ಒಲಿಯುತ್ತಾರೇಕೆ ಎನ್ನುವ ಪ್ರಶ್ನೆಯನ್ನು ಮುಂದುವರಿಸುತ್ತಾ ಹಾಯೆಕ್ ಹೇಳುವುದೇನೆಂದರೆ, ವಿಶ್ವವಿದ್ಯಾನಿಲಯಗಳಲ್ಲಿ ಇರುವ ಪ್ರಾಧ್ಯಾಪಕರಲ್ಲಿ ಹೆಚ್ಚಿನವರನ್ನು ಬುದ್ಧಿಜೀವಿಗಳು ಎನ್ನಬೇಕು ಹೊರತು ತಜ್ಞರು ಎಂದಲ್ಲ. ಉನ್ನತ ಶಿಕ್ಷಣ ಪಡೆದವರು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಇರುವವರು ಸಾಮಾನ್ಯವಾಗಿ ಹೆಚ್ಚು ಬುದ್ಧಿವಂತರು ಎಂದಾಗಿರುವುದರಿಂದ, ಹೆಚ್ಚು ಬುದ್ಧಿವಂತರಾದವರು ಸಮಾಜವಾದಿಗಳಾಗುತ್ತಾರೆ ಎಂದು ಭಾವಿಸುವ ಸಾಧ್ಯತೆ ಇದೆ. ಆದರೆ ಹಾಯೆಕ್ ಇದಕ್ಕೆ ಸ್ವಲ್ಪ ಬೇರೆಯೇ ಆದ ವಿವರಣೆಯನ್ನು ನೀಡುತ್ತಾರೆ.

ವರ್ತಮಾನ ಕಾಲದ ಸಮಾಜವ್ಯವಸ್ಥೆಯನ್ನು ಒಪ್ಪಿಕೊಂಡೇ ಏನನ್ನಾದರೂ ಸಾಧಿಸಬಯಸುವ ಅಥವಾ ಸುಧಾರಣೆ ಬಯಸುವ ಅಸಾಧಾರಣವಾದ ಬೌದ್ಧಿಕ ಸಾಮರ್ಥ್ಯ ಇರುವವರು (ಅಂದರೆ ಸಮಾಜವಾದಿಗಳಲ್ಲದವರು) ಇರುತ್ತಾರಲ್ಲ; ಅಂಥ ವ್ಯಕ್ತಿಗಳಿಗೆ ವಿಶ್ವವಿದ್ಯಾನಿಲಯಗಳಲ್ಲಿ ಅಥವಾ ಮತ್ತಿತರ ಜ್ಞಾನಧಿಕಾರ ಕೇಂದ್ರಗಳಲ್ಲಿ ಬುದ್ಧಿಜೀವಿಗಳಾಗಿ ಇರುವ ಬದಲು ಇತರ ಅನೇಕ ಆಯ್ಕೆಗಳಿರುತ್ತವೆ. ಅಂದರೆ, ತಮ್ಮ ಪ್ರಭಾವ ಬೀರಲು ಅಥವಾ ಅಧಿಕಾರವನ್ನು ಚಲಾಯಿಸಲು ಇತರ ಅನೇಕ ಬೌದ್ಧಿಕ ಅವಕಾಶಗಳು ತೆರೆದಿರುತ್ತವೆ. "...The main reason for this state of affairs is probably that, for the exceptionally able man who accepts the present order of society, a multitude of other avenues to influence and power are

openm while to the disaffected and dissatisfied an intellectual career is the path both to influence and to power that promises to contribute most to the achievement of his ideals...". ಸಮಾಜದಲ್ಲಿ ಆಮೂಲಾಗ್ರ ಬದಲಾವಣೆ ಉಂಟುಮಾಡಿ ಒಂದು ಆದರ್ಶ ಸ್ಥಿತಿಯನ್ನು ಊಹಿಸಿಕೊಳ್ಳುವುದು ವ್ಯಾವಹಾರಿಕವಾಗಿ ಹೆಚ್ಚು ಸಂಭವನೀಯವಾದ ಹಂತಹಂತದ ಸುಧಾರಣೆಯ ದೃಷ್ಟಿಗಿಂತ ಯಾವಾಗಲೂ ಆಕರ್ಷಕವಾಗಿರುತ್ತದೆ. ಮತ್ತೆ ಇಂತಹ ಆದರ್ಶ ಸ್ಥಿತಿಯನ್ನು ಸಮಾಜದ ಮುಂದೆ ಪರಿಣಾಮಕಾರಿಯಾಗಿ ಇಡುವವರು ಸಮಾಜವಾದಿಗಳು ಮಾತ್ರ. ಬೇರೆಯವರು ಸೂಚಿಸುವ ರಾಜೀ ಮನೋಭಾವದ ಯೋಜನೆಗಳೆಲ್ಲ ವರ್ತಮಾನದ ವ್ಯವಸ್ಥೆ ಅಥವಾ ಸ್ಥಿತಿ ಮತ್ತು ಸಮಾಜವಾದಿಗಳ ಕಲ್ಪನೆಯ ಆದರ್ಶ ಇವೆರಡು ಅತಿರೇಕಗಳ ನಡುವಿನದಾಗಿರುತ್ತವೆ. ಸತ್ಯವು ಯಾವಾಗಲೂ ಎರಡು ಅತಿರೇಕಗಳ ಮಧ್ಯೆ ಇರುತ್ತದೆ ಎಂದು ನಂಬುವವರು ಇರುವಾಗ ಜನರು ತಮ್ಮ ನಿಲುವಿಗೆ ಹೆಚ್ಚು ಹತ್ತಿರವಾಗಬೇಕಾದರೆ ಏನು ಮಾಡಬೇಕು? ತಮ್ಮ ಪ್ರತಿಪಾದನೆಯನ್ನು ಮತ್ತಷ್ಟು ಅತಿರೇಕಕ್ಕೆ ಎಳೆಯಬೇಕು! ಸಮಾಜವಾದಿಗಳು ಮಾಡುವುದು ಇದನ್ನೇ ಎಂದು ಹಾಯೆಕ್ ಗುರುತಿಸುತ್ತಾರೆ.

******

ಜಗತ್ತಿನ ವಿವಿಧ ಕಡೆಗಳಲ್ಲಿ ಸಮಾಜವಾದದ ಹೆಸರಿನಲ್ಲಿ ಎಡಪಂಥವು ಸಮಾಜದ ಮತ್ತು ವ್ಯಕ್ತಿಯ ಸ್ವಾತಂತ್ರ್ಯವನ್ನು ಹರಣ ಮಾಡಿರುವುದನ್ನು ಕಂಡಿರುವ ಹಾಯೆಕ್ ಮುಕ್ತ ಮತ್ತು ಸ್ವತಂತ್ರವಾದ ಸಮಾಜದ ಪ್ರತಿಪಾದಕರು. ಅಂತಹ ಮುಕ್ತ ಸಮಾಜವೊಂದರ ಬೆಳವಣಿಗೆಗೆ ಬೇಕಾದ ತತ್ತ್ವಶಾಸ್ತ್ರೀಯ ಬುನಾದಿಯನ್ನು ಹಾಕಿಕೊಡುವಂತಹ ಚಿಂತನೆಯನ್ನು ಮುಂದಿಡುವವರಿಗೆ ಇರುವ ಅನನುಕೂಲತೆಯೇನು ಎನ್ನುವುದನ್ನು ಕೂಡ ಹಾಯೆಕ್ ಹೇಳುತ್ತಾರೆ. ಅಂದರೆ ಸಮಾಜವಾದದ ಹೊರತಾದ ನಿಲುವುಗಳನ್ನು ಹೊಂದಿದ ವಿದ್ವಾಂಸರ ಅಥವಾ ಬುದ್ಧಿಜೀವಿಗಳ ಅನನುಕೂಲತೆಯ ಬಗ್ಗೆ ಹಾಯೆಕ್ ಇಲ್ಲಿ ಹೇಳುತ್ತಿರುವುದು. ಅಂಥ ವ್ಯಕ್ತಿಗಳು ಎರಡು ಕಡೆಯರಿಗೂ ಬೇಡದವರಾಗುವ ಸಾಧ್ಯತೆಯೇ ಹೆಚ್ಚು. ಒಂದು ಕಡೆಯವರಿಗೆ ಅಂತಹ ವಿದ್ವಾಂಸ/ಬುದ್ಧಿಜೀವಿ ಯಥಾಸ್ಥಿತಿವಾದಿಯಾಗಿ ಕಂಡರೆ, ಮತ್ತೊಂದು ಕಡೆಯವರಿಗೆ ಕ್ರಿಯಾಸಾಧ್ಯತೆಯಿಲ್ಲದ ಕೇವಲ ಸಿದ್ಧಾಂತಿಯಾಗಿ (ಥಿಯರಿಸ್ಟ್) ಆಗಿ ಕಾಣಬಹುದು. "Since the man who undertakes it must accept much of the framework of the existing order, he will appear to many of the more speculatively minded intellectuals merely as a timid apologist of things as they are; at the same time he will be dismissed by the men of affairs as an unpractical theorist". ಅವನ ಕಷ್ಟ ಏನೆಂದರೆ, ಒಂದು ವೇಳೆ ಉದ್ಯಮದಂತಹ ಕ್ಷೇತ್ರಗಳ ಮಂದಿಯ (ಮೆನ್ ಅಫ್ ಅಫೇರ್ಸ್) ಬೆಂಬಲವನ್ನು ಅವನು ಪಡೆಯಲು ಯತ್ನಿಸಿದರೆ, ಅವನ ಐಡಿಯಗಳನ್ನು ಪ್ರಚಾರ ಮಾಡಬೇಕಾದವರಿಂದಲೇ, ಅಂದರೆ, ಬುದ್ಧಿಜೀವಿಗಳಿಂದ ಅಂದರೆ, ಸಮಾಜವಾದಿ ಬುದ್ಧಿಜೀವಿಗಳಿಂದ ಅವನು ದೂರವಾಗಬೇಕಾಗುತ್ತದೆ!

ಇಂತಹ ಪರಿಸ್ಥಿತಿಯಲ್ಲಿ ಬುದ್ಧಿಜೀವಿಯೊಬ್ಬ ಸಮಾಜವಾದಿ ನಿಲುವನ್ನು ಹೊಂದಿರುವುದರ ಅನುಕೂಲತೆಯೇನು? ಅದನ್ನೂ ಹಾಯೆಕ್ ಹೇಳುತ್ತಾರೆ: ಸಮಾಜವಾದಿಯೊಬ್ಬ ಮುಂದಿಡುವ ಪ್ರಸ್ತಾವನೆಯೊಂದು ಎಷ್ಟೇ ಪೆದ್ದುಪೆದ್ದಾಗಿದ್ದರೂ

ಸಮಾಜವಾದಿಗಳು ಅವನನ್ನು ಬಿಟ್ಟುಕೊಡುವುದಿಲ್ಲ. ಆದರೆ ಸಮಾಜವಾದಿಯಲ್ಲದ ಬುದ್ಧಿಜೀವಿ ಅವರ ಟೀಕೆಯಿಂದ ತಪ್ಪಿಸಿಕೊಳ್ಳಲಾರ.

ಸಮಾಜವಾದಿ ಹಿನ್ನೆಲೆಯನ್ನು ಹೊಂದಿಲ್ಲದ ಶಿಫಾರಸುಗಳಿಗೆ ಇನ್ನೊಂದು ರೀತಿಯ ಅನನುಕೂಲತೆಯೂ ಇದೆ. ಈಗಾಗಲೇ ತಕ್ಕಷ್ಟು ಮುಕ್ತವಾಗಿರುವ ಸಮಾಜವನ್ನು ಹೊಂದಿರುವಲ್ಲಿ, ಅದನ್ನು ಇನ್ನಷ್ಟು ಉತ್ತಮ ಪಡಿಸುವ ಬಗೆಗೆ ಲಿಬರಲ್ ಪ್ರಸ್ತಾವನೆಗಳು (ಸಮಾಜವಾದಿಯಲ್ಲದ ಆಲೋಚನೆ– ಯೋಜನೆಗಳು, ಎಂದಿಟ್ಟುಕೊಳ್ಳಬಹುದು) ಅಷ್ಟೇನೂ ಆಕರ್ಷಕವೆನಿಸಲಾರವು. ಅಷ್ಟೇ ಅಲ್ಲ; ಸುಧಾರಣೆಯ ಪ್ರಸ್ತಾವನೆಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ಈಗಿನ ವರ್ತಮಾನಕಾಲದ ಸಮಾಜ ಹೇಗೆ ವ್ಯವಹರಿಸುತ್ತದೆ ಎಂಬ ಬಗ್ಗೆ ಹೆಚ್ಚಿನ ಅರಿವು ಬೇಕು. ಅಷ್ಟು ಅರಿವನ್ನು ಒಬ್ಬ ಸಾಮಾನ್ಯ ಬುದ್ಧಿಜೀವಿ (ಅವರೇಜ್ ಇಂಟಲೆಕ್ಚುಅಲ್) ಹೊಂದಿರುವುದಿಲ್ಲ. ಇನ್ನು ಈ ವರ್ತಮಾನ ಕಾಲದ ಸಮಾಜ ಹೇಗೆ ವ್ಯವಹರಿಸುತ್ತದೆ ಎಂಬ ಬಗ್ಗೆ ಹೆಚ್ಚಿನ ಅರಿವನ್ನು ಹೊಂದಿರುವವರು ಅಂತಹ ಸಮಾಜದ ಹಲವು ಗುಣಲಕ್ಷಣಗಳನ್ನು ಉಳಿಸಿಕೊಳ್ಳಲು ಬಯಸುತ್ತಾರೆ. ಹೀಗಾಗಿ ಹೊಸ ಥಿಯರಿಯನ್ನು ಅಥವಾ ಸಕಾರಾತ್ಮಕವಾದ ಬದಲಾವಣೆಗೆ ಬೇಕಾದ ಸೈದ್ಧಾಂತಿಕ ಬುನಾದಿಯನ್ನು ಅವರು ಕೂಡ ಸ್ವೀಕರಿಸುವುದಿಲ್ಲ. ಹೀಗೆ, ಒಟ್ಟಿನಲ್ಲಿ ಬುದ್ಧಿಜೀವಿಯೊಬ್ಬ ಸಮಾಜವಾದಿಯಲ್ಲದೆ ಹೋದರೆ ಯಾರ ಮೆಚ್ಚುಗೆಯನ್ನೂ ಪಡೆಯಲಾರ ಎನ್ನುವ ಸ್ಥಿತಿಯಿರುವ ಬಗ್ಗೆ ಹೇಳುತ್ತಾ ಅವನದು 'ಥ್ಯಾಂಕ್‌ಲೆಸ್' ಕೆಲಸ ಎಂದು ಹಾಯೆಕ್ ಹೇಳುತ್ತಾರೆ.

ಈಗಾಗಲೇ ಸಾಕಷ್ಟು ಸ್ವಾತಂತ್ರವನ್ನು ಪಡೆದಿರುವ ತಲೆಮಾರುಗಳಿಗೆ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದರ ಮಹತ್ತ್ವ ಅರಿವಾಗದು. ಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದೆಂದರೆ ಏನು ಎಂದು ಗೊತ್ತಿರುವ ಸಮಾಜದಲ್ಲಿ ಅದರ ಬೆಲೆಯೇನು ಎಂದು ಗೊತ್ತಿರುತ್ತದೆ. ಮುಕ್ತ ಸಮಾಜವ್ಯವಸ್ಥೆಯನ್ನು ಅನುಭವಿಸುವ ಅಮೆರಿಕದಲ್ಲಿ ಮುಕ್ತತೆ ಅಥವಾ ಸ್ವಾತಂತ್ರ್ಯವೆಂಬ ಆದರ್ಶ ಬಹಳ ಆಕರ್ಷಣೀಯವೆನಿಸದು; ಆದರೆ ಜರ್ಮನಿಯಲ್ಲಿ ಇದರ ಬಗ್ಗೆ ಯುವ ಮಂದಿ ಹೆಚ್ಚು ಉತ್ಸಾಹ ತೋರಿಸುವುದು ಸಹಜ ಎಂದು ಹಾಯೆಕ್ ಹೇಳುತ್ತಾರೆ. (ಈ ಹಿಂದೆಯೇ ಹೇಳಿರುವಂತೆ ಸುಮಾರು ಅರವತ್ತು ವರ್ಷಗಳ ಹಿಂದೆ ಹಾಯೆಕ್ ಇದನ್ನು ಬರೆದಿರುವುದು. ಹಾಯೆಕ್ ಜರ್ಮನಿಯ ವಿಚಾರ ಹೇಳುವಾಗ ಅದು ಈಚಿನ ಜರ್ಮನಿಯ ವಿಚಾರ ಅಲ್ಲ ಎನ್ನುವುದನ್ನು ನಾವು ನೆನಪಿಟ್ಟುಕೊಳ್ಳಬೇಕು).

ಮುಕ್ತ ಸಮಾಜದ ಬೆಳವಣಿಗೆಗೆ ಬುದ್ಧಿಜೀವಿಗಳ ಚಿಂತನೆ ಪೂರಕವಾಗಿರಬೇಕು ಎಂದು ಭಾವಿಸುವ ಹಾಯೆಕ್, ಸಮಾಜವಾದಿಗಳ ಯಶಸ್ಸನ್ನು ನೋಡಿ ಲಿಬರಲ್‌ಗಳು ಕಲಿಯಬೇಕಾದ ಪಾಠವೇನು ಎಂಬುದನ್ನು ಹೇಳುತ್ತಾರೆ. ಮುಖ್ಯ ಪಾಠವೇನೆಂದರೆ, ಯುಟೋಪಿಯನ್ ಆಗುವ, (ಒಂದು ಕಲ್ಪಿತ ಆದರ್ಶ ಸ್ಥಿತಿಯನ್ನು ಕಾಣಿಸುವ), ಧೈರ್ಯ ತೋರಿಸಬೇಕು ಎನ್ನುವುದು. ಆ ಧೈರ್ಯವೇ ಸಮಾಜವಾದಿಗಳಿಗೆ ಬುದ್ಧಿಜೀವಿಗಳ ಬೆಂಬಲ ಸಿಗಲು ಕಾರಣವಾಗಿದೆ. ಒಂದು ಮುಕ್ತ ಸಮಾಜವು ಉಳಿದು ಬೆಳೆಯಲು ಬೇಕಾದ ತತ್ತ್ವಶಾಸ್ತ್ರೀಯ ಬುನಾದಿಯನ್ನು ಹಾಕಿಕೊಡುವುದು ಆದ್ಯತೆಯ ಬೌದ್ಧಿಕ ಸಂಗತಿಯಾಗದಿದ್ದರೆ ಹಾಗೂ ಅದನ್ನು ಕಾರ್ಯರೂಪಕ್ಕೆ ತರುವ ಮಹತ್ಕಾರ್ಯವು ಉತ್ಸಾಹಿತ ಮನಸ್ಸುಗಳ ಜಾಣ್ಮೆ ಮತ್ತು ಕಲ್ಪನೆಗಳಿಗೆ ಸವಾಲನ್ನು ಒಡ್ಡದಿದ್ದರೆ, ಮುಕ್ತ ವಾತಾವರಣದ ಸಂಭವನೀಯತೆ ಕಡಿಮೆಯಾಗುತ್ತಾ ಹೋದೀತು ಎಂದು ಎಚ್ಚರಿಸುತ್ತಾ

ಉದಾರವಾದದ ಬೌದ್ಧಿಕ ಪುನರುಜ್ಜೀವನ ಆಗಬೇಕೆಂದು ಹಾಯೆಕ್ ಹಾರೈಸುತ್ತಾರೆ.

*****

ಈ ಲೇಖನದಲ್ಲಿ ಚರ್ಚಿಸಲಾದ, ಬರಹವನ್ನು ನಾನು ಓದಲು ಸಾಧ್ಯವಾದುದು ಶ್ರೀ ಗಿರೀಶ್ ವಾಘ್ ಅವರಿಂದಾಗಿ. ಅವರಿಗೆ ಕೃತಜ್ಞತಾರ್ಪಣೆಯ ಭಾಗವಾಗಿ ಈ ಲೇಖನವನ್ನು ಬರೆದಿದ್ದೇನೆ. ವಾಘ್ ಅವರ ಜೊತೆ ದೂರವಾಣಿಯಲ್ಲಿ ನಾನು ಕೆಲವೊಮ್ಮೆ ಮಾತನಾಡುವುದಿದೆ. ಹಾಗೆ ಮಾತನಾಡುವಾಗಲೆಲ್ಲ ಅವರು ಹಲವಾರು ಪುಸ್ತಕಗಳ ಬಗ್ಗೆ, ಅವುಗಳಲ್ಲಿರುವ ವಿಚಾರಗಳ ಬಗ್ಗೆ ಒಳನೋಟಗಳ ಬಗ್ಗೆಯೆಲ್ಲ ಹೇಳುವುದಿದೆ. ಅವರು ಸೂಚಿಸಿದ ಎಷ್ಟೋ ಪುಸ್ತಕ– ಲೇಖನಗಳನ್ನು ಓದಲಾಗಲಿಲ್ಲ ಎನ್ನುವ ಕೊರಗೂ ನನಗಿದೆ. ಒಂದೆರಡು ವರ್ಷಗಳ ಹಿಂದೆ ಒಮ್ಮೆ ದೂರವಾಣಿಯಲ್ಲಿ ಮಾತನಾಡುವಾಗ ಅವರು ಎಫ್. ಎ. ಹಾಯೆಕ್ ಅವರ ಸ್ಟಡೀಸ್ ಇನ್ ಫಿಲಾಸಫಿ, ಪೊಲಿಟಿಕ್ಸ್ ಅಂಡ್ ಇಕನಾಮಿಕ್ಸ್ (1967) ಅನ್ನುವ ಪುಸ್ತಕದ ಬಗ್ಗೆ ಹೇಳಿದ್ದರು. ಬಳಿಕ ಅದರ ಒಂದು ಅಧ್ಯಾಯವನ್ನು ಕಳುಹಿಸಿಕೊಟ್ಟಿದ್ದರು.

ಗಿರೀಶ್ ವಿ. ವಾಘ್ ಅವರು ಕನ್ನಡದ ಒಬ್ಬ ಅಪರೂಪದ ವಿದ್ವಾಂಸರು. ಅವರು ಕನ್ನಡ ಸಾಹಿತ್ಯ, ಸಮಾಜ, ಸಂಸ್ಕೃತಿ ಇತ್ಯಾದಿ ವಿಷಯಗಳಿಗೆ ಸಂಬಂಧಿಸಿ ಸಾಕಷ್ಟು ಓದಿಕೊಂಡಿದ್ದಾರೆ. ಶಿಕ್ಷಣ ಕ್ಷೇತ್ರದ ಬಗ್ಗೆ ಅವರ ಒಳನೋಟ ಕೂಡ ಗಮನಾರ್ಹವಾಗಿದೆ. ಇಂಗ್ಲಿಷಿನಲ್ಲಿ ಬಂದ ಅನೇಕ ಪುಸ್ತಕ, ಲೇಖನಗಳನ್ನೂ ಅಧ್ಯಯನ ಮಾಡಿದ್ದಾರೆ. ಸಾರ್ವಜನಿಕರಿಗೆ ಪ್ರವೇಶವಿರುವ, ಬೆಂಗಳೂರಿನ ಎಲ್ಲ ಗ್ರಂಥಾಲಯಗಳಿಗೂ ಅವರು ಬಹುಶಃ ಭೇಟಿಕೊಟ್ಟಿದ್ದಾರೆ. ಅಲ್ಲಿರುವ ಪುಸ್ತಕಗಳ ಪ್ರಯೋಜನವನ್ನು ಪಡೆದಿದ್ದಾರೆ. ಅವರ ಜೊತೆ ಅರ್ಧಗಂಟೆ ಮಾತನಾಡಿದರೆ ಹತ್ತು ಪುಸ್ತಕಗಳನ್ನು ಓದಿದಷ್ಟು ವಿಷಯ ತಿಳಿಯುತ್ತದೆ. ಸಾಹಿತ್ಯವೇ ಮೊದಲಾಗಿ ಮತ್ತಿತರ ವಿಚಾರಗಳ ಬಗ್ಗೆ ಅವರಷ್ಟು ಓದಿಕೊಂಡವರು ಕನ್ನಡದ ಶೈಕ್ಷಣಿಕ ಕ್ಷೇತ್ರದಲ್ಲಿ ಅಥವಾ ವಿಶ್ವವಿದ್ಯಾಲಯಗಳಲ್ಲಿ ವಿರಳ.

ಹೀಗಿದ್ದರೂ ಗಿರೀಶ್ ವಾಘ್ ಅವರ ಜ್ಞಾನವನ್ನು ಮತ್ತು ಒಳನೋಟಗಳನ್ನು ಕನ್ನಡದ ಶೈಕ್ಷಣಿಕ ವಲಯವು ಸಾಕಷ್ಟು ಬಳಸಿಕೊಂಡಿಲ್ಲ. ಅವರು ಕನ್ನಡ ವಿದ್ವತ್‌ವಲಯದಲ್ಲಿ ಪಡೆಯಬೇಕಾದಷ್ಟು ಗಮನವನ್ನು ಪಡೆಯದೆ ಇರಲು ಕೆಲವು ಕಾರಣಗಳಿವೆ. ಮೊದಲನೆಯದಾಗಿ, ಅವರು ವಿಶ್ವವಿದ್ಯಾಲಯ/ಕಾಲೇಜು/ಪತ್ರಿಕೋದ್ಯಮಗಳಂಥ ಜ್ಞಾನಾಧಿಕಾರ ಕೇಂದ್ರಗಳ ಹೊರಗೆ ಇರುವವರು. ಎರಡನೆಯದಾಗಿ, ಮುಂಚೂಣಿ ಕನ್ನಡ ಲೇಖಕರಿಗೆ ಯಾವ ದೃಷ್ಟಿ, ಧೋರಣೆ, ಸಿದ್ಧಾಂತ ಇಷ್ಟವಾಗುತ್ತದೋ ಅದನ್ನೇ ಹೇಳಬೇಕೆಂದು ತೊಡಗುವವರು ಅವರಲ್ಲ.

ಇನ್ನೊಂದು ಮಾತು: ಇಲ್ಲಿ ಗಿರೀಶ್ ವಾಘ್ ಬಗ್ಗೆ ಈ ಒಂದೆರಡು ಮಾತುಗಳನ್ನು ನಾನು ಹೇಳುತ್ತಿರುವುದು ಯಾಕೆ ಎನ್ನುವುದು ಈ ಲೇಖನದಲ್ಲಿ ಹೇಳಿದ ಅಂಶಗಳನ್ನು ನೆನಪಿಸಿಕೊಂಡಾಗ ಓದುಗರಿಗೆ ಮನವರಿಕೆಯಾದೀತು. ಅಂದರೆ, ಓದುಗರು ಈಗಾಗಲೇ ಗ್ರಹಿಸಿರಬಹುದಾದಂತೆ, ಗಿರೀಶ್ ವಾಘ್ ಬಗ್ಗೆ ಕನ್ನಡದ ವಿದ್ವತ್ ವಲಯ ಹೆಚ್ಚು ಉತ್ಸಾಹ ತೋರಿಸದೆ ಇರಲು ಪ್ರಮುಖ ಕಾರಣ ಹಾಯೆಕ್ ಹೇಳಿದುದೇ ಆಗಿದೆ.

❖❖❖

# ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ ಮತ್ತು ಆಧ್ಯಾತ್ಮಿಕತೆ : ಒಂದು ವಿಶ್ಲೇಷಣೆ

**ಡಾ. ರೋಹಿಣಾಕ್ಷ ಶಿರ್ಲಾಲು**
ಸಹಾಯಕ ಪ್ರಾಧ್ಯಾಪಕರು,
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯ, ಕಲಬುರ್ಗಿ

ಕುವೆಂಪು ಅವರ ಸಾಹಿತ್ಯವನ್ನು ಹಲವು ಆಯಾಮಗಳಲ್ಲಿ ಹಲವು ವಿದ್ವಾಂಸರು ಅಧ್ಯಯನ ಮಾಡಿರುತ್ತಾರೆ. ಕುವೆಂಪು ಸಾಹಿತ್ಯದಲ್ಲಿ ಪ್ರಕಟವಾಗಿರುವ ವೈಚಾರಿಕತೆ ಮತ್ತು ಆಧ್ಯಾತ್ಮಿಕತೆ ಎನ್ನುವ ಎರಡು ಸಂಗತಿಗಳು ಅನೇಕರ ಗಮನ ಸೆಳೆದಿದೆ. ಈ ಕುರಿತು ಈಗಾಗಲೇ ಅನೇಕರು ತಮ್ಮದೇ ನಿಲುವುಗಳನ್ನು ಪ್ರಕಟಪಡಿಸಿದ್ದಾರೆ. ಹೀಗಿದ್ದರೂ ಈ ವಿಷಯದ ಕುರಿತು ಇನ್ನಷ್ಟು ಅಧ್ಯಯನದ ಅಗತ್ಯವಿದೆ. ಪ್ರಸ್ತುತ ಲೇಖನದಲ್ಲಿ ವೈಚಾರಿಕತೆ ಮತ್ತು ಆಧ್ಯಾತಿಕತೆಯ ನಡುವಿನ ಪರಸ್ಪರ ಸಂಬಂಧ, ಅವುಗಳ ಕುರಿತಾಗಿ ಕುವೆಂಪು ಅವರ ಒಲವು ನಿಲುವುಗಳ ಕುರಿತಾಗಿ ಚರ್ಚಿಸಲಾಗುವುದು.

ವೈಚಾರಿಕತೆಯಲ್ಲಿ ತರ್ಕ, ಪ್ರಶ್ನೆಯನ್ನು ಒಳಗೊಂಡ ವಿಜ್ಞಾನದ ಮೂಲವಿದ್ದರೆ, ಅಧ್ಯಾತ್ಮದಲ್ಲಿ ಶ್ರದ್ಧೆ, ನಂಬಿಕೆಯ ಪರಂಪರೆಯ ಮೂಲ ಇರುತ್ತದೆ ಎನ್ನುವುದು ಒಂದು ಸಾಮಾನ್ಯ ಗ್ರಹಿಕೆ. ಆದರೆ ಕುವೆಂಪು ಅವರ ಸಾಹಿತ್ಯದಲ್ಲಿ ವೈಚಾರಿಕತೆಯೂ, ಅಧ್ಯಾತ್ಮವೂ ಅದರ ಗ್ರಹಿತಾರ್ಥದಿಂದ ಇನ್ನೂ ವಿಕಸಿಸಿ ಹೊಸದೊಂದು ಮಾದರಿಯನ್ನು ಹುಟ್ಟುಹಾಕಿದೆ. ಹೀಗಾಗಿ ಅವರಲ್ಲಿ ವೈಚಾರಿಕತೆಗೂ, ಆಧ್ಯಾತ್ಮಿಕತೆಗೂ ಪರಸ್ಪರ ವಿರೋಧ ಭಾವ ಇಲ್ಲ. ಒಂದರೊಳಗೊಂದು ಕೂಡಿಕೊಂಡ ಮಾದರಿಯಲ್ಲಿದೆ. ಕುವೆಂಪು ಅವರಲ್ಲಿ ಪರಂಪರೆಯ ಹಿನ್ನೆಲೆಯೂ ಇದೆ. ನಿರಂಕುಶಮತಿ ತತ್ವವೂ ಇದೆ. ಆದರೆ ಕುವೆಂಪು ಅವರಲ್ಲಿ ವೈಚಾರಿಕತೆ, ವೈಜ್ಞಾನಿಕತೆ ಮಾತ್ರವಲ್ಲ ಆಧ್ಯಾತ್ಮಿಕತೆ, ದಾರ್ಶನಿಕತೆಯೂ ಮೌಢ್ಯತೆಯ ವಿರುದ್ಧದ ಧ್ವನಿಯೇ ಆಗಿದೆ. ಕುವೆಂಪು ತಮ್ಮ ಸಾಹಿತ್ಯ, ಕೃತಿಗಳಲ್ಲಿ ವೇದ–ಉಪನಿಷತ್, ರಾಮಾಯಣವೇ ಮೊದಲಾದ ಧಾರ್ಮಿಕ ವಸ್ತುಗಳನ್ನು ವಿಶೇಷವಾಗಿಯೇ ಬಳಸಿಕೊಂಡು ತಮ್ಮ ಅಭಿವ್ಯಕ್ತಿಯನ್ನು ಮಾಡಿದುದರಿಂದ ಅವರ ಸಾಹಿತ್ಯದ ವೈಚಾರಿಕತೆಯ ಆಯಾಮಕ್ಕೆ ಧಕ್ಕೆಯಾಗಲಿಲ್ಲ. ಬದಲಾಗಿ ವಿಶ್ವಮಾನವ ತತ್ವದ ನೆಲೆಗಟ್ಟೇ ಈ ಸಾಹಿತ್ಯ ಕೃತಿಗಳಾದವು. ಪರಸ್ಪರ ವಿರೋಧವಲ್ಲ. ಇವೆಲ್ಲವನ್ನೂ ಒಳಗೊಂಡ ಒಂದು ಅಖಂಡ ಪ್ರಜ್ಞೆ ಕುವೆಂಪು ಅವರಲ್ಲಿತ್ತು.

ವಾಸ್ತವದಲ್ಲಿ ಕುವೆಂಪು ಮತ–ಧರ್ಮದ ಹೆಸರಿನಲ್ಲಿ ಪ್ರಕಟವಾಗುತ್ತಿದ್ದ ಎಲ್ಲ ಸಂಕುಚಿತತೆಗಳನ್ನು ಮೀರಿದ್ದರು. ಮೌಢ್ಯಗಳನ್ನು ತಿರಸ್ಕರಿಸಿದ್ದರು. ಚಲನಶೀಲತೆಯನ್ನು ಕಳೆದುಕೊಂಡು ಮತದ ಮುಖವಾಡವನ್ನು ಹೊಂದಿರುವ ಎಲ್ಲಾ ಸಂಗತಿಗಳನ್ನು ನಿರ್ದಾಕ್ಷಿಣ್ಯವಾಗಿ ತಿರಸ್ಕರಿಸುತ್ತಲೇ, ಧರ್ಮದ ನೈತಿಕ ನೆಲೆಯನ್ನು, ಶುದ್ಧ ಅಧ್ಯಾತ್ಮವನ್ನು ಪ್ರಕಟಪಡಿಸಿದ್ದು ಕೇವಲ ಧಾರ್ಮಿಕತೆ ಮಾತ್ರವಲ್ಲ, ಅವರ ವೈಚಾರಿಕತೆಯೂ ಹೌದು. ಅವರ ಕೃತಿಗಳಲ್ಲಿ ಪ್ರಕಟವಾದುದು ವೈಚಾರಿಕವಾದ ಅಧ್ಯಾತ್ಮವೇ ಆಗಿದೆ.

ಡಾ. ವಿಠಲರಾವ್ ಗಾಯಕ್‌ವಾಡ್ ಗುರುತಿಸುವಂತೆ "ಪರಸ್ಪರ ವೈರುಧ್ಯ ಅಂಶಗಳೆನಿಸಿರುವ ವಿಜ್ಞಾನ ಮತ್ತು ಅಧ್ಯಾತ್ಮಗಳು ಮಾನವ ಬದುಕಿನ ಔನ್ನತ್ಯವನ್ನೇ ಸಾರುತ್ತದೆ ಎಂಬುದು ಅವರ ಚಿಂತನೆಯ ವೈಶಿಷ್ಟ್ಯ. ಈ ಹಿನ್ನೆಲೆಯಲ್ಲಿ ಅವರು ತಮ್ಮದು 'ವೈಜ್ಞಾನಿಕ ಧರ್ಮ' ಎಂದು ಹೇಳಿದ್ದಾರೆ" (ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ, ಪುಟ–10). ಅಂದರೆ ಕುವೆಂಪು ಅವರಿಗೆ ವಿಜ್ಞಾನವೂ, ಅಧ್ಯಾತ್ಮವೂ ಒಂದೇ ಸಮಾನ ಉದ್ದೇಶಕ್ಕಾಗಿ ಸಮಾನ ಮಹತ್ವವನ್ನು ಪಡೆದಿದೆ. ಹೀಗಾಗಿ ಕುವೆಂಪು ಅವರಲ್ಲಿ ಈ ಆಯ್ಕೆಯ ಹಿಂದೆ ಯಾವುದೇ ಗೊಂದಲವಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಕುವೆಂಪು ಅವರು ಸಾಹಿತ್ಯ ರಚಿಸುವ ಕಾಲಕ್ಕೆ ವೈಚಾರಿಕತೆಯ ಪ್ರಕಟೀಕರಣದ ಬೇರೆ ಮಾದರಿಗಳೂ ಇದ್ದುವು. ಒಂದೆಡೆ ವೈಚಾರಿಕತೆಯ ಹೆಸರಿನಲ್ಲಿ 'ವಿಗ್ರಹ ಭಂಜನೆ'ಯೂ ನಡೆಯುತ್ತಿತ್ತು. ಈ ಮಾದರಿಯೂ ವಿಚಾರವಾದದ ಮನ್ನಣೆಯನ್ನು ಪಡೆದಿತ್ತು. ಆದರೆ ಕುವೆಂಪು ಆಯ್ಕೆ ಮಾಡಿಕೊಂಡಿದ್ದು ಭಂಜನೆಯ ಮಾರ್ಗವನ್ನಲ್ಲ, ವಿಮರ್ಶೆಯ ಮಾರ್ಗವನ್ನು. ವಿಮರ್ಶೆಯು ತೀವ್ರತೆಯಲ್ಲಿ ಕಿಂಚಿತ್ತೂ ಕಡಿಮೆ ಇರಲಿಲ್ಲ. ಆದರೆ ಅದು ಅಂತಿಮವಾಗಿ ಒಡಕನ್ನು ಉಂಟುಮಾಡುವ ಉದ್ದೇಶದ್ದಾಗಿರಲಿಲ್ಲ. ಪರಂಪರೆಯನ್ನೇ ಭಂಜಿಸುವ ಬದಲು ಪರಂಪರೆಯಿಂದ ಉತ್ತಮವಾದುದನ್ನು ಹೆಕ್ಕಿ ತೆಗೆದು, ಕಾಲಬಾಹಿರವಾದುದನ್ನು ತ್ಯಜಿಸಿದರು. ಯಾವುದರೊಳಗೆ ಕಾಲಾತೀತವಾಗಿ ನಿಲ್ಲುವ ಚೈತನ್ಯವಿದೆಯೋ ಅವುಗಳನ್ನು ಮರುಸ್ಥಾಪಿಸಿದರು. ಸತ್ವಹೀನವಾದುದನ್ನು ವಿಮರ್ಶಾತ್ಮಕವಾಗಿಯೇ ಬದಿಗೆ ಸರಿಸಿದರು.

ಕುವೆಂಪು ಅವರು ಪೂರ್ವಾಗ್ರಹ ಪೀಡಿತರಲ್ಲ. ಆದರೆ ಅಂಧಶ್ರದ್ಧೆಯವರೂ ಅಲ್ಲ. ಅವರು ಓರ್ವ ಮುಕ್ತ ಮನಸ್ಸಿನ ವಿಮರ್ಶಕ. ಹೀಗಾಗಿ ಅವರು ನಮ್ಮ ಜನರ ಮನಸ್ಸಿನಲ್ಲಿರುವ ದೋಷಪೂರ್ಣ ಗ್ರಹಿಕೆಯ ಬಗೆಗೆ ನಿರುದ್ವಿಗ್ನವಾಗಿಯೇ ಹೇಳುತ್ತಾರೆ. ಹತ್ತೊಂಬತ್ತನೇ ಶತಮಾನದಾದ್ಯಂತ ಸುಧಾರಣಾ ಆಂದೋಲನಗಳು ದೇಶಾದ್ಯಂತ ನಡೆಯುತ್ತಿತ್ತು. ಒಂದೆಡೆ ಎಲ್ಲಾ ಪ್ರಾಚೀನ ಗ್ರಂಥಗಳೂ, ಮತಾಚರಣೆಗಳು ದೋಷರಹಿತವೆಂದು ಭಾವಿಸಿ ಅವುಗಳನ್ನು ವೈಜ್ಞಾನಿಕತೆಯ ಮಾನದಂಡದಿಂದ ವಿವರಿಸುವ ಪ್ರಯತ್ನಗಳು ಒಂದೆಡೆಯಾದರೆ, ಇನ್ನೊಂದೆಡೆ ಪ್ರಾಚೀನವಾದ ಕಾರಣದಿಂದಲೇ ಎಲ್ಲವನ್ನೂ ತಿರಸ್ಕರಿಸುವ, ಅವುಗಳ ನಾಶಕ್ಕಾಗಿ ಬೆಂಕಿ ಹಚ್ಚುವ ಕೆಲಸಗಳು ನಡೆಯುತ್ತಲೇ ಇದ್ದಿತು. ಆದರೆ, ಚಿತ್ತ ಶುದ್ಧದಿಂದ ವಿಮರ್ಶಾತ್ಮಕವಾಗಿ ಮೌಲ್ಯಮಾಪನ ಮಾಡಿ ಗುಣ–ದೋಷಗಳನ್ನು ಗುರುತಿಸುವುದು ಕುವೆಂಪು ಅವರಂಥವರಿಗೆ ಮಾತ್ರ ಸಾಧ್ಯವಾಗುವುದು. ಇದೇ ಕುವೆಂಪು ಅವರ ವಿಶೇಷತೆ. ಮನುಷ್ಯ ಕೃತಿಗಳು ದೋಷಾತೀತವಲ್ಲ ಎನ್ನುವುದನ್ನು ಒಪ್ಪಿಕೊಳ್ಳುವುದು ವೈಚಾರಿಕತೆಯ ಪ್ರತಿಫಲನ. ಹೀಗಾಗಿ ಅವರು ನಿರಂಕುಶಮತಿತ್ವವನ್ನು ಬೋಧಿಸಲು ಸಾಧ್ಯವಾಯಿತು. ಯಾರು ನಿರಂಕುಶಮತಿಗಳಾಗುತ್ತಾರೋ ಅವರು ಕುರುಡಾಗಿ ಒಪ್ಪುವುದೂ ಇಲ್ಲ, ಕುರುಡಾಗಿ ದ್ವೇಷಿಸುವುದೂ ಇಲ್ಲ ಎನ್ನುವುದು ಅವರ ನಿಲುವು.

ಅವರ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಕೃತಿಯ ಮೂರನೇ ಮುದ್ರಣದ ಮುನ್ನುಡಿಯಲ್ಲಿ ಹೇಳಿಕೊಳ್ಳುವಂತೆ, ಆತ್ಮಶ್ರೀಗಾಗಿ ನಿರಂಕುಶಮತಿಯಾದ ವಿದ್ಯಾರ್ಥಿ "'ವಿಜ್ಞಾನ ಮತ್ತು ಅಧ್ಯಾತ್ಮ (ಮತವನ್ನಲ್ಲ, ಮೌಢ್ಯವನ್ನಲ್ಲ, ಅಂಧಶ್ರದ್ಧೆಯನ್ನಲ್ಲ ಅಂಧಾಚಾರವನ್ನಲ್ಲ) ಇವೆರಡನ್ನೂ ಕೆಚ್ಚಿನಿಂದ, ನಿಷ್ಠೆಯಿಂದ, ದೃಢಬುದ್ಧಿಯಿಂದ

ಆಶ್ರಯಿಸಿ ವಿಚಾರವಾದಿಯಾಗಿ ವೈಜ್ಞಾನಿಕ ದೃಷ್ಟಿಸಂಪನ್ನನಾಗಿ ಮುಂಬರಿದು ತನಗೂ ಲೋಕಕ್ಕೂ ಕಲ್ಯಾಣವಾಗುವಂತೆ ಬಾಳುತ್ತಾನೆ. ದಾರಿಯ ಮುಳ್ಳನ್ನೆಲ್ಲಾ ತೆಗೆಯಲಾಗದಿದ್ದರೂ ತನ್ನ ಕಾಲಿಗಾದರೂ ಮೆಟ್ಟು ಹಾಕಿಕೊಂಡು ಮುನ್ನಡೆದು ಗುರಿಗೆ ಸೇರುತ್ತಾನೆ" (ಕುವೆಂಪು ಸಮಗ್ರ ಗದ್ಯ ಸಂ–2) ಎನ್ನುತ್ತಾರೆ. ಈ ನಿಲುವು ಬಹು ಮುಖ್ಯವಾದುದು. ವೈಜ್ಞಾನಿಕ ದೃಷ್ಟಿಯ ಗುರಿ ಲೋಕಕಲ್ಯಾಣ. ಲೋಕಕಲ್ಯಾಣದ ಆಶಯ ಇಲ್ಲವಾದ ವೈಚಾರಿಕತೆಯಾಗಲೀ, ಆಧ್ಯಾತ್ಮಿಕತೆಯಾಗಲೀ ವ್ಯರ್ಥ. ವೈಚಾರಿಕತೆ ಎನ್ನುವುದು ಅಧ್ಯಾತ್ಮವನ್ನು ಬಿಟ್ಟಿಲ್ಲ. ಆದರೆ ಅಧ್ಯಾತ್ಮವೆಂದರೆ ಕುರುಡಲ್ಲ. ಈ ಎಚ್ಚರದ ಸ್ವೀಕಾರದಲ್ಲಿ ವ್ಯಕ್ತಿಯ ಕಲ್ಯಾಣವೂ ಇದೆ, ಲೋಕದ ಕಲ್ಯಾಣವೂ ಇದೆ. ಹಾಗೆಂದು ತಾನು ಲೋಕದ ಕಲ್ಯಾಣವನ್ನು ಮಾಡುವ ಕ್ರಿಯೆ ಅಷ್ಟೊಂದು ಸರಳವಾದುದಲ್ಲ. ಹೀಗಾಗಿ ಲೋಕಕಲ್ಯಾಣ ಸಾಧ್ಯವಾಗದಿದ್ದರೆ, ವ್ಯಕ್ತಿ ಕಲ್ಯಾಣವನ್ನಾದರೂ ಸಾಧಿಸುವುದಕ್ಕೆ ಸಾಧ್ಯ ಎನ್ನುವುದನ್ನು ದಾರಿಯ ಮುಳ್ಳನ್ನು ತೆಗೆಯಲಾಗದಿದ್ದರೆ, ಕಾಲಿಗೆ ಮೆಟ್ಟು ಹಾಕಿಕೊಂಡಾದರೂ ನಡೆದು ಗುರಿ ಸೇರುವ ಕಲ್ಪನೆಯನ್ನು ಮುಂದಿಡುತ್ತಾರೆ.

ಅವರ ಬಹುಪ್ರಸಿದ್ಧವಾದ 'ಆತ್ಮಶ್ರೀಗಾಗಿ ನಿರಂಕುಶಮತಿಗಳಾಗಿ' ಎನ್ನುವ ಉಪನ್ಯಾಸದಲ್ಲಿ ಮತವನ್ನು ಕುರಿತಾಗಿ ಮಾಡಿದ ವಿಮರ್ಶೆಯೇ ಅವರ ನಿಲುವನ್ನು ಬಹು ಸ್ಪಷ್ಟವಾಗಿ ತೋರಿಸಿಕೊಡುತ್ತದೆ. "ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ. ಪರಮಶಾಂತಿಯೂ, ಪರಮಾನಂದವೂ ಆಗಿರುವ ಪರಮೇಶ್ವರನನ್ನು ಪಡೆಯಲೆಂದು ಜೀವ ಮಾಡುವ ಪ್ರಯತ್ನವೇ ಮತದ ನಿಜಾವಸ್ಥೆ. ಆದರೆ ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟುಕಟ್ಟಳೆಗಳ ಕಾಟವಾಗಿದೆ... ಉಪನಿಷತ್, ಭಗವದ್ಗೀತೆ ಮತ್ತು ಮಹಾವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತ ಸಂದೇಶ ಅರಣ್ಯರೋಧನವಾಗಿದೆ" (ಕುವೆಂಪು ಸಮಗ್ರ ಗದ್ಯ ಸಂ–2, ಪು–66) ಎನ್ನುತ್ತಾರೆ. ಅಂದರೆ ಯಾವುದು ದಾರಿಯಾಗಬೇಕಾಗಿತ್ತೋ, ಅದೇ ಇಂದು ದಾರಿಗಡ್ಡವಾದ ಮುಳ್ಳಾಗಿದೆ. ಪರಿಣಾಮವಾಗಿ ಯಾವ ಅನುಭೂತಿಯನ್ನು ಪಥಿಕರು ಪಡೆಯಬೇಕಾಗಿತ್ತೋ, ಅದರಿಂದ ಅವರು ಸಂಪೂರ್ಣವಾಗಿ ವಂಚಿತರಾಗಿದ್ದಾರೆ. ಜನರ ಬಿಡುಗಡೆಗೆ ಬೆಳಕಾಗಬೇಕಾಗಿದ್ದ ಶ್ರೇಷ್ಠವಾದ ಸಂದೇಶಗಳು ನಮ್ಮ ಅಜ್ಞಾನದ ಕಾರಣಕ್ಕಾಗಿಯೇ ನಂದಿಹೋಗಿದೆ. ಕತ್ತಲೆ ಆವರಿಸಿಕೊಂಡಿದೆ. ಇದು ಸಾಧಕರ ನಿಜ ಸಾಧನೆಗೂ ಅಡ್ಡಿಯಾಗಿದೆ ಎನ್ನುವುದು ಕುವೆಂಪು ಅವರ ಅಭಿಮತವಾಗಿದೆ.

ಕುವೆಂಪು ಅವರ ಅಧ್ಯಾತ್ಮದ ಕಲ್ಪನೆಯ ವೈಶಿಷ್ಟ್ಯವನ್ನು ಗುರುತಿಸುತ್ತಾ ಡಾ. ವಿಠಲರಾವ್ ಗಾಯಕ್‌ವಾಡ್ "ಭಾರತೀಯ ಮತ್ತು ಪಾಶ್ಚಾತ್ಯ ತತ್ವಶಾಸ್ತ್ರವನ್ನೆಲ್ಲ ಅಭ್ಯಸಿಸಿದ್ದ ಕುವೆಂಪು ಅವರು ಸಾಂಸ್ಥಿಕ ಧರ್ಮವನ್ನು ವಿರೋಧಿಸಿ ಪರಿಶುದ್ಧ ಅಧ್ಯಾತ್ಮವನ್ನು ಒಪ್ಪಿಕೊಂಡರು. ಅವರ ವೈಚಾರಿಕತೆಯ ಸ್ವರೂಪವು ಧಾರ್ಮಿಕ ಮಾನವತಾವಾದದ ಕಾಳಜಿಯಾಗಿದೆ. ಅವರ ಆಧ್ಯಾತ್ಮಿಕತೆಯಲ್ಲಿ ಸಾಮಾಜಿಕ ನ್ಯಾಯದ ಕಲ್ಪನೆ, ವೈಯಕ್ತಿಕ ನೈತಿಕತೆ ಹಾಗೂ ಸಮಾನತೆಗಳು ಮೂಲ ನೆಲೆಗಟ್ಟಾಗಿದೆ. ಮನುಷ್ಯನ ವೈಯಕ್ತಿಕ ಶೋಧನೆ ಹಾಗೂ ಕುತೂಹಲಗಳ ಫಲವೇ ಆಧ್ಯಾತ್ಮಿಕತೆ. ಅದು ಸಮಾಜದ ವರ್ತನೆಗಳ ಮೇಲೆ ನೇರೆ ಪ್ರಭಾವ ಬೀರುವ ಸಾಂಸ್ಥಿಕ ಧರ್ಮಕ್ಕಿಂತ ವಿರುದ್ಧವಾದುದು" (ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ, ಪುಟ–79) ಎನ್ನುತ್ತಾರೆ.

ಅಂದರೆ ಕುವೆಂಪು ಅವರ ವೈಚಾರಿಕತೆಯೂ, ಆಧ್ಯಾತ್ಮಿಕತೆಯೂ ವಿಶಿಷ್ಟವಾದುದಾಗಿದೆ. ಅಧ್ಯಾತ್ಮದ ಒಳಗೆ ವೈಚಾರಿಕತೆ, ವೈಚಾರಿಕತೆಯ ಒಳಗೆ ಅಧ್ಯಾತ್ಮ ಬೆಸೆದುಕೊಂಡಿದೆ. ವೈಚಾರಿಕತೆಯೊಳಗೆ ಧಾರ್ಮಿಕ ಮಾನವತಾವಾದದ ಕಾಳಜಿಯೂ, ಆಧ್ಯಾತ್ಮಿಕತೆಯಲ್ಲಿ ಸಾಮಾಜಿಕ ನ್ಯಾಯದ ಕಾಳಜಿಯೂ ಸೇರಿಕೊಂಡಿದೆ. ಅವರ ಚಿಂತನೆಯ ಈ ಸಮನ್ವಯದ ನೆಲೆಯೇ ಮುಖ್ಯವಾದುದು.

ಕುವೆಂಪು ಅವರು ಮತದ ಮೌಢ್ಯಗಳನ್ನು ಪ್ರಶ್ನಿಸಿದ್ದು ಪರಂಪರೆಯ ಹೊರಗೆ ನಿಂತಲ್ಲ ಅಥವಾ ಪರಂಪರೆಯ ಕೊಂಡಿಯನ್ನು ಕಳಚುವುದೂ ಅವರ ಉದ್ದೇಶವಾಗಿರಲಿಲ್ಲ. ಅವರಲ್ಲಿದ್ದ ಈ ಬಗೆಯ ವೈಚಾರಿಕತೆಯ ಪ್ರಚೋದನೆ ಆಂತರಿಕವಾದುದೇ ವಿನಃ ಬಾಹ್ಯದಿಂದ ಬಂದುದಲ್ಲ. ಸ್ವತಃ ಅವರು ಬದುಕುತ್ತಿದ್ದ ಪರಿಸರದ, ಪಾಲಿಸುತ್ತಿದ್ದ ಧಾರ್ಮಿಕ ನಡವಳಿಕೆಯ ಒಳಗೆಯೇ ಇಂತಹದ್ದೊಂದು ಪರಂಪರೆ ಇತ್ತು. ಅಂದರೆ ಕಾಲಕಾಲಕ್ಕೆ ಜಡಗೊಳ್ಳುವ ಧಾರ್ಮಿಕ ವಿಚಾರಗಳನ್ನು ಪ್ರಶ್ನಿಸುವ, ಅವುಗಳು ಕಾಲ ಬಾಹಿರವಾದಾಗ ಅವುಗಳನ್ನು ಮೀರಿ ನಡೆಯುವ, ಕಾಲಕ್ಕೆ ಬೇಕಾದಂತೆ ಪರಿವರ್ತಿಸುವ ಸ್ವಾತಂತ್ರ್ಯ ಮತ್ತು ಮುಕ್ತ ಅವಕಾಶವೂ ಅಲ್ಲಿತ್ತು. ಹೀಗಾಗಿ ಕುವೆಂಪು ಅವರು ಅಂತಹ ಪರಂಪರೆಯ ಭಾಗವಾಗುತ್ತಾರೆಯೇ ಹೊರತು ಅದರಿಂದ ಹೊರಗೆ ನಿಂತು ಅಥವಾ ವಿದೇಶಿ ಪ್ರಭಾವಕ್ಕೆ ಒಳಗಾಗಿ ಅವರು ವೈಚಾರಿಕ ಪ್ರಜ್ಞೆಯನ್ನು ರೂಢಿಸಿಕೊಂಡರು ಎಂದು ಹೇಳಲಾಗದು.

ಕುವೆಂಪು ಅವರ ಸಾಹಿತ್ಯದಲ್ಲಿ ಪ್ರಕಟವಾದ ವೈಚಾರಿಕತೆಯ ಮತ್ತು ಅಧ್ಯಾತ್ಮದ ನೆಲೆಗಳು ಬೇರೆ ಬೇರೆ ಎಂದು ಹೇಳಲಾಗದು. ಈ ಎರಡನ್ನೂ ಸಮಾನ ನೆಲೆಯಲ್ಲಿ ನೋಡುವ, ಹೀಗೆ ನೋಡಲು ಸಾಧ್ಯವಾಗುವ ಒಂದು ಅಖಂಡ ದೃಷ್ಟಿಯನ್ನು ಅವರ ಸಾಹಿತ್ಯದಲ್ಲಿ ನೋಡಬಹುದಾಗಿದೆ. ಕುವೆಂಪು ಅವರನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ, ಅವರ ಅಖಂಡ ದೃಷ್ಟಿಯನ್ನು ಮೊದಲು ಗ್ರಹಿಸಿಕೊಳ್ಳಬೇಕು. ಇಲ್ಲವಾದರೆ, ಅಧ್ಯಾತ್ಮ ಮತ್ತು ವೈಚಾರಿಕತೆಯ ಕುರಿತಾದ ಅವರ ನಿಲುವಿನಲ್ಲಿ ದ್ವಂದ್ವವಿದೆ ಎಂಬ ತೀರ್ಮಾನಕ್ಕೆ ಬರಬೇಕಾಗುತ್ತದೆ.

ಅವರು ಜನರಲ್ಲಿನ ಮೌಢ್ಯಗಳನ್ನು, ಕಂದಾಚಾರಗಳನ್ನು ವಿರೋಧಿಸುತ್ತಾರೆ. ಅದನ್ನು ವಿಮರ್ಶಾತ್ಮಕವಾಗಿ ನೋಡುತ್ತಾರೆ. ಆದರೆ, ಭಾರತೀಯರ ಬದುಕಿನ ಆಧ್ಯಾತ್ಮಿಕ ತಳಪಾಯದಂತಿರುವ ವೇದ-ಉಪನಿಷತ್ತುಗಳನ್ನು, ಅವುಗಳ ದರ್ಶನವನ್ನು ನಿರಾಕರಿಸದೆ ಸ್ವೀಕಾರ ಮಾಡುತ್ತಾರೆ. ಸಂಕುಚಿತತೆಗೆ ಕಾರಣವಾಗುವ ಮತಗಳನ್ನು ನಿರಾಕರಿಸುತ್ತಾರೆ. ಆದರೆ, ವೈಶ್ವಿಕ ಗುಣವನ್ನು ಹೊಂದಿರುವ ಅಧ್ಯಾತ್ಮವನ್ನು ಪುರಸ್ಕರಿಸುತ್ತಾರೆ. ಅದು ಬದುಕಿನ ಭಾಗವೇ ಆಗುತ್ತದೆ. ಈ ನಿಲುವು ಕುವೆಂಪು ಅವರ ವೈಚಾರಿಕತೆಯ ಖಚಿತತೆಯೂ ಹೌದು. ಆಧ್ಯಾತ್ಮಿಕತೆಗೆ ಮತ, ದೇಶ, ಕಾಲದ ಹಂಗಿರುವುದಿಲ್ಲ. ಅದು ಎಲ್ಲವನ್ನೂ ಒಳಗೊಳ್ಳುವ ರೀತಿಯದ್ದು. ಕುವೆಂಪು ಅವರ ಅಧ್ಯಾತ್ಮಿಕ ನಿಲುವು ಹೀಗೆ ಕಾಲಾತೀತವೂ, ಮತಾತೀತವೂ, ದೇಶಾತೀತವೂ ಆಗಿಯೇ ನಿಲ್ಲುವ ಗುಣವನ್ನು ಹೊಂದಿದೆ.

ಅವರಿಗೆ ವೈಚಾರಿಕತೆಯಾಗಲೀ, ದಾರ್ಶನಿಕತೆಯಾಗಲೀ, ಆಧ್ಯಾತ್ಮಿಕತೆಯಾಗಲೀ ಒಂದು 'ವಾದ'ವಲ್ಲ, ಒಂದು 'ಇಸಂ' ಅಲ್ಲ ಅಥವಾ ಅದು ಅದರ ಪೋಷಣೆಯೂ ಅಲ್ಲ. ಭಾರತೀಯ ಬದುಕಿನ ಸಹಜ ಪ್ರತಿಸ್ಪಂದನೆಯೇ ಇದಾಗಿದೆ. ಹೀಗಾಗಿ ಅವರಲ್ಲಿ

ಈ ವಿಚಾರಗಳು ಸಹಜವಾದ ಅಭಿವ್ಯಕ್ತಿಯಾಗಿದೆಯೇ ಹೊರತು ಯಾವುದೋ ಘೋಷಿತ ಉದ್ದೇಶವನ್ನು ಸಾಧಿಸಲು ನಡೆಸಿದ ಪ್ರಯತ್ನವಾಗಿರಲಿಲ್ಲ. ಅವರ ಗದ್ಯ ಸಾಹಿತ್ಯದಲ್ಲಿ ಈ ನಿಲುವಿನ ಪ್ರಜ್ಞಾಪೂರ್ವಕ ಎಚ್ಚರ ಇದೆ. ಯಾವುದೋ ವಾದವನ್ನು ಪ್ರತಿಪಾದಿಸಲು ಅವರು ತಮ್ಮ ನಿಲುವಿನಲ್ಲಿ ಯಾವುದೇ ಬಗೆಯ ರಾಜಿಯನ್ನು ಮಾಡಿಕೊಳ್ಳಲಿಲ್ಲ. ಎಲ್ಲಾ ವಿಚಾರಗಳಿಗೂ ಅಲ್ಲಿ ಒಂದು ಬಗೆಯ ಮುಕ್ತ ಸ್ವೀಕಾರಾರ್ಹತೆ ಇತ್ತು. ಪ್ರತಿಯೊಂದೂ ಸಂಗತಿಗಳನ್ನೂ ವಿವೇಚಿಸಿ, ಪರೀಕ್ಷಿಸಿ ನೋಡುತ್ತಾರೆ. ಹೀಗಾಗಿ ನಿರಾಕರಣೆಯೇ ಅವರ ವೈಚಾರಿಕತೆಯ ಮಾದರಿಯ ಪ್ರಧಾನ ತತ್ವವಾಗಿರಲಿಲ್ಲ.

ಕುವೆಂಪು ಪುರೋಹಿತಶಾಹಿಯ ಕಟು ವಿಮರ್ಶಕರು. ಅವರು ತಮ್ಮ ಜೀವನದುದ್ದಕ್ಕೂ ಪುರೋಹಿತರನ್ನು ಯಾವ ಧಾರ್ಮಿಕ ಕ್ರಿಯೆಗೂ ಮಧ್ಯವರ್ತಿಯಾಗಿ ಬಳಸಿಕೊಳ್ಳಲಿಲ್ಲ. ಹೀಗಾಗಿ ಅವರ ಚಿಂತನೆ ಪ್ರಾಮಾಣಿಕವಾದುದು ಎನ್ನುವುದರಲ್ಲಿ ಯಾವ ಅನುಮಾನವೂ ಇಲ್ಲ. ಒಂದು ಹಂತದಲ್ಲಿ "ನಮ್ಮ ದೇಶದಲ್ಲಿ ಪುರೋಹಿತಶಾಹಿ, ಪುರೋಹಿತ ವರ್ಗ ಎಂದರೆ ಸಾಮಾನ್ಯವಾಗಿ ಬ್ರಾಹ್ಮಣ ವರ್ಗ ಅಂತ. ಆದರೆ ವಾಸ್ತವವಾಗಿ ಪುರೋಹಿತಶಾಹಿ, ಪುರೋಹಿತ ವರ್ಗ ಎಂದರೆ ಬರೀ ಬ್ರಾಹ್ಮಣ ವರ್ಗವಲ್ಲ. ಹಿಂದೂಗಳಲ್ಲಿ ಬ್ರಾಹ್ಮಣ ವರ್ಗವಾಗುತ್ತದೆ. ಕ್ರೈಸ್ತರಲ್ಲೂ ಪುರೋಹಿತಶಾಹಿ ಇದೆ. ಅಲ್ಲಿ ಅದನ್ನು ಯಾವ ಜಾತಿ ಎಂದು ಕರೆಯುವುದು? ಮುಸ್ಲೀಮರಲ್ಲೂ ಪುರೋಹಿತಶಾಹಿ ಇದೆ. ಬೌದ್ಧರಲ್ಲೂ ಪುರೋಹಿತಶಾಹಿ ಇದೆ. ಎಲ್ಲಾ ಮತಗಳಲ್ಲೂ ಪುರೋಹಿತಶಾಹಿ ಇದ್ದೇ ಇದೆ" (ಕುವೆಂಪು ಸಮಗ್ರ ಗದ್ಯ – ಸಂ–2, ಪುಟ–479) ಎನ್ನುತ್ತಾರೆ.

ವೈಚಾರಿಕತೆ ಎಂದಾಗ ಅದು ಸಂಕುಚಿತವಾದ ನೆಲೆಯದ್ದಾಗದಂತಹ, ಸಮಗ್ರ ದೃಷ್ಟಿ ಕುವೆಂಪು ಅವರಲ್ಲಿ ಇತ್ತು. ಹೀಗಿದ್ದರೂ ಕುವೆಂಪು ಸಾಹಿತ್ಯ ಅಧ್ಯಯನಕಾರರೇ, ಪುರೋಹಿತಶಾಹಿಯನ್ನು ಬ್ರಾಹ್ಮಣ ದ್ವೇಷಕ್ಕೆ ಸೀಮಿತಗೊಳಿಸಿದ್ದೂ ಇದೆ. ವೈಚಾರಿಕತೆಯನ್ನು ಹಳೆಯದರ ದ್ವೇಷಕ್ಕೆ ಸೀಮಿತಗೊಳಿಸಿದವರೂ ಇದ್ದಾರೆ. ಆದರೆ ಕುವೆಂಪು ಹಳೆಯ ಧರ್ಮ, ಹಳೆಯ ಸಾಹಿತ್ಯವನ್ನೆಲ್ಲ ತಿರಸ್ಕರಿಸಿದರೆ, ನಾವು ತುಂಬಾ ನಷ್ಟಕ್ಕೆ ಒಳಗಾಗುತ್ತೇವೆ. ಅದರ ಬದಲು ಹಳೆಯದನ್ನು ಹೊಸ ಕಾಲದ ನಮ್ಮ ಧ್ಯೇಯಕ್ಕೆ ಅನುಸಾರವಾಗಿ ಎರಕ ಹೊಯ್ಯಬೇಕು ಎನ್ನುತ್ತಾರೆ. ಹಳೆಯದನ್ನೆಲ್ಲಾ ತಿರಸ್ಕಾರವಾದುದು ಎಂದು ಅವನ್ನ ಎಸೆದು ಬಿಡುವ ಮನೋಧರ್ಮದಿಂದ ಸಂಸ್ಕೃತಿಗೆ ನಷ್ಟವಾಗುತ್ತದೆ. ಅದು ರಭಸಮತಿ ವರ್ತನೆ ಎನ್ನುತ್ತಾರೆ.

'ಆತ್ಮಶ್ರೀ ಮತ್ತು ನಿರಂಕುಶಮತಿ' ಎನ್ನುವುದು ಕುವೆಂಪು ಅವರ ಆಧ್ಯಾತ್ಮಿಕತೆ ಮತ್ತು ವೈಚಾರಿಕತೆಯ ಸ್ವರೂಪವನ್ನು ದಿಗ್ದರ್ಶಿಸುವ ಪರಿಕಲ್ಪನೆಗಳು ಎನ್ನಬಹುದು. ಬಹುಶಃ ಈ ಎರಡು ಪರಿಕಲ್ಪನೆಗಳ ಆಧಾರದಲ್ಲೇ ಅವರ ಚಿಂತನೆಯನ್ನು ಅರ್ಥಮಾಡಿಕೊಳ್ಳಬಹುದಾಗಿದೆ. ಮತಿಯನ್ನು ಕೆಡಿಸುವ ಮತದ ಬಗೆಗೆ ಕಡಾಖಂಡಿತವಾದ ನಿರಾಕರಣೆ ಇದೆ. ನಿರಾಕರಣೆಗೆ ಕಾರಣವನ್ನು ಸ್ಪಷ್ಟ ಪಡಿಸುತ್ತಾರೆ. "ಮತ ನಮಗೊಂದು ದೊಡ್ಡ ಬಂಧನವಾಗಿದೆ; ನಾಡಿನ ಏಳ್ಗೆಯ ಕುತ್ತಿಗೆಗೆ ಉರುಳಾಗಿದೆ. ಪರಮಶಾಂತಿಯೂ, ಪರಮಾನಂದವೂ ಆಗಿರುವ ಪರಮೇಶ್ವರನನ್ನು ಪಡೆಯಲೆಂದು ಜೀವ ಮಾಡುವ ಪ್ರಯತ್ನವೇ ಮತದ ನಿಜಾವಸ್ಥೆ. ಆದರೆ ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ

ಕಟ್ಟುಕಟ್ಟಳೆಗಳ ಕಾಟವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು, ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು, ನಾಮ ಹಾಕಿಕೊಳ್ಳುವುದು, ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕ ಬಾವಿ, ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು, ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತು ಮಾರು ಮಾತ್ರ ಬರಗೊಡಿಸುವುದು, ಹಾಗೆ ಬರಗೊಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು, ಇತ್ಯಾದಿ ಕೆಲಸಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ. ಉಪನಿಷತ್ತು, ಭಗವದ್ಗೀತೆ ಮತ್ತು ಮಹಾವಿಭೂತಿಗಳು ಸಾರಿದ ಮತ್ತು ಸಾರುತ್ತಿರುವ ಅಮೃತ ಸಂದೇಶಗಳು ಅರಣ್ಯ ರೋಧನವಾಗಿದೆ" (ಕುವೆಂಪು ಸಮಗ್ರ ಗದ್ಯ – ಸಂ–2, ಪುಟ 66–67) ಎನ್ನುವ ಮಾತುಗಳಲ್ಲಿ ಸ್ವಾಮಿ ವಿವೇಕಾನಂದ ಚಿಂತನೆಗಳ ಸ್ಪಷ್ಟ ಪ್ರಭಾವವನ್ನು ಗುರುತಿಸಬಹುದು. ಮತದ ಚಿಂತನೆಗಳು ಹೇಗೆ ದಿಕ್ಕು ತಪ್ಪಿದೆ ಎನ್ನುವುದನ್ನೇ ಕುರಿತಾಗಿ ಕುವೆಂಪು ತಾಳುವ ನಿಲುವುಗಳು ವೈಚಾರಿಕವಾದ ಅಭಿಪ್ರಾಯದ ಜತೆಗೆ, ಆಧ್ಯಾತ್ಮಿಕ ನಿಲುವಿಗೂ ಸ್ಪಷ್ಟತೆಯನ್ನು ನೀಡುತ್ತದೆ. ಕುವೆಂಪು ಅವರ ಸ್ಥಿತಪ್ರಜ್ಞತೆಯ ಮಾತುಗಳಿವು. ನಿರಂಕುಶ ಮತಿಗಳಾಗಬೇಕೆಂದರೆ ದಾಸ್ಯ ಬುದ್ಧಿಯಿಂದ ವಿಮೋಚನೆ ಬೇಕು. ಇಂತಹ ವಿಮೋಚನೆಗೆ ಸ್ವತಂತ್ರವಾಗಿ ಜೀವನ ನಡೆಸುವ ಸಾಮರ್ಥ್ಯವನ್ನು ಪಡೆಯಬೇಕು ಎಂದು ದಾರಿಯನ್ನು ಸೂಚಿಸುತ್ತಾರೆ. ಅವರ ಪ್ರಕಾರ ವೈಚಾರಿಕತೆಯ ಕೆಲಸವೆಂದರೆ, "ಜನರ ಆಧ್ಯಾತ್ಮಿಕ ಅಜ್ಞಾನವನ್ನೂ, ಆದಿದೈವಿಕ ಮೌಢ್ಯವನ್ನೂ, ಆದಿಭೌತಿಕ ಕಷ್ಟನಷ್ಟಗಳನ್ನು ಪರಿಹರಿಸಲು ಪ್ರಯತ್ನಿಸುವ ತಪಸ್ಸು ಕೈಗೊಳ್ಳಬೇಕು" (ಕುವೆಂಪು ಸಮಗ್ರ ಗದ್ಯ – ಸಂ–2, ಪುಟ 72) ಎನ್ನುತ್ತಾರೆ.

ವೈಚಾರಿಕತೆಯ ಕೆಲಸ ಅಧ್ಯಾತ್ಮದ ದಾರಿಗೆ ಎದುರಾಗಿರುವ ತೊಡಕನ್ನು ನಿವಾರಿಸುವುದು ಎಂದೇ ಹೇಳಬಹುದು. ಹೀಗಾಗಿ ಒಂದು ಇನ್ನೊಂದರ ವಿರುದ್ಧ ಅಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ಕುವೆಂಪು ಅವರನ್ನೊಮ್ಮೆ ದೂರದರ್ಶನದ ಸಂದರ್ಶನ ಒಂದರಲ್ಲಿ 'ವೈಚಾರಿಕತೆಗೂ, ಆಧ್ಯಾತ್ಮಿಕತೆಗೂ ಪರಸ್ಪರ ವಿರೋಧವುಂಟೇ?' ಎಂದು ಕೇಳಲಾಗಿತ್ತು. ಈ ಪ್ರಶ್ನೆಗೆ ಅತ್ಯಂತ ಸಾವಧಾನದಿಂದ ಕುವೆಂಪು ಅವರು ನೀಡಿದ ಉತ್ತರ ನಮ್ಮ ಚರ್ಚೆಯನ್ನು ಇನ್ನಷ್ಟು ನಿಖರವಾಗಿ ಮುಂದುವರಿಸಲು ಸಹಾಯಕವಾಗುತ್ತದೆ. ಕುವೆಂಪು ಹೇಳುವಂತೆ "ಖಂಡಿತ ಇಲ್ಲ. ಜಗತ್ತಿನ ಸೃಷ್ಟಿಯ, ವಸ್ತುವಿನ ನಿಜವಾದ ನೆಲೆಯನ್ನು ಅರಿಯುವುದೇ ಅಧ್ಯಾತ್ಮ ದೃಷ್ಟಿ. ವೈಚಾರಿಕತೆಯ ಅಥವಾ ವಿಜ್ಞಾನದ ದೃಷ್ಟಿಯೂ ಅದೆಯೇ. ಮತೀಯತೆಯನ್ನು, ಆಧ್ಯಾತ್ಮಿಕತೆಯನ್ನು ಬೆರೆಸುವುದರಿಂದ ಆಧ್ಯಾತ್ಮಿಕತೆಗೆ ಕಿಲುಬುಂಟಾಗುತ್ತದೆ. ಅವೆರಡಕ್ಕೂ ಧ್ರುವಾಂತರಗಳಷ್ಟು ದೂರವುಂಟೆಂಬ ಸತ್ಯವನ್ನರಿತಾಗ ವೈಚಾರಿಕತೆ ಮತ್ತು ಆಧ್ಯಾತ್ಮಿಕತೆಗಳ ನಡುವಣ ವಿರೋಧ ಸಂಪೂರ್ಣ ಮಾಯವಾಗುತ್ತದೆ. ಪರಮ ವಿಜ್ಞಾನ ಮತ್ತು ಪರಮ ಅಧ್ಯಾತ್ಮ ಪರಸ್ಪರ ಭಿನ್ನವಲ್ಲವೆಂಬುದನ್ನು ಮಾತ್ರ ಮರೆಯಬಾರದು" (ಕುವೆಂಪು ಸಮಗ್ರ ಗದ್ಯ – ಸಂ–2, ಪುಟ 941, 958) ಎಂದು ಉತ್ತರಿಸುತ್ತಾರೆ. ಇದೊಂದೇ ಮಾತು ಕುವೆಂಪು ಅವರೊಳಗಿನ ವಿಚಾರ ಸ್ಪಷ್ಟತೆಗೆ ಸಾಕಾಗಬಹುದು. ಅಧ್ಯಾತ್ಮ ಯಾಕೆ ಮತದಿಂದ ಭಿನ್ನ ಎನ್ನುವುದೂ ಸ್ಪಷ್ಟವಾಗುತ್ತದೆ. ಅಧ್ಯಾತ್ಮದ ದೃಷ್ಟಿಗೆ ಮತ್ತು ವೈಚಾರಿಕತೆಯ ದೃಷ್ಟಿಗೆ

ಭಿನ್ನತೆಯಿಲ್ಲ ಎನ್ನುವ ಮೂಲಕ ಇವೆರಡೂ ಪ್ರತ್ಯೇಕ ಪ್ರತ್ಯೇಕವಾಗಿ ನಿಲ್ಲುವ ಸಂಗತಿಗಳಲ್ಲ, ಒಂದು ಇನ್ನೊಂದರ ಮುಂದುವರಿಕೆಯೂ, ವಿಸ್ತರಣೆಯೂ ಆಗಬಹುದಾದದ್ದು ಎನ್ನುವುದನ್ನೇ ಧ್ವನಿಸುತ್ತದೆ. ಅಂತರ ಇರುವುದು ಮತ ಮತ್ತು ಅಧ್ಯಾತ್ಮದ ನಡುವೆ, ಮತವನ್ನೇ ಅಧ್ಯಾತ್ಮವೆಂದು ಭಾವಿಸುವುದರ ಕುರಿತಾದ ಎಚ್ಚರಿಕೆಯ ನುಡಿ. ಇದು ಒಂದು ಹಂತದಲ್ಲಿ ವಿಜ್ಞಾನ ಮತ್ತು ಅಧ್ಯಾತ್ಮದ ನಡುವಿನ ಭಿನ್ನತೆಯೇ ಸಂಪೂರ್ಣವಾಗಿ ಇಲ್ಲವಾಗುತ್ತದೆ. ಅಂದರೆ ಒಂದರೊಳಗೊಂದು ಲೀನವಾಗಿ ಅಂತಿಮವಾಗಿ ಒಂದೇ ಆಗುತ್ತದೆ. ಈ ಮಾತನ್ನು ಅವರು ದೇ. ಜವರೇ ಗೌಡರು ನಡೆಸಿದ ಸಂದರ್ಶನದಲ್ಲಿನ 'ಆಧ್ಯಾತ್ಮಿಕತೆಗೆ ವಿಚಾರವಾದ ವಿರೋಧವಲ್ಲವೆ?' ಎಂಬ ಪ್ರಶ್ನೆಗೆ ಉತ್ತರಿಸುತ್ತಲೂ ಸ್ಪಷ್ಟವಾಗಿಯೇ ಹೇಳಿದ್ದರು. "ಆಧ್ಯಾತ್ಮಿಕತೆ ಮತ್ತು ವಿಚಾರವಾದಗಳ ನಡುವೆ ಪರಸ್ಪರ ವಿರೋಧವಿಲ್ಲ. ವಿಚಾರವಾದ ಕೇವಲ ಭೌತ ಪ್ರಪಂಚಕ್ಕೆ ಮಾತ್ರ ಅನ್ವಯವಾಗುತ್ತದೆಂದು ಹೇಳುವಂತಿಲ್ಲ. ಅಷ್ಟೇ ಅಲ್ಲ ಅದರ ಸ್ವರೂಪ ಧೋರಣೆಗಳು ಕ್ಷೇತ್ರದಿಂದ ಕ್ಷೇತ್ರಕ್ಕೆ, ಅಲ್ಲಲ್ಲಿಯ ವಿದ್ಯಮಾನಗಳಿಗನುಗುಣವಾಗಿ ವ್ಯತ್ಯಾಸ ಹೊಂದುತ್ತವೆ. ಅದೊಂದು ನಿಂತ ಮಡುವಲ್ಲ, ಸದಾ ಪ್ರವಹಿಸುತ್ತಿರುವ ವಾಹಿನಿ. ಆಧ್ಯಾತ್ಮಿಕತೆಯ ಸತ್ವ ಸಮನಿಸಿದಂತೆಲ್ಲ ವಿಚಾರವಂತಿಕೆ ಗಟ್ಟಿಯಾಗುತ್ತದೆ, ಸಾಂದ್ರವಾಗುತ್ತದೆ" (ಕುವೆಂಪು ಸಮಗ್ರ ಗದ್ಯ – ಸಂ–2, ಪುಟ – 852) ಎನ್ನುವ ಮಾತನ್ನೂ ಗಮನಿಸಬೇಕು. ವೈಚಾರಿಕತೆಯನ್ನು ಭೌತಿಕ ಪ್ರಪಂಚಕ್ಕೆ ಸೀಮಿತ ಮಾಡಲಾಗದು ಎನ್ನುವುದೂ ಕೂಡ ಬಹುಮುಖ್ಯ ಅಂಶವೇ ಆಗಿದೆ. ಆಧ್ಯಾತ್ಮಿಕತೆಯ ತೀವ್ರತೆ ಹೆಚ್ಚಾದಂತೆ, ಅದು ಮೌಢ್ಯತೆಯ ಕಡೆಗೆ ಹೋಗುವುದಿಲ್ಲ, ಮತೀಯತೆಯ ಕಡೆಗೆ ಹೋಗುವುದಿಲ್ಲ. ಬದಲಿಗೆ ವಿಚಾರವಂತಿಕೆಗೆ ಹತ್ತಿರವಾಗುತ್ತದೆ. ಹಾಗಾಗಿ ಹೆಚ್ಚೆಚ್ಚು ದೃಢವಾಗಿ ಆಧ್ಯಾತ್ಮಿಕತೆಯನ್ನು ಸ್ವೀಕರಿಸುವುದು ಎಂದರೆ, ಅದು ವೈಚಾರಿಕತೆಯನ್ನು ಸ್ವೀಕರಿಸಿದ್ದಕ್ಕೆ ಸರಿಸಮಾನವಾಗುತ್ತದೆ ಎನ್ನುವ ಆಶಯ ಈ ಮಾತುಗಳಲ್ಲಿದೆ. ಹೀಗಾಗಿ ಭಾರತೀಯ ಸಂದರ್ಭದಲ್ಲಿ ಆಧ್ಯಾತ್ಮಿಕತೆ ಯಾವ ಸಂದರ್ಭದಲ್ಲೂ ವಿಜ್ಞಾನಕ್ಕೆ ವಿರೋಧವಾಗಲಿಲ್ಲ. ವೈಚಾರಿಕತೆಯ ಜತೆಗೆ ಶತ್ರುತ್ವವನ್ನು ಹೊಂದಲಿಲ್ಲ. ಆಧ್ಯಾತ್ಮಿಕ ಪ್ರವೃತ್ತಿ ಬೆಳೆಯುತ್ತಾ, ವಿಜ್ಞಾನದ ಸಮೀಪಕ್ಕೆ ತಾನೇ ತಾನಾಗಿ ಹರಿದು ಬರುವ ಗುಣವನ್ನು ಹೊಂದಿದೆ ಎನ್ನುವುದರ ಬಹು ಮಹತ್ವದ ಅಂಶವೂ ಹೌದು.

ಅಧ್ಯಾತ್ಮ ಕುವೆಂಪು ಅವರ ಸಾಹಿತ್ಯವನ್ನಷ್ಟೇ ಅಲ್ಲ, ಅವರ ಇಡಿಯ ಬದುಕನ್ನೆ ಆವರಿಸಿಕೊಂಡಿದೆ. ಅವರೇ ಹೇಳುವಂತೆ "ನನ್ನ ಸಾಹಿತ್ಯದಲ್ಲಿ ಆಧ್ಯಾತ್ಮಿಕ ದೃಷ್ಟಿಯೇ ಸರ್ವವ್ಯಾಪಿ. ಅದು ನನ್ನ ಜೀವನವನ್ನೆಲ್ಲ ಆಕ್ರಮಿಸಿಕೊಂಡಿದೆ. ಸಾಹಿತ್ಯಕ್ಕಾಗಿ ಸಾಹಿತ್ಯ ರಚಿಸುವುದು ನನ್ನ ಉದ್ದೇಶವಲ್ಲ. ಅಧ್ಯಾತ್ಮ ಸಾಧನೆ ನನ್ನ ಜೀವನೋದ್ದೇಶ. ಆ ಸಾಧನೆಯ ಅನುಭವವೇ ಸಾಹಿತ್ಯವಾಗಿ ಹೊರಹೊಮ್ಮುತ್ತದೆ. ಅದು ಅಧ್ಯಾತ್ಮ ಸಾಧನೆಯ ಸಾಧನವೂ ಆಗುತ್ತದೆ" (ಕುವೆಂಪು ಸಮಗ್ರ ಗದ್ಯ – ಸಂ–2, ಪುಟ 851) ಎನ್ನುತ್ತಾರೆ. ಹೀಗಿದ್ದರೂ ಕುವೆಂಪು ಸಾಹಿತ್ಯದ ಅಧ್ಯಯನಕಾರರು ಅವರ ಅಧ್ಯಾತ್ಮದ ಒಲವನ್ನು ಅದರ ಕುರಿತಾದ ನಿಲುವನ್ನು ವಿಶೇಷವಾಗಿ ಮುಂಚೂಣಿಗೆ ತರುವಲ್ಲಿ ವಿಫಲರಾಗಿದ್ದಾರೆ. ಅದೇ ಸಂದರ್ಭದಲ್ಲಿ ಅವರ ವೈಚಾರಿಕತೆಯ ಕುರಿತಾದ ನಿಲುವನ್ನು ಅಪವ್ಯಾಖ್ಯಾನಕ್ಕೆ ಒಳಪಡಿಸಿ ಅವರು ನಂಬಿಕೆ, ಧರ್ಮ, ಸಂಸ್ಕೃತಿ ಮೊದಲಾದ ಜನರ ಆಧ್ಯಾತ್ಮಿಕ ನಡವಳಿಕೆಯ ತೀವ್ರ ವಿರೋಧಿಗಳು ಎನ್ನುವುದನ್ನಷ್ಟೇ

ಬಿಂಬಿಸಿಕೊಂಡು ಬರಲಾಗಿದೆ. ಆಧ್ಯಾತ್ಮಿಕತೆಯ ಸೋಂಕೇ ಇಲ್ಲದವರು ವಿಚಾರವಾದದ ಬೂಟಾಟಿಕೆಯನ್ನು ಪ್ರದರ್ಶಿಸುತ್ತಿದ್ದರೆ ವಾಸ್ತವದಲ್ಲಿ ಅದು ವಿಚಾರವಾದವೂ ಅಲ್ಲ, ವೈಚಾರಿಕತೆಯೂ ಅಲ್ಲ ಎನ್ನುವ ಎಚ್ಚರ ಕುವೆಂಪು ಅವರಲ್ಲಿತ್ತು. ವಿಚಾರವಾದದ ಮುಖವಾಣಿಗಳೆಂಬಂತೆ ಬಿಂಬಿಸಿಕೊಂಡ ಅನೇಕರು ಆ ಕಾಲಕ್ಕೆ ಕಾರ್ಯ ಪ್ರವೃತ್ತರಾಗಿದ್ದರು. ಆದರೆ ಅವರಲ್ಲನೇಕರು ವಿಚಾರವಾದದ ಹೆಸರಿನಲ್ಲಿ ದೇವರನ್ನು, ಧರ್ಮವನ್ನು ವಿರೋಧಿಸುವುದನ್ನೇ ತಮ್ಮ ಪ್ರವೃತ್ತಿಯನ್ನಾಗಿಸಿಕೊಂಡಿದ್ದರು. ಒಂದು ಬಗೆಯ ಭಂಜನೆಯ ಕ್ರಿಯೆಯೇ ವೈಚಾರಿಕತೆಯ ಪ್ರತೀಕವಾಗಿತ್ತು. ಈ ಕಾರಣದಿಂದಲೇ ವೈಚಾರಿಕತೆಯು ಸಮಾಜದಲ್ಲಿ ಯಾವ ಪ್ರಮಾಣದಲ್ಲಿ ಸ್ವೀಕೃತವಾಗಬೇಕಾಗಿತ್ತೋ ಆ ಪ್ರಮಾಣದಲ್ಲಿ ಸ್ವೀಕಾರಗೊಳ್ಳಲಿಲ್ಲ. ಇದನ್ನು ಕುವೆಂಪು ಅವರು ಗುರುತಿಸುತ್ತಾರೆ. ಮತ್ತು ಇದಕ್ಕಾಗಿ ಒಂದು ಪರ್ಯಾಯದ ದಾರಿಯನ್ನು ಕಂಡುಕೊಳ್ಳುತ್ತಾರೆ. ಕುವೆಂಪು ಅವರ ಈ ನಿಲುವು ಅವರನ್ನು ಆ ಕಾಲದ 'ವಿಚಾರವಾದಿ'ಗಳಿಗಿಂತ ಭಿನ್ನವಾಗಿಸುತ್ತದೆ. ಜನರಿಗೆ ಹೇಳಬೇಕಾದ ವಿಚಾರವಾದಕ್ಕೆ ಅಧ್ಯಾತ್ಮದ ತಳಹದಿ ಇಲ್ಲವಾದರೆ ಅದು ಸೋತು ಹೋಗುತ್ತದೆ ಎನ್ನುವ ಎಚ್ಚರ ಕುವೆಂಪು ಅವರಲ್ಲಿತ್ತು. "ನಾವು ಜನಗಳಿಗೆ ವಿಚಾರವಾದ ಬೋಧಿಸುವಾಗ ದೇವರ ಕಲ್ಪನೆಗಾಗಲೀ, ಧರ್ಮದ ಕಲ್ಪನೆಗಾಗಲೀ ವಿರುದ್ಧ ಹೋದರೆ ನಮ್ಮ ವಿಚಾರವಾದ ಸೋತು ಹೋಗುತ್ತದೆ. ವಿಚಾರವಾದದಲ್ಲಿ ಯಾವಾಗಲೂ ಅವರಿಗೆ ನಾವು ಏನು ಹೇಳಬೇಕಾಗುತ್ತದೆ ಅಂದರೆ ಯಾವುದು ವೈಜ್ಞಾನಿಕ ಅಲ್ಲವೋ ಅದನ್ನು ನೀವು ವಿಚಾರಿಸಬೇಕು; ವಿಚಾರಿಸಿ ವೈಜ್ಞಾನಿಕವಾದುದನ್ನು ಮಾತ್ರ ಒಪ್ಪಿಕೊಳ್ಳಬೇಕು; ಉಳಿದುದನ್ನು ಮೂಢಾಚಾರವೆಂದು ತಿರಸ್ಕರಿಸಬೇಕು" (ಕುವೆಂಪು ಸಮಗ್ರ ಗದ್ಯ–ಸಂ–2, ಪುಟ–733) ಎನ್ನುತ್ತಾರೆ. ಆದರೆ ಇಲ್ಲಿ ಯಾವುದೂ ಹೇರಿಕೆ ಅಲ್ಲ. ಜನರ ವಿಚಾರ ಪ್ರಜ್ಞೆಯನ್ನು ಬೆಳೆಸುವುದು ಮುಖ್ಯವೇ ಹೊರತು, ಜನರ ಮೇಲೆ ಯಾವುದನ್ನೂ ಒತ್ತಾಯದಿಂದ ಹೇರುವ ಕ್ರಿಯೆ ಸಲ್ಲದು ಎನ್ನುವುದೇ ತಾತ್ಪರ್ಯ. ಜನ ತಾವೇ ತಮ್ಮ ವಿಚಾರ ಶಕ್ತಿಯನ್ನು ಜಾಗೃತಗೊಳಿಸಿಕೊಂಡಾಗ ಮಾತ್ರ ಈ ಪರಿವರ್ತನೆ ಸಾಧ್ಯವಾಗುತ್ತದೆ. ಜನರ ವಿಚಾರ ಶಕ್ತಿ ಜಾಗೃತಗೊಳ್ಳುವುದು ಎಂದರೆ ಅದು ಕೇವಲ ಧರ್ಮ–ದೇವರು–ನಂಬಿಕೆಗಳ ಕುರಿತಾದ ಬದಲಾವಣೆ ಅಲ್ಲ. ಅದು ಹಳೆಯ ಮೌಲ್ಯಗಳಿಂದ, ಹಳೆಯ ಮೌಢ್ಯಗಳಿಂದ ಪಾರಾಗುವ ದಾರಿ. ಈ ಮೂಲಕ ಜನ ವೈಚಾರಿಕತೆಯ ಕಡೆಗೆ ಸಾಗಿದಾಗ ಮಾತ್ರ ಅವರ ಅಭಿವೃದ್ಧಿಗಾಗಿ ಮಾಡುವ ಎಲ್ಲಾ ಯೋಜನೆಗಳು ಫಲಕೊಡಲು ಸಾಧ್ಯ.

ಕುವೆಂಪು ತನ್ನ ಕಲ್ಪನೆಯಲ್ಲಿ ನಾಸ್ತಿಕವಾದ ಮತ್ತು ವಿಚಾರವಾದ ಹೇಗೆ ಪರಸ್ಪರ ಭಿನ್ನ ಎನ್ನುವುದನ್ನು ಹೇಳುತ್ತಾರೆ. "ಅನೇಕರ ಮನಸಿನಲ್ಲಿ, ಅದರಲ್ಲಿಯೂ ಯುವಕರ ಮನಸಿನಲ್ಲಿ ವಿಚಾರವಾದ ಅಂದರೆ ನಾಸ್ತಿಕವಾದ ಎಂಬ ಭಾವನೆ ಇದೆ. ಅನೇಕ ಹಿರಿಯರೂ ಕೂಡ ಆ ಭಾವನೆ ಬರುವ ಹಾಗೆಯೇ ಮಾತನಾಡುತ್ತಾರೆ. ಅದು ಮಾತ್ರ ನಿಮ್ಮ ಗುರಿಯನ್ನು ನೀವೇ ತಪ್ಪಿಸುವ ಗುರಿಯದ್ದಾಗುತ್ತದೆ. ಏಕೆಂದರೆ ವಿಚಾರವಾದ ಎನ್ನುವುದು ನಾಸ್ತಿಕವಾದ ಅಲ್ಲ. ವಿಚಾರವಾದಿಯಾದವನು ಎಂದಿಗೂ ನಾಸ್ತಿಕವಾದಿಯಾಗುವುದಕ್ಕೆ ಸಾಧ್ಯವಿಲ್ಲ. ಹೆಚ್ಚೆಂದರೆ ಆಜ್ಞೇಯತಾವಾದಿಯಾಗಬಹುದು" (ಕುವೆಂಪು ಸಮಗ್ರ ಗದ್ಯ–ಸಂ–2, ಪುಟ–732–733) ಎಂದಿದ್ದರು. ಅಂದರೆ, ನಾಸ್ತಿಕವಾದವೇ ವಿಚಾರವಾದ ಅಲ್ಲ, ಅಥವಾ ವಿಚಾರವಾದವೆಂದರೆ ಅದು

ನಾಸ್ತಿಕವಾದವಲ್ಲ. ಈ ಮಾತು ಆ ಕಾಲಘಟ್ಟದ ಅನೇಕರ ತಪ್ಪು ಅಭಿಪ್ರಾಯಕ್ಕೆ ಕೊಟ್ಟ ಉತ್ತರವೂ ಹೌದು. ಗೊಂದಲದ ಪರಿಹಾರವೂ ಹೌದು. ನಾಸ್ತಿಕವಾದ ಎಂದರೆ ಅದು ದೇವರು ಇಲ್ಲ ಎನ್ನುವ ವಾದ. ದೇವರು ಇಲ್ಲ ಎನ್ನುವುದು ಕಾಣುವಿಕೆಯಲ್ಲ. ಕಂಡಿಲ್ಲ ಎನ್ನುವ ಕಾರಣಕ್ಕೆ ಇಲ್ಲ ಎನ್ನಲಾಗದು. ಒಂದರ್ಥದಲ್ಲಿ ದೇವರು ಇಲ್ಲ ಎನ್ನುವುದು ಜ್ಞಾನವಲ್ಲ. ಅದು ಒಂದು ಬಗೆಯ ಅಜ್ಞಾನವೇ. ಹೀಗಾಗಿ ಕುವೆಂಪು ಅವರು ವೈಚಾರಿಕತೆಯ ಹೆಸರಿನಲ್ಲಿ ಅಜ್ಞಾನದ ಬಲೆಗೆ ಬೀಳಲು ಸಿದ್ಧರಿರಲಿಲ್ಲ. ಅವರು ತರ್ಕಬದ್ಧವಾದ ಉತ್ತರವನ್ನು ನೀಡಿದ್ದರು.

ಕುವೆಂಪು ಅವರ ಚಿಂತನೆಯ ಬೀಜ ಮಾತೃಕೆಗಳೇ ಸರ್ವೋದಯ, ಸಮನ್ವಯ, ಪೂರ್ಣದೃಷ್ಟಿ, ಮನುಜ ಮತ, ವಿಶ್ವ ಪಥ ಎಂಬ ಪರಿಕಲ್ಪನೆಗಳು. ಅವರ ದರ್ಶನ ಮತ್ತು ವೈಚಾರಿಕತೆಗಳು ಇದರೊಳಗೆ ಅಡಗಿದೆ. ಈ ಪರಿಕಲ್ಪನೆಗಳು ಯಾವುದನ್ನೂ ಹೊರಗಿಡುವ ಮಾದರಿಯದ್ದಲ್ಲ. ಎಲ್ಲವನ್ನು ಒಳಗೊಳ್ಳುವ ಸ್ವರೂಪದ್ದು. ಅವರು ಪ್ರಕಟಿಸಿದ 'ಅನಿಕೇತನ ತತ್ವ' ಆಧ್ಯಾತ್ಮಿಕವೂ, ವೈಚಾರಿಕವೂ ಸೇರಿಕೊಂಡದ್ದು. ಇವೆರಡರ ಔನ್ನತ್ಯವು ಸಂಯೋಗಗೊಂಡ ಪ್ರಜ್ಞೆ, ಈ ಕಾರಣಕ್ಕಾಗಿಯೇ ಪರಸ್ಪರ ವಿರುದ್ಧವಲ್ಲದ ಕೂಡುವಿಕೆ ಇಲ್ಲಿದೆ. ಇದಕ್ಕಾಗಿ ಮತ ಮತ್ತು ಅಧ್ಯಾತ್ಮದ ನಡುವಿನ ವ್ಯತ್ಯಾಸವನ್ನು ಸ್ಪಷ್ಟಪಡಿಸಿಕೊಳ್ಳುತ್ತಾರೆ. ಜತೆಗೆ, ವಿಜ್ಞಾನ ಮತ್ತು ಅಧ್ಯಾತ್ಮದ ಸಂಬಂಧವನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳುತ್ತಾರೆ. ಮತ ಮತ್ತು ಅಧ್ಯಾತ್ಮ ಒಂದೇ ಅಲ್ಲ, ಆದರೆ ವಿಜ್ಞಾನ ಮತ್ತು ಅಧ್ಯಾತ್ಮಕ್ಕೆ ಪರಸ್ಪರ ನಂಟಿದೆ ಎನ್ನುವುದನ್ನು ಕಂಡುಕೊಳ್ಳುತ್ತಾರೆ. ನಿರಂಕುಶಮತಿತ್ವ, ಆತ್ಮಶ್ರೀ ತತ್ವಗಳು ಅಧ್ಯಾತ್ಮದ ಭಾಗವೇ ಆಗುತ್ತದೆ. ಉಪನಿಷತ್‌ಗಳಲ್ಲಿ ಅವರು ಈ ಪ್ರಜ್ಞೆಯನ್ನು ಕಾಣುತ್ತಾರೆ. ಈ ತತ್ವಗಳು ಆಧುನಿಕವಲ್ಲ, ಬದಲಾಗಿ ಪರಂಪರೆಯೊಳಗೆ ಆ ಪ್ರಜ್ಞೆಯನ್ನು ಗುರುತಿಸುತ್ತಾರೆ. ಅವರ ನಿರಾಕರಣೆ ಇದ್ದುದು ಯಾವುದು ಅಂಧಶ್ರದ್ಧೆಯೋ, ಅವುಗಳಿಗೆ ಹೊರತು ಎಲ್ಲಾ ಆಚರಣೆಗಳನ್ನೂ ಅವರು ನಿರಾಕರಿಸಲಿಲ್ಲ.

ಕುವೆಂಪು ಅವರ ವೈಚಾರಿಕತೆ ವಿಗ್ರಹ ಭಂಜಕ ವೈಚಾರಿಕತೆಯಲ್ಲ. ಅವರು ಸಾಹಿತ್ಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದ ಕಾಲಕ್ಕೆ ಈ ಬಗೆಯ ಭಂಜಕ ಪ್ರವೃತ್ತಿಗಳು ಸಾಕಷ್ಟು ಕಾಣಿಸಿಕೊಂಡಿತ್ತು. ಮಾತ್ರವಲ್ಲ ವೈಚಾರಿಕತೆಯ ಹೆಸರಿನಲ್ಲಿ ಅಂತಹ ವಾದಗಳು ಬಹು ಜನಪ್ರಿಯವೂ ಆಗಿತ್ತು. ಆದರೆ ಕುವೆಂಪು ಅಂತಹ ಜನಪ್ರಿಯತೆಯ ದಾರಿಯನ್ನು ತುಳಿಯದೆ ಆಧ್ಯಾತ್ಮಿಕ ಪರಂಪರೆಯನ್ನೇ ತಮ್ಮ ಚಿಂತನೆಯ ತಳಹದಿಯನ್ನಾಗಿ ಮಾಡಿಕೊಂಡು ಮಾನವ ಘನತೆಗೆ ತಕ್ಕುದಲ್ಲದ ಕಾಲಬಾಹಿರವಾದ ಸಂಗತಿಗಳನ್ನು ನಿರಾಕರಿಸುತ್ತಾರೆ. ಈ ವಿಶ್ಲೇಷಣೆಯನ್ನು ತಾತ್ವಿಕವಾಗಿ ಗುರುತಿಸುವುದಾದರೆ, ಅವರು ಹಿಂದೂ ಧರ್ಮದ ತಳಹದಿಯನ್ನೇ ಪ್ರಶ್ನಿಸುತ್ತಿಲ್ಲ, ನಿರಾಕರಿಸುತ್ತಿಲ್ಲ. ಈ ತಳಹದಿಯ ಆಶಯಕ್ಕೆ ತೊಡಕಾಗುವಂತೆ ಆವರಿಸಿಕೊಂಡಿದ್ದ ಕಲ್ಮಷಗಳನ್ನು ಪ್ರಶ್ನಿಸಿದರು, ನಿರಾಕರಿಸಿದರು.

"ವೇದ ಅನಾದಿಯಾದರೆ ಅನಂತವೂ ಆಗಿರುವುದಿಲ್ಲವೇ? ವೇದ ಪೂರೈಸಿದ ಗ್ರಂಥವಲ್ಲ; ವೇದದ ಕಟ್ಟಕಡೆಯ ಅಧ್ಯಾಯ ಅಂದಿಗೇ ಮುಗಿದಿಲ್ಲ. ಅದು ಇಂದಿಗೂ, ನಾಳೆಗೂ ಮುಂದುವರಿಯುತ್ತದೆ. ಹಾಗೆಯೇ ಋಷಿಗಳೂ, ಆಚಾರ್ಯರೂ ಅಂದಿಗೇ ಪೂರೈಸಲಿಲ್ಲ, ಕೊನೆಗೊಂಡಿಲ್ಲ. ಇಂದಿಗೂ, ನಾಳೆಗೂ ಬರುತ್ತಲೇ ಇರುತ್ತಾರೆ. ಆದ್ದರಿಂದ ಹೊಸ ಋಷಿಗಳ, ಹೊಸ ವೇದವಾಕ್ಯಗಳನ್ನು ಕಿವಿಗೊಟ್ಟು ಕೇಳಿ, ಸಂಕುಚಿತ ಬುದ್ಧಿಯನ್ನು ದೂರಮಾಡಿ"(ಕುವೆಂಪು ಸಮಗ್ರ ಗದ್ಯ-ಸಂ-2, ಪುಟ

67) ಎನ್ನುತ್ತಾರೆ. ಅಂದರೆ, ಅಂತಿಮ ಸತ್ಯವನ್ನು ಯಾರೂ ಹೇಳಿಲ್ಲ. ಆ ಹುಡುಕಾಟ ಸದಾ ಇದೆ. ಹಾಗಾಗಿ ಯಾವ ವೇದಗಳೂ ಅಂತಿಮವಲ್ಲ, ಯಾವ ಆಚಾರ್ಯನೂ ಅಂತಿಮವಲ್ಲ. ಈ ಮಾತನ್ನು ಕುವೆಂಪು ಅವರಿಗೆ ಭಾರತೀಯ ದಾರ್ಶನಿಕತೆಯ ಹಿನ್ನೆಲೆಯ ಕಾರಣದಿಂದ ಮಾತ್ರ ಹೇಳಲು ಸಾಧ್ಯವಾಗಿದೆ.

ಕುವೆಂಪು ಅವರು ಪರಿಭಾವಿಸಿದ ಆಧ್ಯಾತ್ಮಿಕತೆ ಮತೀಯ ನೆಲೆಯದ್ದಲ್ಲ. ಅವರ ವೈಚಾರಿಕತೆಯ ಪರಿಕಲ್ಪನೆ ಧರ್ಮದ ಪರಿಧಿಯಿಂದ ಹೊರಗಿನದ್ದಲ್ಲ. ವೈಚಾರಿಕತೆ ಧರ್ಮದ ದರ್ಶನವನ್ನು ಒಳಗೊಂಡದ್ದೇ ಆಗಿದೆ. ಇದು ಕುವೆಂಪು ಅವರ ವೈಚಾರಿಕತೆಯ ವೈಶಿಷ್ಟ್ಯವೂ ಹೌದು. ಅವರೇ ಹೇಳಿಕೊಳ್ಳುವಂತೆ "ಯಾವ ಒಂದು ಸಂಪ್ರದಾಯದ ಸಂಕೋಚಕ್ಕೂ ಸಿಕ್ಕಿಕೊಳ್ಳಬಾರದು. ಯಾವ ಒಂದು ಪಂಥದ ಇಕ್ಕಟ್ಟಿಗೂ ಒಳಗಾಗಬಾರದು. ಸರ್ವಧರ್ಮಗಳ ಸಾರವಾದ ಉದಾರ 'ದರ್ಶನ'ವೊಂದನ್ನು ಕಂಡು ಕಟ್ಟಿಕೊಂಡು ಬಾಳಬೇಕು. 'ದರ್ಶನ' ಸಂಪಾದನೆ ಅಷ್ಟೇನೂ ದುಸ್ಸಾಧ್ಯವಲ್ಲ ಮತಭ್ರಾಂತಿಯನ್ನು ಬಿಟ್ಟು ಮತಿಯ ದೀವಟಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಹೊರಡುವ ಸರ್ವರಿಗೂ ಅದು ಸುಲಭ ಸಾಧ್ಯ" (ಕುವೆಂಪು ಸಮಗ್ರ ಗದ್ಯ–ಸಂ–2, ಪುಟ 71) ಎನ್ನುತ್ತಾರೆ. ಅಂದರೆ ದರ್ಶನ ಸರ್ವಧರ್ಮಗಳ ಸಾರವೇ ಹೊರತು, ಧರ್ಮ ರಹಿತವಾದುದಲ್ಲ. ಅದಕ್ಕಾಗಿ ಬಿಡಬೇಕಾದುದು ಮತಭ್ರಾಂತಿಯನ್ನು. ಎಚ್ಚರಗೊಳಿಸಿಕೊಳ್ಳಬೇಕಾದುದು ಮತಿಯನ್ನು. ಮತಭ್ರಾಂತಿ ರಹಿತವಾದ 'ದರ್ಶನ'ವನ್ನು ಕಂಡುಕೊಳ್ಳಲು ಸಾಧ್ಯ ಎನ್ನುವುದು ಕುವೆಂಪು ಅಭಿಮತ. ಇಂತಹ ದಿವ್ಯ ದರ್ಶನದ ಪ್ರಾಪ್ತಿಗೆ ಬೇಕಾದುದು ಸ್ವತಂತ್ರವಾದ ಬುದ್ಧಿ. ಉದಾರ ಪ್ರತಿಭಾಪೂರ್ಣವಾದ ಬುದ್ಧಿ. ಅಂತಹ ಬುದ್ಧಿಯನ್ನೇ 'ನಿರಂಕುಶಮತಿ' ಎಂದು ಕುವೆಂಪು ಗುರುತಿಸಿದ್ದು. ಯಾವುದು ಜನರನ್ನು ಮೂಢರನ್ನಾಗಿಸುತ್ತದೋ, ಯಾವುದರಿಂದ ಜನರ ಸ್ವತಂತ್ರ ಆಲೋಚನೆ ಕುಂಠಿತವಾಗುತ್ತದೋ ಅಂತಹ ಮತೀಯ ಮನಸ್ಥಿತಿಯನ್ನು ಹೋಗಲಾಡಿಸಿ 'ಮತಿ'ಯನ್ನು ಎಚ್ಚರಗೊಳಿಸುವ ಕುರಿತಾಗಿ ಕುವೆಂಪು ಅವರ ಒಲವಿದ್ದುದು. ಈ ಪ್ರಕ್ರಿಯೆಯಲ್ಲಿ ಅಧ್ಯಾತ್ಮ ಅವರಿಗೆ ತೊಡಕಾಗಲಿಲ್ಲ, ದಾರಿಯೇ ಆಗಿತ್ತು. ಯಾವುದನ್ನು ಅನೇಕ ವಿಚಾರವಾದಿಗಳು ಒಂದು ಇನ್ನೊಂದರೊಳಗೆ ಸೇರುವುದಕ್ಕೆ ಮಾತ್ರವಲ್ಲ, ಸಮೀಪಿಸುವುದಕ್ಕೂ ಅವಕಾಶವಿಲ್ಲದ ಎರಡು ಪ್ರತ್ಯೇಕ ಧ್ರುವಗಳಂತೆ ಚಿತ್ರಿಸಿದ್ದರೋ, ಅಂತಹ ಅಧ್ಯಾತ್ಮ ಮತ್ತು ವೈಚಾರಿಕತೆಗಳು ಪರಸ್ಪರ ಸಂಧಿಸಿದ್ದು, ಕುವೆಂಪು ಅವರ ಸಾಹಿತ್ಯದಲ್ಲಿ ಎನ್ನುವುದನ್ನು ಗಮನಿಸಬೇಕು.

ಅವರು ವೈಚಾರಿಕತೆ ಮತ್ತು ಆಧ್ಯಾತ್ಮಿಕತೆ ಎಂಬ ಪ್ರತ್ಯೇಕತೆಯ ಅಥವಾ ದ್ವಂದ್ವವನ್ನು ಮೀರಿದ್ದರು ಎನ್ನುವುದು ಸ್ಪಷ್ಟವಾಗುತ್ತದೆ. ಅವರ ಆಧ್ಯಾತ್ಮಿಕತೆಯ ಪರಿಭಾಷೆಯಲ್ಲೇ ವೈಚಾರಿಕತೆಯೂ ಒಳಗೊಳ್ಳುತ್ತದೆ. ಅವು ಪ್ರತ್ಯೇಕಗೊಳ್ಳುವುದಿಲ್ಲ. ಒಂದರೊಳಗೊಂದು ಸೇರಿಕೊಂಡಂತಿದೆ. ಅವರು ನಿರಾಕರಿಸಿದ್ದು ಮತವನ್ನು ಮತ್ತು ಮತದ ಸಂಕೇತಗಳನ್ನು. ಗುಡಿ, ಚರ್ಚ್, ಮಸೀದಿಗಳನ್ನು ಬಿಟ್ಟು ಹೊರಬನ್ನಿ ಎಂದು ಕರೆಕೊಟ್ಟಿದ್ದರು. ಇವುಗಳೆಲ್ಲವೂ ಮತದ ಸಂಕೇತಗಳು. ಆಧ್ಯಾತ್ಮಿಕ ಅನಿವಾರ್ಯತೆಗಳಲ್ಲ. ಅಧ್ಯಾತ್ಮಕ್ಕೆ ಇಂತಹ ಯಾವುದೇ ನಿರ್ದಿಷ್ಟ ಕಟ್ಟುಪಾಡುಗಳಿಲ್ಲ. ಅಧ್ಯಾತ್ಮ ಎನ್ನುವುದು ಬಿಡುಗಡೆ, ಆದರೆ ಮತ ಎನ್ನುವುದು ಬಂಧನ. ಮತದ ಹುಟ್ಟಿನ ಹಿಂದೆಯೇ ಅಂತಹ ಬಂಧನದ ಕುರುಹುಗಳಿವೆ.

ಕುವೆಂಪು ಅವರಲ್ಲಿ ಬಹಳಷ್ಟು ಸೂಕ್ಷ್ಮವಾದ ವಿಮರ್ಶಾತ್ಮಕ ಪ್ರಜ್ಞೆ ಇದೆ. ಆದರೆ ಅದು ಕೇವಲ ಒಪ್ಪುವ ಅಥವಾ ನಿರಾಕರಿಸುವ, ಪ್ರತಿರೋಧದ ಮಾದರಿಯದ್ದಲ್ಲ. ಅದು ಸಮನ್ವಯದ ದೃಷ್ಟಿ. ಈ ನಿಲುವಿನ ಹಿಂದೆ, ಅವರ ಸ್ಪಷ್ಟತೆಯಿಂದ ಕೂಡಿದ ಸಮನ್ವಯದ ದೃಷ್ಟಿ ಇದೆ. ಅದರ ಹಿಂದೆ ಗಾಢವಾದ ಆಲೋಚನೆಯಿಂದ ಬೆಳೆದಂತಹ ದರ್ಶನವಿದೆ.

ಈ ದರ್ಶನದ ಹಿಂದಿನ ಸೂಕ್ಷ್ಮ ಮತಿತ್ವವನ್ನು ಗುರುತಿಸಬೇಕು. ಯಾವುದು ಸನಾತನತೆಯ ಮುಖವಾಡದಿಂದ ಮತ–ಧರ್ಮ–ಪರಂಪರೆಯ ವೇಷದಿಂದ ರೂಢಿಯಲ್ಲಿ ಉಳಿದು ಜನರನ್ನು ಶೋಷಿಸುವ ಸಾಧನವಾಗಿದೆಯೋ, ಜನರನ್ನು ತಪ್ಪು ಹಾದಿಗೆ ತೆಗೆದುಕೊಂಡು ಹೋಗುವ ಅಥವಾ ಅನ್ಯರ ನಿಯಂತ್ರಣಕ್ಕೆ ಒಳಪಡುವಂತೆ ಮಾಡುವ ಕುಯುಕ್ತಿಯಿಂದ ಕೂಡಿದೆಯೋ, ಅದನ್ನು ಕಪಟವೆನ್ನುವ ಕಾರಣದಿಂದಲೇ ತಿರಸ್ಕರಿಸುತ್ತಾರೆ. ಇಲ್ಲಿ ತಿರಸ್ಕಾರವಿರುವುದು ಕಪಟವಾದುದರ ಬಗ್ಗೆ. ಅದು ನಿಜವಾದ ಧರ್ಮ–ಪರಂಪರೆಯ ಕುರಿತಾಗಿ ಅಲ್ಲ. ಯಾವುದು ಮನುಕುಲವನ್ನು ಸಂಕುಚಿತತೆಯತ್ತ ತೆಗೆದುಕೊಂಡು ಹೋಗುವುದೋ, ಯಾವುದು ಪರಂಪರೆಯ ಬೆಳಕಿನಲ್ಲೇ ಮೂಡಿದ ವಿಶ್ವಮಾನವತೆಯ ತತ್ವಕ್ಕೆ ವಿರುದ್ಧವೋ ಅವುಗಳನ್ನು ವಿಮರ್ಶಿಸುತ್ತಾರೆ, ನಿರಾಕರಿಸುತ್ತಾರೆ. ಅಂದರೆ ಯಾವುದು ವಿಶ್ವಮಾನವ ತತ್ವಕ್ಕೆ ವಿರುದ್ಧವೋ ಅವುಗಳನ್ನು ನಿರಾಕರಿಸುತ್ತಾರೆ.

ಕುವೆಂಪು ಅವರಿಗೆ ಕಂದಾಚಾರ ಅಧ್ಯಾತ್ಮವಲ್ಲ. ಮೂಢತೆ ದಾರ್ಶನಿಕತೆಯಲ್ಲ. ಈ ಸ್ಪಷ್ಟತೆಯನ್ನು ಕುವೆಂಪು ಸಾಹಿತ್ಯದಲ್ಲಿ ನೋಡಬಹುದು. ಕಂದಾಚಾರ ಮತ್ತು ಅಧ್ಯಾತ್ಮದ ನಡುವಿನ ಸ್ಪಷ್ಟ ಅಂತರವನ್ನು ಗುರುತಿಸಿದ್ದರು. ಮೌಢ್ಯದ ನಿರಾಕರಣೆಯನ್ನು ಮಾಡುತ್ತಾರೆ. ಆದರೆ ದೇವರನ್ನೇ ನಿರಾಕರಿಸುವುದಿಲ್ಲ. ಮೌಢ್ಯದ ನಿರಾಕರಣೆಗಾಗಿ ದೇವರನ್ನೇ ನಿರಾಕರಿಸಬೇಕಾಗಿಯೂ ಇಲ್ಲ. ದೇವರನ್ನು ನಿರಾಕರಿಸುವ ನಾಸ್ತಿಕವಾದದ ಜತೆಗೆ ಕುವೆಂಪು ಅವರಿಗೆ ಸಹಮತವಿಲ್ಲ.

ಮತ ವೈಚಾರಿಕತೆಗೂ ಅಡ್ಡಿ, ಅಧ್ಯಾತ್ಮಕ್ಕೂ ಅಡ್ಡಿ. ಇದನ್ನು ಗ್ರಹಿಸಿದ ಕುವೆಂಪು ಅವರಲ್ಲಿ ವೈಚಾರಿಕತೆ, ಆಧ್ಯಾತ್ಮಿಕತೆ, ದಾರ್ಶನಿಕತೆಗಳ ನಡುವೆ ಸಂಘರ್ಷವಿಲ್ಲ, ಸಮನ್ವಯವಿದೆ. ಕುವೆಂಪು ಬಹು ಪ್ರಜ್ಞಾಪೂರ್ವಕವಾಗಿ ಈ ಸಮನ್ವಯತೆಯನ್ನು ಸಾಧಿಸಿಕೊಂಡಿದ್ದರು. ಇದು ಒಂದು ಬಗೆಯ ತಪಸ್ಸು ಇದ್ದಂತೆ. ಅವರ ಸಾಹಿತ್ಯವನ್ನು ಸಮಗ್ರವಾಗಿ ನೋಡಿದಾಗ ಅದರೊಳಗೆ ಕಾಣುವ ಈ ಸಮನ್ವಯ ದೃಷ್ಟಿ ಅರ್ಥವಾಗುತ್ತದೆ. ಬಿಡಿಬಿಡಿಯಾಗಿ, ತಮ್ಮ ತಮ್ಮ ಅಗತ್ಯಗಳಿಗೆ ತಕ್ಕಂತೆ ಪಾರ್ಶ್ವಿಕ ಅಂಶಗಳನ್ನಷ್ಟೇ ತೆಗೆದುಕೊಂಡು ವ್ಯಾಖ್ಯಾನಿಸಿದರೆ, ಅದು ಕುವೆಂಪು ಅವರ ಚಿಂತನೆಗೆ ಮಾಡುವ ಅಪಚಾರವಾಗುತ್ತದೆ. "ಕುವೆಂಪು ಅವರು ಹೇಳುವ ಆಧ್ಯಾತ್ಮಿಕ ವಿಚಾರಗಳು ಬಹಳ ಗಮನಾರ್ಹವಾದವು. ಜ್ಞಾನ, ಭಕ್ತಿ, ಅತೀಂದ್ರಿಯ ಸಾಕ್ಷಾತ್ಕಾರ ಮತ್ತು ಬ್ರಹ್ಮ ವಿಹಾರದಂಥ ಗಂಭೀರ ಅಂಶಗಳನ್ನು ಒಳಗೊಂಡಿರುವ ಆಧ್ಯಾತ್ಮಿಕ ಸ್ವರೂಪವನ್ನು ಕುವೆಂಪು ಒಂದು 'ಜೀವನ ಮೌಲ್ಯ'ವೆಂದು ಪ್ರತಿಪಾದಿಸುತ್ತಾರೆ. ಮೇಲ್ನೋಟಕ್ಕೆ ಇದು ಅಭಾಸ ಅಥವಾ ವೈಚಾರಿಕತೆಯ ವಿರೋಧಾಭಾಸವೆನಿಸಿದರೂ ಅದರಲ್ಲಿನ ಸೂಕ್ಷ್ಮ ಅಂಶಗಳನ್ನು ಪರಿಶೀಲಿಸಿದರೆ ಹಾಗೆನಿಸುವುದಿಲ್ಲ. ಏಕೆಂದರೆ ಜನಮನದ ಸಾಂಸ್ಕೃತಿಕ ವಲಯದಿಂದಲೇ ಮೂಡಿ ಬಂದುದು ಮತ ಧರ್ಮವಾದರೂ ಅದು ಕೇವಲ ಭಕ್ತಿ ನೆಲೆಯಲ್ಲಿ ನಿಲ್ಲಿಸದೆ ಆಂತರಂಗಿಕ ದರ್ಶನಕ್ಕೆ ಅವಕಾಶ ಒದಗಿಸುತ್ತದೆ.

ಈ ದರ್ಶನದ ಹಾದಿಯಲ್ಲಿ ಅದು ತನ್ನೆಲ್ಲ ಸೀಮಿತ ಪರಿಧಿಯನ್ನು ಕಳಚಿಕೊಂಡು ವಿಶ್ವ ಚೇತನವನ್ನು ಪಡೆದುಕೊಳ್ಳುತ್ತದೆ. ಅದೇ ಅಧ್ಯಾತ್ಮದ ವೈಶಿಷ್ಟ್ಯತೆ" (ಡಾ. ವಿಠಲರಾವ್ ಗಾಯಕ್‌ವಾಡ್, ಕುವೆಂಪು ಸಾಹಿತ್ಯದಲ್ಲಿ ವೈಚಾರಿಕತೆ, ಪು 96–97) ಎನ್ನುವ ಡಾ. ವಿಠಲರಾವ್ ಗಾಯಕ್‌ವಾಡ್ ಅವರ ಗ್ರಹಿಕೆ ಸೂಕ್ಷ್ಮವಾಗಿದೆ. ಅನೇಕ ಜನ ವಿದ್ವಾಂಸರು ಕುವೆಂಪು ಅವರನ್ನು ವಿರೋಧಾಭಾಸದ ವಿಚಾರವಾದಿ ಎಂಬಂತೆ ತಿಳಿದುಕೊಂಡಿದ್ದಿದೆ. ಆದರೆ ಇದನ್ನು ಕುವೆಂಪು ಅವರ ಅಧ್ಯಾತ್ಮದ ವೈಶಿಷ್ಟ್ಯತೆ ಎಂದು ಗುರುತಿಸುವುದು ಸೂಕ್ತವಾಗಿದೆ. ಈ ಕಾರಣದಿಂದಲೇ ಕುವೆಂಪು ಅವರ ಆಧ್ಯಾತ್ಮಿಕ ಪರಿಕಲ್ಪನೆಯು ಪ್ರಾಪಂಚಿಕ ವಿಷಯವನ್ನು ದೂರವಿರಿಸಿಲ್ಲ. ಅಥವಾ ಪ್ರಾಪಂಚಿಕತೆಯಿಂದ ದೂರವಾಗಿಲ್ಲ. ಹಾಗೆಯೇ ವೈಚಾರಿಕತೆಯು ಸಂಸ್ಕೃತಿ, ಪರಂಪರೆಯನ್ನು ಸಂಪೂರ್ಣವಾಗಿ ತಿರಸ್ಕರಿಸುವುದೂ ಇಲ್ಲ. ಬದಲಾಗಿ ಪ್ರಾಪಂಚಿಕ ಬದುಕಿನ ಒಳ್ಳೆಯ ಅಂಶಗಳ ಜತೆಗೆ ಪರಂಪರೆಯ ಒಳ್ಳೆಯ ಅಂಶಗಳು ಬೆಸೆದುಕೊಂಡಿದೆ. ಈ ಮೂಲಕ ಆಧ್ಯಾತ್ಮಿಕತೆ ಎಂದರೆ ಸಂಪೂರ್ಣ ಶರಣಾಗತಿ, ಕಣ್ಮುಚ್ಚಿ ಒಪ್ಪಿಕೊಳ್ಳುವುದೆಂಬ ಕಲ್ಪನೆಯನ್ನು, ವೈಚಾರಿಕತೆ ಎಂದರೆ ಎಲ್ಲವನ್ನು ಪ್ರಶ್ನಿಸುವುದೆಂಬ ಗ್ರಹಿಕೆಯನ್ನು ಮೀರಿ ಇವೆರಡೂ ಸಮತೋಲನದ ಸ್ಥಿತಿಯಲ್ಲಿ ಇರಬಹುದೆನ್ನುವುದನ್ನು ಕುವೆಂಪು ತೋರಿಸಿಕೊಟ್ಟರು. ಸಮನ್ವಯದ ಹೊಸ ದಾರಿಯೊಂದನ್ನು ತೋರಿಸಿದರು. ಇದನ್ನೇ, ವಿಮರ್ಶಕರಾದ ಎಚ್. ತಿಪ್ಪೇರುದ್ರಸ್ವಾಮಿಯವರು "ವಿಚಾರವಾದ ವಿಕೃತಿಯಾಗಬಾರದು. ಇದು ಕುವೆಂಪು ಅವರ ವೈಚಾರಿಕತೆಯಲ್ಲಿ ಉದ್ದಕ್ಕೂ ನಾವು ಕಾಣುವ ಸಮತೋಲನ ದೃಷ್ಟಿ" (ಎಚ್. ತಿಪ್ಪೇರುದ್ರಸ್ವಾಮಿ, ಕುವೆಂಪು ಅವರ ವೈಚಾರಿಕತೆ, , ಪು–10) ಎಂದು ಹೇಳುತ್ತಾರೆ. ಮುಂದುವರಿದು ಅವರ ವೈಚಾರಿಕತೆಯ ಪಯಣದ ವಿಸ್ತಾರವನ್ನು ಗುರುತಿಸುತ್ತಾರೆ. "ಕುವೆಂಪು ಅವರ ವೈಚಾರಿಕ ನಿಲುವು ವಿಶ್ವಮಾನವ ಪ್ರಜ್ಞೆಯ ನಿಲುಗಡೆಯಲ್ಲಿ ಪೂರ್ಣತೆಯನ್ನು ಪಡೆದಿದೆ"(ಎಚ್. ತಿಪ್ಪೇರುದ್ರಸ್ವಾಮಿ, ಕುವೆಂಪು ಅವರ ವೈಚಾರಿಕತೆ, ಪು–10) ಎನ್ನುತ್ತಾರೆ. ವಿಶ್ವಮಾನವ ಪ್ರಜ್ಞೆ ವೈಚಾರಿಕತೆಯ ಪೂರ್ಣತೆಯ ಪ್ರತೀಕ ಎಂದು ಗುರುತಿಸುವುದರಲ್ಲಿ ಉತ್ಪ್ರೇಕ್ಷೆಯಿಲ್ಲ. ಕುವೆಂಪು ಅವರಿಗೂ ತನ್ನನ್ನು ತಾನು ಆಧ್ಯಾತ್ಮಿಕ ಜೀವಿ, ತನ್ನ ಸಾಹಿತ್ಯದ ಆಶಯ ಆಧ್ಯಾತ್ಮಿಕತೆಯೇ ಎಂದು ಹೇಳುವುದಕ್ಕೆ ಯಾವುದೇ ಹಿಂಜರಿಕೆ ಕಾಣುವುದಿಲ್ಲ.

ವೈಚಾರಿಕತೆಯನ್ನು 'ನಿರಾಕರಣೆ' ಎಂಬ ಅರ್ಥದಲ್ಲಿ ಪರಿಭಾವಿಸಿದವರನೇಕರು. ಆದರೆ ಕುವೆಂಪು ನಿರಾಕರಣೆಯ ಮಟ್ಟದ ವೈಚಾರಿಕತೆಯನ್ನು ಪ್ರತಿಪಾದಿಸಿದವರಲ್ಲ. ಹೀಗಾಗಿ ಅವರು ನಾಸ್ತಿಕತೆಯನ್ನು ಬೆಂಬಲಿಸಲಿಲ್ಲ. ವಿಗ್ರಹರಾರಾಧನೆಯನ್ನು ವಿರೋಧಿಸಿದರು, ಜನರಿಗೆ ಗುಡಿ, ಚರ್ಚು, ಮಸೀದಿಗಳನ್ನು ಬಿಟ್ಟು ಹೊರಬನ್ನಿ ಎಂದರು. ಆದರೆ ದೇವರ ಕಲ್ಪನೆಯನ್ನೇ ವಿರೋಧಿಸಲಿಲ್ಲ. ತಪಸ್ಸು, ಪ್ರಾರ್ಥನೆಗಳು ಅವರ ವೈಚಾರಿಕತೆಯ ಭಾಗವೇ ಆಗಿರುತ್ತದೆ. ಯಾವುದೇ ಒಂದು ಧರ್ಮವನ್ನು, ಜಾತಿಯನ್ನು ಅವರು ವಿರೋಧಿಸಲಿಲ್ಲ. ಆದರೆ ಅವರು ವ್ಯಕ್ತಪಡಿಸಿದ ವಿಚಾರಗಳ ವಿಸ್ತಾರವನ್ನು ಅರ್ಥ ಮಾಡಿಕೊಳ್ಳದೆ ಇದನ್ನು ವೈರುಧ್ಯ ಎಂದವರು, ಯಥಾಸ್ಥಿತಿವಾದಿ ಎಂದವರು ಅನೇಕರು. ಯಾವುದು ಲೋಕಕ್ಕೆ ಕೆಡುಕಿನ ಸಂಗತಿಯೋ ಅದನ್ನು ವಿರೋಧಿಸಿದರೇ ಹೊರತು ವಿರೋಧ, ಬಂಡಾಯ ಎನ್ನುವುದೇ ಅವರ ಗುರಿಯಾಗಿರಲಿಲ್ಲ.

"ಕುವೆಂಪು ಅವರೊಂದು ಆಧ್ಯಾತ್ಮಿಕ ಚೇತನ, ನಿಸ್ಸಂದೇಹವಾಗಿ ಪ್ರಾರ್ಥನೆ,

ತಪಸ್ಸುಗಳಲ್ಲಿ ಅವರಿಗೆ ಅನನ್ಯ ಶದ್ಧೆ; ಹಾಗೆಯೇ ಪುನರ್ಜನ್ಮ, ಕರ್ಮ ಸಿದ್ಧಾಂತಗಳಲ್ಲಿ ನಂಬಿಕೆ. ಇನ್ನೊಂದು ಕಡೆ ಅವರು ಪ್ರಖರ ವೈಚಾರಿಕ ಪ್ರಜ್ಞೆಯನ್ನು, ವೈಜ್ಞಾನಿಕ ದೃಷ್ಟಿಯನ್ನು ಪ್ರಕಟಿಸುತ್ತಾರೆ. ನಿಜವಾದ ವೈಚಾರಿಕತೆ ದೇವರನ್ನು, ಧರ್ಮವನ್ನು ಅಲ್ಲಗಳೆಯುವುದಿಲ್ಲ. ವಿಜ್ಞಾನ ವಿರೋಧಿಸುವುದು ಮತವನ್ನೇ ಹೊರತು ಅಧ್ಯಾತ್ಮವನ್ನಲ್ಲ" (ಸಿ.ಪಿ.ಕೆ., ಕುವೆಂಪು ಸಾಹಿತ್ಯಲೋಕ, ಪು–52) ಎನ್ನುತ್ತಾರೆ. ಈ ಮೂಲಕ ವೈಚಾರಿಕತೆಗೆ ಮತ್ತು ಅಧ್ಯಾತ್ಮಕ್ಕೆ ಪರಸ್ಪರ ಸಂಘರ್ಷವಿಲ್ಲ ಎನ್ನುವುದನ್ನು ತೋರಿಸಿಕೊಡುತ್ತಾರೆ. ಅವರು ಪ್ರತಿಪಾದಿಸಿದ ಆಧ್ಯಾತ್ಮಿಕತೆಯಲ್ಲಿ ಸಾಮಾಜಿಕ ನ್ಯಾಯ ನಿರಾಕರಿಸಲ್ಪಡಲಿಲ್ಲ, ಆಧ್ಯಾತ್ಮಿಕತೆಯು ಸಮಾನತೆಯ ತತ್ವಕ್ಕೆ ವಿರುದ್ಧವಾಗಿರಲಿಲ್ಲ.ಅಂದರೆ ಕುವೆಂಪು ಅವರ ಆಧ್ಯಾತ್ಮಿಕ ಪರಿಕಲ್ಪನೆ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ತಳಹದಿಯ ಮೇಲೆಯೇ ನಿಂತಿತ್ತು. ಹೀಗಾಗಿ ತೀರಾ ಸರಳವಾಗಿ ಕುವೆಂಪು ಅವರ ವೈಚಾರಿಕತೆನ್ನಾಗಲೀ, ದಾರ್ಶನಿಕತೆಯನ್ನಾಗಲೀ ಅರ್ಥಮಾಡಿಕೊಳ್ಳಲಾಗದು.ಅದು ಕುರುಡಾದ ವಿರೋಧವೂ ಅಲ್ಲ, ಪುರಸ್ಕಾರವೂ ಅಲ್ಲ. ತರ್ಕಬದ್ಧವಾದ ನಿಲುವು ಎನ್ನುವುದನ್ನು ಅರ್ಥೈಸಿಕೊಳ್ಳಬೇಕು.

❖❖❖

ದ್ವಾರಕೆಯವನು
ಈ ದ್ವಾರದೊಳಗೂ ಬಂದಿಹನೆ?
ತಡೆಯುವುದು ಅಸದಳವೆ
ದೇಹರಹಿತನ ದ್ವಾರಪ್ರವೇಶವನು

# ವೈದೇಹಿಯವರು ಕಂಡಂತೆ 'ಹನ್ನೆರಡಾಣೆಯ ಜಗತ್ತು' ಮತ್ತು ಅದರೊಳಗಿನ 'ಕಾಲಾಂತರದ ಮಾತು'

**ಚಂದನಾ ಕೆ.ಎಸ್.**
ಕನ್ನಡ ಉಪನ್ಯಾಸಕಿ
ವಿವೇಕಾನಂದ ಕಾಲೇಜು (ಸ್ವಾಯತ್ತ), ನೆಹರೂ ನಗರ, ಪುತ್ತೂರು – 574 203

ಸ್ತ್ರೀಪರ ಕಾಳಜಿಯನ್ನು ತಮ್ಮ ಬರಹಗಳ ಕೇಂದ್ರವಾಗಿಸಿಕೊಂಡವರು ವೈದೇಹಿ. ತಮ್ಮ ಕಥೆಗಳ ಮೂಲಕ ಅಕ್ಕು, ಅಮ್ಮಚ್ಚಿ, ಪುಟ್ಟಮ್ಮತ್ತೆ ಎಂಬಿತ್ಯಾದಿ ಕನ್ನಡ ಸಾಹಿತ್ಯಲೋಕವು ಮರೆಯಲಾಗದ ಹಲವು ಗಟ್ಟಿಪಾತ್ರಗಳನ್ನು ಸೃಷ್ಟಿಸಿದವರು ಇವರು. ಹಿಂದಣ ಹೆಜ್ಜೆಯನ್ನು ಅರಿಯುವ ನಿಟ್ಟಿನಲ್ಲಿ ಹಿಂದಿನ ಕಾಲದ ಸ್ತ್ರೀಯರ ಕಷ್ಟಮಯ ಜೀವನವನ್ನು ಇಂದಿನ ಪೀಳಿಗೆಗೆ ತಿಳಿಸುವ ಮೂಲಕ ಸಾಮಾಜಿಕ ಪರಿವರ್ತನೆಗೆ ಪ್ರಯತ್ನಿಸಿದ್ದಾರೆ.

ವೈದೇಹಿಯವರು ಕತೆ, ಕವನ, ಮಕ್ಕಳ ನಾಟಕ ಕಾದಂಬರಿ ಇತ್ಯಾದಿಗಳನ್ನು ಬರೆಯುವುದರೊಂದಿಗೆ ಅಂಕಣ ಬರಹ, ಸ್ಮೃತಿ ಕಥನ, ಆತ್ಮಚರಿತ್ರೆ ನಿರೂಪಣೆ, ಅನುವಾದ ಇತ್ಯಾದಿ ಕ್ಷೇತ್ರಗಳಲ್ಲೂ ಬರವಣಿಗೆ ಮಾಡಿದ್ದಾರೆ. ಎರಡೂವರೆ ದಶಕಗಳ ಹಿಂದೆ ಪಿ.ಲಂಕೇಶರು ಸಂಪಾದಕರಾಗಿದ್ದ 'ಲಂಕೇಶ್ ಪತ್ರಿಕೆ'ಯಲ್ಲಿ ಲೇಖನಗಳು ಮತ್ತು ಅಂಕಣಗಳನ್ನು ಬರೆದಿದ್ದರು. ಅವುಗಳು ಒಟ್ಟುಸೇರಿ 1996ರಲ್ಲಿ 'ಮಲ್ಲಿನಾಥನ ಧ್ಯಾನ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ನಂತರ 2010ರಿಂದ ಸುಮಾರು ಎರಡು ವರ್ಷಗಳ ಕಾಲ 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ 'ಹರಿವ ನೀರು' ಎಂಬ ಹೆಸರಿನಲ್ಲಿ ಅಂಕಣವನ್ನು ಬರೆದರು. 2012ರಲ್ಲಿ ಈ ಅಂಕಣ ಬರಹಗಳು ಒಟ್ಟುಸೇರಿ 'ಹರಿವ ನೀರು' ಎಂಬ ಹೆಸರಿನ ಕೃತಿಯಾಗಿ ಹೆಗ್ಗೋಡಿನ ಅಕ್ಷರ ಪ್ರಕಾಶನದಿಂದ ಪ್ರಕಟಗೊಂಡಿದೆ. ಈ ಸಂಕಲನದಲ್ಲಿ 'ಹನ್ನೆರಡಾಣೆ ಜಗತ್ತು' ಎಂಬ ಒಂದು ಲೇಖನವಿದೆ. ಕಾಲದೊಂದಿಗೆ ಬದಲಾಗುತ್ತಿರುವ ಮನುಷ್ಯ ಸಂಬಂಧ ಹಾಗೂ ಮನಸ್ಥಿತಿಗಳನ್ನು ತಿಳಿಸುತ್ತಾ ಪ್ರಸ್ತುತ ಜಗತ್ತಿನ ಲಾಭಬಡುಕತನದ ಬಗ್ಗೆ ಈ ಲೇಖನದಲ್ಲಿ ವಿಷಾದಿಸುತ್ತಾರೆ ವೈದೇಹಿ. ಲೇಖನದ ಆರಂಭದಲ್ಲಿ ಸದ್ಯ ನಡೆಯುತ್ತಿರುವ ವಿದ್ಯಮಾನಗಳ ಭಾಗವಾಗಿ ಹಳ್ಳಿಗಳಲ್ಲಿನ ಹೊಲಗದ್ದೆಗಳ ಮಾರಾಟದ ವಿವರವನ್ನು, ಕೃಷಿಭೂಮಿಯಲ್ಲಿ ಮನೆ ಕಟ್ಟುತ್ತಿರುವುದನ್ನು ತಿಳಿಸುತ್ತಾ – "ನದಿ–ನದಗಳು, ಕಾಡು–ಗದ್ದೆಗಳು ನಂದಿಹೋಗುವ ಕಾಲದಲ್ಲಿ ಬಂದು ನಿಂತಿರುವೆವೆ? ...ಬೆಟ್ಟ ನದಿ ಭೂಗರ್ಭ ಮಣ್ಣು ಏನೇ ಕಂಡರೂ ಇದರಲ್ಲಿ ಏನಿದೆ ದುಡ್ಡು ತರುವಂಥದ್ದು? ಎಂಬ ಪ್ರಶ್ನೆ ಮೊದಲು ಹುಟ್ಟುತ್ತದೆ... ಮನುಷ್ಯನನ್ನು ಕಂಡರೂ 'ಇವನಿಂದ ಏನು ಲಾಭ?' ಎಂಬಲ್ಲಿಗೆ ಬಂದು ತಲುಪಿದ್ದೇವೆ" (ವೈದೇಹಿ, 2012, ಪುಟ ಸಂಖ್ಯೆ 39) ಎನ್ನುತ್ತಾರೆ.

ಪ್ರಸ್ತುತ ಸಮಾಜದ ಸ್ಥಿತಿಯನ್ನು, ಮಾನವರ 'ಇನ್ನೂ ಬೇಕು' ಎಂಬ ದುರಾಸೆಯ ಕುರಿತು ವೈದೇಹಿ ಬೇಸರಪಡುತ್ತಾರೆ. ಜಾಗತೀಕರಣ ಹಾಗೂ ಖಾಸಗೀಕರಣಗಳಿಂದಾಗಿ ಗ್ರಾಮೀಣ ಜೀವನದ ಮೇಲೆ, ಕೃಷಿಯ ಮೇಲೆ ಆಗುತ್ತಿರುವ ಪರಿಣಾಮಗಳನ್ನು ಇಲ್ಲಿ ವೈದೇಹಿ ತಿಳಿಸುತ್ತಾರೆ. 'ಕೃಷಿಕಾರ್ಮಿಕರಿಲ್ಲ, ಮಕ್ಕಳು ದೂರವಿದ್ದಾರೆ, ನಾವು ವೃದ್ಧರು ಕೃಷಿ ಕೆಲಸದ ಜವಾಬ್ದಾರಿ ವಹಿಸಲು ಸಾಧ್ಯವಿಲ್ಲ. ಹೀಗಾಗಿ ಸಿಕ್ಕಿದಷ್ಟು ಬೆಲೆಗೆ ಜಮೀನನ್ನು

ಮಾರುವುದು' ಎಂಬುದು ಪ್ರತೀ ಹಳ್ಳಿಯಲ್ಲಿ ಕೇಳಿಬರುವ ಮಾಮೂಲು ಮಾತಾಗಿದೆ. ದುಡ್ಡೊಂದಿದ್ದರೆ ಹೇಗಾದರೂ ಬದುಕಬಹುದು ಎಂಬ ಸ್ಥಿತಿಗೆ ಬಂದಿದ್ದಾನೆ ಮನುಷ್ಯ. ಕೃಷಿಭೂಮಿಯನ್ನು ಕಟ್ಟಡ ಕಟ್ಟಲು ಬಳಸಿದರೆ ನಾಳೆ ಹೊಟ್ಟೆಗೆ ತಿನ್ನುವ ಅಕ್ಕಿಯನ್ನು ಎಲ್ಲಿ ಬೆಳೆಯುವುದು ಎಂದು ಅವನು ಯೋಚಿಸುತ್ತಿಲ್ಲ. ವಸ್ತುಗಳನ್ನು ಮಾರಿಯೋ–ಕೊಂಡೋ ಅವುಗಳಿಂದ ಲಾಭ ಪಡೆಯುವ ಮನುಷ್ಯನ ಮನಸ್ಸು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಸಾಟಿ ಮನುಷ್ಯನೊಂದಿಗೆ ಸಂಬಂಧ ಬೆಳೆಸುವುದರಿಂದ ಅಥವಾ 'ಬರೀ ಅವನೊಂದಿಗೆ ಮಾತನಾಡುವುದರಿಂದ ತನಗೇನು ಲಾಭವಿದೆ?' ಎಂದು ಆಲೋಚಿಸುವಷ್ಟು ಸ್ವಾರ್ಥಪರವಾಗಿದೆ.

ಹೊಟ್ಟೆಗೆ ಅನ್ನ ನೀಡುವ ಭೂಮಿತಾಯಿಯನ್ನು ನೆನೆಯುತ್ತ ಜನಪದರು ಕೃಷಿ ಮಾಡುತ್ತಿದ್ದ ನಾಡಿನಲ್ಲೇ – ಲಾಭಕೋರ ರಾಜಕಾರಣಿಗಳಿಂದಲೇ ಅನುಮತಿ ಪಡೆದು 'ವಿಶೇಷ ವಿತ್ತ ವಲಯ' ಎಂದು ಘೋಷಿಸಿ, ರಾತ್ರೋರಾತ್ರಿ ಮನೆ ಬಾಗಿಲು ತಟ್ಟಿ – ತೆನೆಗಟ್ಟಿದ ಪೈರಿನ ಮೇಲೆ ಲೋಡುಗಟ್ಟಲೆ ಮಣ್ಣುಸುರಿದು ಖಾಲಿ ಮಾಡಿಸಿದ್ದನ್ನು ನೆನೆಯುತ್ತಾ ವೈದೇಹಿಯವರು 'ಭ್ರೂಣಹತ್ಯೆ ಇನ್ನು ಬೇರೆ ಇದೆಯೇನು?' ಎಂದು ನೋವಿನಿಂದ ಪ್ರಶ್ನಿಸುತ್ತಾರೆ (ವೈದೇಹಿ, 2012, ಪುಟ ಸಂಖ್ಯೆ 40). 'ಭ್ರೂಣಹತ್ಯೆ' ಎಂದರೆ ಬರೀ ಮಾನವರ ಹೊಟ್ಟೆಯಲ್ಲಿನ ಶಿಶುಗಳನ್ನು ಮಾತ್ರ ಕೊಲ್ಲುವುದಲ್ಲ, ನಮ್ಮ ಸುತ್ತಲಿನ ಸಸ್ಯ, ಪ್ರಾಣಿ ಪಕ್ಷಿಗಳ ಮುಂದಿನ ಪೀಳಿಗೆಗಳನ್ನು ಕೊಲ್ಲುವುದೂ ಭ್ರೂಣಹತ್ಯೆಯೇ ಎಂಬ ಎಚ್ಚರ ನಮಗಿರಬೇಕು ಎಂಬುದು ಅವರ ಮಾತಿನ ಆಂತರ್ಯ. 'ನಮ್ಮ ಮೇಲಿರುವ ಅಧಿಕಾರಸ್ಥರು ನಮ್ಮನ್ನು ನಮ್ಮೊಂದಿಗೆ ಪ್ರಕೃತಿಯನ್ನೂ ಸರಿಯಾಗಿ ನೋಡಿಕೊಳ್ಳುತ್ತಾರೆ' ಎಂದು ಜನಸಾಮಾನ್ಯರಾದ ನಾವು ನೆಮ್ಮದಿಯಲ್ಲಿ ಇದ್ದರೂ ಬದಲಾದ ಸರ್ಕಾರಗಳು ತಮ್ಮ ಲಾಭಕ್ಕಾಗಿಯೇ ಕೆಲಸ ಮಾಡುತ್ತಿರುತ್ತಾರೆ ಎಂಬುದನ್ನು ಈ ಮೂಲಕ ಲೇಖಕಿ ತಿಳಿಸಿದ್ದಾರೆ.

"ಕೆರೆ ಕೊಳ್ಳ ಕಟ್ಟಿಸಿದವರ ಕತೆ ಕೇಳಿದ್ದೇವೆ. (ಕೆರೆ ಬತ್ತಿಸಿದವರ ಮುಚ್ಚಿಸಿದವರ ಕತೆಗಳನ್ನೂ ಓದುತ್ತಿದ್ದೇವೆ.) ನದಿ ಸೃಷ್ಟಿಸಿದ ಮನುಷ್ಯರ ಕುರಿತು ಕೇಳಿದ್ದುಂಟೆ?" (ವೈದೇಹಿ, 2012, ಪುಟ ಸಂಖ್ಯೆ 41) ಎಂದು ವೈದೇಹಿಯವರು ಪ್ರಕೃತಿಯ ವಿನಾಶ ಮತ್ತು ಹಾಗೆ ನಾಶ ಮಾಡಿದ್ದನ್ನು ಪುನರ್‌ಸೃಷ್ಟಿ ಮಾಡಲಾಗದ ನಮ್ಮ ಅಸಾಮರ್ಥ್ಯದ ಕುರಿತು ಪ್ರಶ್ನಿಸುತ್ತಾರೆ. ಪ್ರಕೃತಿಯ ಬದಲಾವಣೆಗಳ ಕುರಿತಾಗಿ ಮಾತನಾಡುತ್ತಾ ಆಲೀಬಾಬ ಮತ್ತು ಕಾಸಿಮನ ಉದಾಹರಣೆ ನೀಡುತ್ತಾ 'ಮನುಷ್ಯನಿಗೆ ಆಲಿಬಾಬನಂತೆ ಸಂತೃಪ್ತಿ ಬೇಕೇ ಹೊರತು ಕಾಸಿಮನ ದುರಾಸೆಯಲ್ಲ' ಎನ್ನುತ್ತಾರೆ. ನಮ್ಮ ಉಳಿವಿಗಾಗಿ ಲಾಭಕ್ಕಾಗಿ ಪ್ರಕೃತಿಯ ಅಂಗಗಳಾದ ಕಾಡು, ಗುಡ್ಡ, ನದಿ, ಬೆಟ್ಟಗಳನ್ನು ಮನಬಂದಂತೆ ದೋಚುವುದನ್ನು ವಿರೋಧಿಸುತ್ತಾರೆ. ಪ್ರಕೃತಿಯ ಕುರಿತು ಹೇಳುತ್ತಾ ವೈದೇಹಿಯವರು "ವೈಜ್ಞಾನಿಕ ಮನೋಭಾವದ ಜೊತೆಗೆ ಚಂದ್ರನನ್ನು ಚಂದ್ರನನ್ನಾಗಿ ಕಾಣುವ, ನದಿಯನ್ನು ನದಿಯನ್ನಾಗಿ ಕಡಲು, ಬೆಟ್ಟ ಗುಡ್ಡಗಳನ್ನು ಅವವೇ ಆಗಿ ಕಾಣುವ ಮುಗ್ಧತೆಯನ್ನು ಉಳಿಸಿಕೊಳ್ಳದೇ ಹೋದಲ್ಲಿ ದುರಂತ ಕಟ್ಟಿಟ್ಟ ಬುತ್ತಿ. ಕನಿಷ್ಠ ಇಷ್ಟು ಮುಗ್ಧತೆಯನ್ನಾದರೂ ಉಳಿಸಿಕೊಳ್ಳೋಣ, ಉಳಿಸಿಕೊಳ್ಳಬೇಕು; ಪ್ರಯತ್ನಪೂರ್ವಕವಾಗಿಯಾದರೂ." (ವೈದೇಹಿ, 2012, ಪುಟ ಸಂಖ್ಯೆ 42) ಎನ್ನುತ್ತಾರೆ. ಪ್ರಕೃತಿ ಕುರಿತ ಅವರ ಕಾಳಜಿಯನ್ನು ಈ ಮುಂದಿನ ಸಾಲುಗಳಲ್ಲಿ ಗಮನಿಸಬಹುದು:

"ಕುದುರೆಮುಖ ಗಣಿಗಾರಿಕೆ ಮುಂದುವರಿದರೆ ತುಂಗಭದ್ರಾ ನದೀಮೂಲವೇ

ಒಣಗುತ್ತದೆ ಎಂಬುದು ಕೇವಲ ಭಾವುಕ ಚೀತ್ಕಾರವಲ್ಲ. ಅಮಾಯಕ ಕಲ್ಪನೆಯಲ್ಲ. ವಿಜ್ಞಾನ ಸಂಸ್ಥೆಗಳೇ ಅಧ್ಯಯನ ಆಧಾರ ಸಹಿತ ನುಡಿದ ಭವಿಷ್ಯ. ತುಂಗಭದ್ರಾ ನದೀಪಾತ್ರಗಳು ಜಲವಿಹೀನವಾಗುವುದನ್ನು ಸುಮ್ಮನೇ ಊಹಿಸಿಕೊಳ್ಳಿ.... ನದಿ ಬೇಕು ನಮಗೆ. ಜೀವನ ಬೇಕು. ನದಿ ಒಣಗಿದಲ್ಲಿ ಲೋಕ ಜೀವನ ಒಣಗುತ್ತದೆ. ಎಂತಲೇ ನದಿಗೆ, ನೀರಿಗೆ, "ಜೀವನ" ಎಂಬ ಹೆಸರೂ ಇದೆ. ಎಷ್ಟು ಉಪಯೋಗ ಪಡೆಯಬೇಕೋ ಅಷ್ಟು ಪಡೆದುಕೊಳ್ಳೋಣ. ಪಡಕೊಂಡಿದ್ದೇವೆ. ಮಿತಿಮೀರುವುದು ಬೇಡ." (ವೈದೇಹಿ, 2012, ಪುಟ ಸಂಖ್ಯೆ 41)

ಮನುಷ್ಯ ಪ್ರಕೃತಿಯಿಂದ ತನಗೆ ಬೇಕಾಗಿದ್ದಕ್ಕಿಂತ ಹೆಚ್ಚನ್ನು ಪಡೆದು ತನ್ನ ದುರಾಸೆಗೆ ಭೂಮಿಯನ್ನೂ ಬಿಡದೇ ಅಗೆದು ದೋಚುತ್ತಿರುವ ಸಮಯದಲ್ಲಿ ಮುಂದಿನ ಪೀಳಿಗೆಯ ಕುರಿತಾಗಿಯೂ ಆಲೋಚಿಸಬೇಕು ಎಂದು ಸೂಕ್ಷ್ಮವಾಗಿ ಎಚ್ಚರಿಸುತ್ತಾರೆ ವೈದೇಹಿ. ನದಿ ಒಣಗಿದಲ್ಲಿ ಲೋಕ ಜೀವನ ಒಣಗುತ್ತದೆ ಎನ್ನುತ್ತಾರೆ. ಪ್ರಕೃತಿಯಿಂದ ಬೇಕಾದಷ್ಟನ್ನು ಪಡೆದು ಆಲಿಬಾಬನಂತೆ ಸಂತೃಪ್ತಿಯಿಂದ ಇರುವುದನ್ನು ಬಿಟ್ಟು ಕಾಸಿಮನಂತೆ ಇನ್ನೂ ಬೇಕು ಎಂಬ ದುರಾಸೆಗೆ ಒಳಗಾದರೆ ದುರಂತವನ್ನು ಎದುರಿಸಬೇಕಾದೀತು ಎಂಬ ಕಿವಿಮಾತು ಹೇಳುತ್ತಾರೆ.

**ಬದಲಾದ ಕಾಲದೊಂದಿಗಿನ ನಡಿಗೆ**

ವ್ಯಕ್ತಿಗಳು ದುಡಿಯಲಾರಂಭಿಸಿದೊಡನೇ ಬದಲಾದ ಸಂಪ್ರದಾಯಗಳ/ ಗಾದೆಗಳ ಕುರಿತೂ ಇಲ್ಲಿ ಅಂಕಣಕಾರ್ತಿ ವೈದೇಹಿ – ಮುಂಚೆಲ್ಲ ಸಂಬಳ ಹೇಳುವ ಕಟ್ಟಲೆ ಎಲ್ಲಿತ್ತು? 'ಹೆಣ್ಣಿನ ವಯಸ್ಸು ಕೇಳಬೇಡ. ಗಂಡಿನ ಸಂಬಳ ಕೇಳಬೇಡ' ಎಂದು ಗಾದೆಯೇ ಇತ್ತು. ಈಗ ಆ ಗಾದೆಯ ಅರ್ಧಾಂಶ ಮಾತ್ರ ಉಳಕೊಂಡಿದೆ. ಇವತ್ತು ಒಂದು ವರ್ಗದ ಸ್ತ್ರೀ–ಪುರುಷರಿಬ್ಬರೂ ತಮ್ಮ ಸಂಬಳ ಹೇಳಿಕೊಳ್ಳುವ ಕಾಲ." (ವೈದೇಹಿ, 2012, ಪುಟ ಸಂಖ್ಯೆ 43) ಎಂದಿದ್ದಾರೆ. ತಮ್ಮ ಲೇಖನದ ಮೊದಲಭಾಗದಲ್ಲಿ ಪ್ರಕೃತಿ ಹಾಗೂ ಮನುಷ್ಯನ ಸಂಬಂಧದ ಕುರಿತು ಮಾತನಾಡಿದ ವೈದೇಹಿ, ಎರಡನೇ ಭಾಗದಲ್ಲಿ ಮನುಷ್ಯ–ಮನುಷ್ಯರ ಸಂಬಂಧವನ್ನು ವಿಶ್ಲೇಷಿಸುತ್ತಾರೆ. ಮನುಷ್ಯ ಇಂದು ತನ್ನ ಮಾನವೀಯತೆ ಸೂಕ್ಷ್ಮತೆಗಳನ್ನು ಮರೆತು ಯಾವ ಕ್ಷೇತ್ರದಲ್ಲಾದರೂ ಸರಿ, ಹೇಗಾದರೂ ಸರಿ 'ಗುರುತಿಸಿಕೊಳ್ಳಬೇಕೆಂಬ' ಹಪಾಹಪಿಗೆ ಬಿದ್ದಿದ್ದಾನೆ. ಇದರಿಂದಾಗಿ ಹಲವು ಬಗೆಗಳಲ್ಲಿ ಉಳ್ಳವರು–ಇಲ್ಲದವರ ನಡುವೆ ಅಂತರ ಏರ್ಪಡುತ್ತಿದೆ. ಎನ್ನುತ್ತಾ ಇಂದಿನ ಯುವಜನತೆ ಧರ್ಮ ಹಾಗೂ ಆರ್ಥಿಕತೆಯ ಕಾರಣಕ್ಕಾಗಿ ದಾಳವಾಗುತ್ತಿದ್ದಾರೆ. ನಾವು ಅದನ್ನು ತಪ್ಪಿಸುವುದು ಹೇಗೆ ಎಂದು ಅವರು ಚಿಂತಿಸುತ್ತಾರೆ.

**ಇಂದಿನ ಪೀಳಿಗೆಯ ಮುಂದಿನ ಹಾದಿ**

ಯುವಜನತೆಯ ಕುರಿತಾಗಿ ಇಂದಿನ ಯುವಪೀಳಿಗೆಯ ಆದರ್ಶಗಳು, ಮಾದರಿಗಳು ಬದಲಾಗಿವೆ. ಅವರಿಗೆ ಸಮಾಜೋದ್ಧಾರಕ್ಕಾಗಿ, ಜನತೆಯ ಉದ್ಧಾರಕ್ಕಾಗಿ, ಪ್ರಕೃತಿಯ ರಕ್ಷಣೆಗಾಗಿ ಹೋರಾಡಿದ ವ್ಯಕ್ತಿಗಳಿಗಿಂತ ಸಿನೆಮಾದಲ್ಲಿ ನಾಯಕ–ನಾಯಕಿಯರಾಗಿ ನಟಿಸುವ ನಟ–ನಟಿಯರು, ಜಾಹೀರಾತುಗಳಲ್ಲಿ ನಟಿಸುವವರೇ ಮಾದರಿಯಾಗುತ್ತಿದ್ದಾರೆ. ತಮ್ಮ ಅಂತರಂಗದ ಸೌಂದರ್ಯಕ್ಕೆ ಪ್ರಾಮುಖ್ಯತೆ ನೀಡದೇ ಬಾಹ್ಯ ಸೌಂದರ್ಯದಿಂದ ಉಳಿದವರನ್ನು ಸೆಳೆಯುವತ್ತ ಚಿತ್ತನೆಟ್ಟಿರುವ ಯುವಪೀಳಿಗೆಯು ಮೂಢನಂಬಿಕೆಯ

ಹಾದಿಹಿಡಿದಿದೆ ಎಂದು ವೈದೇಹಿಯವರು ಸರಿಯಾಗಿಯೇ ಗುರುತಿಸುತ್ತಾರೆ.

**ಆತ್ಮಾವಲೋಕನದ ಕಾಲವಿದು**

ಲೇಖನದ ಕೊನೆಯ ಭಾಗಕ್ಕೆ ಬಂದಾಗ ವೈದೇಹಿಯವರು ಸಮಾಜದ ಸಧ್ಯದ ಸ್ಥಿತಿಯ ಬಗ್ಗೆ ವಿಷಾದದ ಮಾತುಗಳನ್ನಾಡುತ್ತಾ ಸಮಾಜವನ್ನು ಹಲವು ಕೋಣೆಗಳ ಒಂದು ಮನೆಯಂತೆ ಚಿತ್ರಿಸಿ ಅಲ್ಲಿ ನಡೆಯುತ್ತಿರುವ ಅತ್ಯಾಚಾರ–ಅನಾಚಾರ–ಭ್ರಷ್ಟಾಚಾರಗಳಲ್ಲಿ ಅವುಗಳನ್ನು ಅರಿತೂ ಅರಿಯದಂತೆ ನಿಲ್ಲಿಸಲು ಯತ್ನಿಸದಿರುವ ನಮ್ಮ ಪಾಲೆಷ್ಟಿದೆ? ಎಂದು ಆತ್ಮಾವಲೋಕನ ಮಾಡಿಕೊಳ್ಳುವಂತೆ ಹೇಳುತ್ತಾರೆ.

**ಕಾಲಾಂತರದ ಬದಲಾವಣೆಯ ಮಾತು**

'ಕಾಲಾಂತರದ ಮಾತು' ಎಂಬ ಮತ್ತೊಂದು ಲೇಖನವೂ ಈ ಸಂಕಲನದಲ್ಲಿದೆ. ಕೃಷಿಕರೊಂದಿಗಿನ ಸಂದರ್ಶನದಂತೆ ಬರೆಯಲ್ಪಟ್ಟಿರುವ ಈ ಲೇಖನದಲ್ಲಿ ಸಂದರ್ಶನಕಾರ ಕೇಳಿದ ಈ ಕಾಲದ ಕುರಿತ ಪ್ರಶ್ನೆಗೆ ಕೃಷಿಕ – "ಜೀವನ ಮಾಡಲಿಕ್ಕೆ ಇದು ಒಳ್ಳೆಯ ಕಾಲ. ಹಿಂದಿನಷ್ಟು ಕೆಟ್ಟ ಕಾಲ ಅಲ್ಲ. ಕೆಟ್ಟದು ಅಂತ ಇದ್ದರೆ ಅದೆಲ್ಲ ಮನುಷ್ಯನೇ ಮಾಡಿಕೊಂಡ ವಾತಾವರಣದಿಂದ ಉಂಟಾದ ದೋಷ" (ವೈದೇಹಿ, 2012, ಪುಟ 56) ಕೃಷಿಕನಾಡುವ ಈ ಮಾತುಗಳು 'ಹನ್ನೆರಡಾಣೆ ಜಗತ್ತು ಲೇಖನದ ವಿಷಯಕ್ಕೆ ಪೂರಕವಾಗಿವೆ. ಹಾಗೂ ಈ 'ಕಾಲಾಂತರದ ಮಾತು' ಲೇಖನದಲ್ಲಿ ವೃದ್ಧಾಪ್ಯದ ಆರಂಭದಲ್ಲಿರುವ ಕೃಷಿಕ ದಂಪತಿ ಅಂದು ಮತ್ತು ಇಂದಿನ ಸಮಾಜವನ್ನು ಘಟನೆಗಳ ಮೂಲಕ ತುಲನೆ ಮಾಡುತ್ತಾರೆ. ಹೆಣ್ಣುಮಕ್ಕಳ ವಿದ್ಯಾಭ್ಯಾಸ, ಅವರ ಆರ್ಥಿಕ, ಸಾಮಾಜಿಕ ಸ್ವಾತಂತ್ರ್ಯ ಇತ್ಯಾದಿಗಳಲ್ಲಿ ಹೊರಜಗತ್ತು ಬದಲಾವಣೆಯಾಗಿದ್ದನ್ನು ಗುರುತಿಸುತ್ತಲೇ ಈಗಿನ ಕಾಲದ ಜನರ ಸ್ವಭಾವ ವಿಶ್ಲೇಷಣೆಯನ್ನೂ ಅವರು ಮಾಡುತ್ತಾರೆ – "ಮುಖ್ಯವಾಗಿ ಮಾರ್ಪಾಟು. ಬೇರೆ ಬೇರೆ ರೀತಿಯ ಮಾರ್ಪಾಟು. ಜನರ ಮನಸ್ಸು ಬಹಳ ಬದಲಾವಣೆಯಾಗಿದೆ. ದುಡಿದು ತಿನ್ನುವುದಕ್ಕಿಂತ ದುಡಿಯದೇ ತಿನ್ನುವವರು ಹೆಚ್ಚಾಗಿದ್ದಾರೆ. ಸಂಬಳಕ್ಕೆ ತಕ್ಕ ಕೆಲಸಮಾಡಬೇಕು ಎಂದು ಶ್ರದ್ಧೆ ಇರುವುದಿಲ್ಲ." (ವೈದೇಹಿ, 2012, ಪುಟ 60) ಪ್ರಾಣಿಗಳು ಸಹಾ ಶ್ರಮವಹಿಸಿ, ತಮ್ಮ ಆಹಾರವನ್ನು ಕಷ್ಟಪಟ್ಟು ಹುದುಕಿ ತಿನ್ನುತ್ತವೆ. ಆದರೆ ಹೆಚ್ಚಿನ ಮನುಷ್ಯರು ಇತ್ತೀಚೆಗೆ ದುಡಿದು ತಿನ್ನುವುದಕ್ಕಿಂತ ದುಡಿಯದೇ ತಿನ್ನುವುದರಲ್ಲಿ ಹೆಚ್ಚು ಸುಖ ಕಾಣುತ್ತಿದ್ದಾರೆ. ದುಡಿದು ತಿನ್ನುವುದಕ್ಕಿರುವ ಶ್ರಮದ ಬೆಲೆ ದುಡಿಯದೇ ತಿನ್ನುವವನಿಗೆ ತಿಳಿಯದು. ಹೀಗೆಯೇ ಸಾಗಿದರೆ ಮುಂದೆ ದುಡಿಯುವವರು ಕಡಿಮೆಯಾಗಿ ಕುಳಿತು ತಿನ್ನುವವರು ಹೆಚ್ಚಾದರೆ ಆಹಾರ ಉತ್ಪಾದನೆಯ ಅಭಾವ ಉಂಟಾಗುತ್ತದೆ. ಅದರಿಂದಾಗಿ ಸಮಾಜದಲ್ಲಿ ಅರಾಜಕತೆಯೂ ಉಂಟಾಗಬಹುದು.

ಹೀಗೆ ವೈದೇಹಿಯವರು ತಮ್ಮ 'ಹರಿವ ನೀರು' ಅಂಕಣ ಬರಹಗಳ ಸಂಕಲನದ 'ಹನ್ನೆರಡಾಣೆ ಜಗತ್ತು' ಹಾಗೂ 'ಕಾಲಾಂತರದ ಮಾತು' ಎಂಬ ಲೇಖನಗಳಲ್ಲಿ ಪ್ರಕೃತಿ ಹಾಗೂ ಅದರೊಂದಿಗಿನ ಮಾನವ ಸಂಬಂಧ ಮತ್ತು ಸಮಾಜ ಹಾಗೂ ಅದರೊಳಗಿನ ಮಾನವರ ನಡುವಿನ ಸಂಬಂಧಗಳ ಸ್ವರೂಪಗಳನ್ನು ತಿಳಿಸುತ್ತಾ ಹನ್ನೆರಡಾಣೆಯಾಗಿರುವ ಜಗತ್ತು ಪೂರ್ಣರೂಪಕ್ಕೆ ಅಂದರೆ ಹದಿನಾರಾಣೆಯಾಗಬೇಕಾದರೆ ನಮಗೆ ಬೇಕಾಗಿರುವುದೇನು ಎಂಬ ವಿಚಾರದ ಸತ್ಯದರ್ಶನ ಮಾಡಿಸುತ್ತಾರೆ.

❖❖❖

# ಅಭಿವೃದ್ಧಿ ಹಾಗೂ ಪರಿಸರ : ಕನ್ನಡ ಕತೆಗಳ ನೋಟ

**ಡಾ. ಅಮರೇಂದ್ರ ಶೆಟ್ಟಿ ಆರ್.**
ಸಹಾಯಕ ಪ್ರಾಧ್ಯಾಪಕರು
ಕನ್ನಡ ಸ್ನಾತಕೋತ್ತರ ಅಧ್ಯಯನ ಹಾಗೂ ಸಂಶೋಧನಾ ಕೇಂದ್ರ
ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ವಿಜಯನಗರ, ಬೆಂಗಳೂರು– 560104

ತೊಂಬತ್ತರ ದಶಕದಲ್ಲಿ ಜಾರಿಗೆ ಬಂದ ಹೊಸ ಆರ್ಥಿಕ ಮತ್ತು ಕೈಗಾರಿಕಾ ನೀತಿಗಳು ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳಿಗೆ ಭಾರತದ ಆರ್ಥಿಕತೆಯನ್ನು ಮುಕ್ತವಾಗಿ ತೆರೆದ ನಂತರ ಉದ್ಯಮ ವಲಯ, ಉದ್ಯೋಗ ಕ್ಷೇತ್ರ, ಶಿಕ್ಷಣ, ತಂತ್ರಜ್ಞಾನ, ಪರಿಸರ, ಕೃಷಿ ಮುಂತಾದ ಎಲ್ಲ ವಲಯಗಳೂ ಅನೂಹ್ಯವೆನ್ನುವಷ್ಟು ಪರಿವರ್ತನೆಗಳಿಗೆ ಒಳಗಾದವು. ಆ ಪರಿವರ್ತನೆ ಹಾಗೂ ಪಲ್ಲಟಗಳನ್ನು ಜಾಗತೀಕರಣ ಕಾಲಘಟ್ಟದ ಕನ್ನಡ ಸಣ್ಣ ಕತೆಗಳು ಹೇಗೆ ದಾಖಲಿಸಿವೆ ಎನ್ನುವುದು ತುಂಬ ಕುತೂಹಲದ ಸಂಗತಿ. ಅಂತಹ ನಾಲ್ಕು ಕತೆಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ.

ಶ್ರೀಧರ ಬಳಗಾರರ 'ಇಳೆ ಎಂಬ ಕನಸು' ಎಂಬ ಕತೆ ಆಧುನಿಕ ಅಭಿವೃದ್ಧಿ ಯೋಜನೆಗಳ ಕಾರಣದಿಂದ ನಾಶವಾಗುವ ದೇಸಿ ಸಂಸ್ಕೃತಿ, ಜೀವ ವೈವಿಧ್ಯ ಮತ್ತು ಬುಡಕಟ್ಟು ಜನಾಂಗಗಳ ಅಸ್ಮಿತೆಗಳ ಕುರಿತು ದಟ್ಟ ಸಹಾನುಭೂತಿಯನ್ನು ಹೊಂದಿರುವಂತದ್ದು.

ಕಾಳೀ ನದಿಗೆ ಕಟ್ಟಿದ ಅಣೆಕಟ್ಟೆಯ ಹಿನ್ನೀರಿನಲ್ಲಿ ಮುಳುಗಿ ಹೋದ ಗ್ರಾಮವೊಂದರ ದುರಂತವನ್ನು ಚಿತ್ರಿಸುವ ಈ ಕತೆ ಮುಳುಗಿದ್ದ ಗ್ರಾಮವೊಂದರ ಭೌತಿಕ ವಿವರಗಳು ಮಾತ್ರವಲ್ಲ, ಅಲ್ಲಿನ ಬುಡಕಟ್ಟು ಜನ, ಅವರ ವಿಭಿನ್ನ ಜೀವನ ಕ್ರಮಗಳು, ಅವರ ದೈವಗಳು ಎಲ್ಲವೂ ಆಧುನಿಕ ಅಭಿವೃದ್ಧಿ ಯೋಜನೆಗಳೆಂಬ ದೈತ್ಯ ಶಕ್ತಿಯೆದುರು ತತ್ತರ ನಡುಗಿ ಕಾಲ್ಕಿತ್ತ ದಾರುಣ ದುರಂತವನ್ನು ತೆರೆದಿಡುತ್ತದೆ.

ಅಣೆಕಟ್ಟು ಬರುವ ಮುಂಚೆ ದಟ್ಟ ಕಾಡು, ಸಮೃದ್ಧ ಜೀವ ಸಂಕುಲ, ಕಾಡು–ಊರುಗಳನ್ನು ಬೆಸೆಯುವ ಸೇತುವೆಯಂತಿದ್ದ ಬುಡಕಟ್ಟು ಹಾಗೂ ಗಿರಿಜನರು, ವೈವಿಧ್ಯಮಯ ದೈವಾಚರಣೆ–ಜೀವನಕ್ರಮಗಳು, ಇದ್ದುದರಲ್ಲಿಯೇ ನೆಮ್ಮದಿಯ ಜೀವನ ಮುಂತಾದವುಗಳಿಂದ ಅಣೆಕಟ್ಟಿನ ಹಿನ್ನೀರಿನ ಪ್ರದೇಶದ ಆ ಗ್ರಾಮ ಪ್ರಶಾಂತವಾಗಿ ಇತ್ತು. ಇಲ್ಲವೆಂದಲ್ಲ, ಮಾರುತಿ ದೇಗುಲ ಕಟ್ಟಲು ಮುಂದಾಳತ್ವ ವಹಿಸಿದ್ದ ಜನಕಜ್ಜ, ಆತನ ಹಗೆ ಶಿವಯ್ಯ, ಇಬ್ಬರ ಕಡೆಯೂ ತೊಯ್ದಾಡುತ್ತಿದ್ದ ಜನ, ಸಣ್ಣ ಪುಟ್ಟ ತಿಕ್ಕಾಟಗಳು ಎಲ್ಲವೂ ಆ ಊರಲ್ಲಿ ಇದ್ದವು. ಆದರೆ ನಾಗರಿಕ ಪ್ರಪಂಚದ ಸಂಪರ್ಕ ಅತಿಯಾಗಿಲ್ಲದ ಕಾಡಿನ ನಡುವಿನ ಆ ಊರು ತನ್ನ ಹುಟ್ಟು ಗುಣವಾದ ಮುಗ್ಧತೆ ಮತ್ತು ಸಂಕೋಚಗಳನ್ನು ಪೂರ್ತಿ ಬಿಟ್ಟುಕೊಟ್ಟಿರಲಿಲ್ಲ.

'ಇಳೆ ಎಂಬ ಕನಸು' ಕತೆ ಆರಂಭವಾಗುವುದೇ ಊರಿನ ಏಳುಬೀಳುಗಳ ಸಾಕ್ಷಿಯಂತೆ ಇರುವ ಜನಕಜ್ಜ ತೀವ್ರ ತಲ್ಲಣದ ಮನಸ್ಥಿತಿಯಲ್ಲಿ ಕಾಣುವ ಕನಸಿನಿಂದ.

ತಲೆತಲಾಂತರಗಳಿಂದ ಅಲ್ಲಿ ವಾಸವಾಗಿರುವ ಕುಣಬಿಗಳಂತಹ ಬುಡಕಟ್ಟು ಮತ್ತು ಆದಿವಾಸಿ ಜನಗಳು, ಜಟಕ, ನಾಸ, ನಾಗ, ಹುಲಿಯಪ್ಪ ಮುಂತಾದ ಅವರ ದೈವಗಳು, ವನ ದೇವತೆಗಳು – ಜನಕಜ್ಜನ ಮನೆಯ ಮುಂದೆ ಬಂದು ಅಣೆಕಟ್ಟೆಯಿಂದ ತಾವೆಲ್ಲ ನೆಲೆ ಕಳೆದುಕೊಳ್ಳುತ್ತಿರುವುದನ್ನು ಪ್ರತಿಭಟಿಸುತ್ತ, ಧಿಕ್ಕಾರ ಕೂಗುತ್ತ, ತಮ್ಮನ್ನು ಪೂಜಿಸಿ ಉಪಕಾರ ಪಡೆದ ಜನರೇ ಈಗ ತಮ್ಮನ್ನು ಅತಂತ್ರಗೊಳಿಸಿ ತಮ್ಮ ಪಾಡಿಗೆ ತಾವು ಎಲ್ಲೆಲ್ಲಿಗೋ ಹೊರಟು ಹೋಗುತ್ತಿರುವುದಕ್ಕೆ ಅಸಮಾಧಾನ ತೋರುತ್ತ ತಮ್ಮ ನೆಲೆ ಹಾಗೂ ವಾಸಸ್ಥಾನ ಉಳಿಸುವಂತೆ ಜನಕಜ್ಜನನ್ನು ಒತ್ತಾಯಿಸುತ್ತವೆ. ವನ ದೇವತೆಗಳ ಈ ಬಗೆಯ ದರ್ಶನ ಜನಕಜ್ಜನಿಗೆ ಸಾಮಾನ್ಯವಾಗಿಬಿಟ್ಟಿದೆ. ಊರವರೆಲ್ಲ ಸರ್ಕಾರದಿಂದ ಸಿಕ್ಕಿದ ಯಥೇಚ್ಚ ಪರಿಹಾರದ ಗಂಟು ಹಿಡಿದು ಊರು ತೊರೆದಿದ್ದಾರೆ. ಪೇಟೆ, ನಗರಗಳನ್ನು ಸೇರಿ ಹೊಸ ಬದುಕು ಕಂಡುಕೊಂಡಿದ್ದಾರೆ. ನಗರ ಬದುಕಿನ ಧೈರ್ಯವಿಲ್ಲದ ಕೆಲವರು ಮಾತ್ರ ಸರ್ಕಾರ ನಿರ್ಮಿಸಿರುವ ಪುನರ್ವಸತಿ ಊರಿಗೆ ಸೇರಿದ್ದಾರೆ. ಮಿಕ್ಕಂತೆ ಅಲ್ಲಿ ಉಳಿದವರೆಂದರೆ ಒಂದೆಡೆ ಕಾಡಿನ ನೆಲೆಯೂ ಇಲ್ಲದೆ, ಇನ್ನೊಂದೆಡೆ ತಮ್ಮ ಹೆಸರಿನಲ್ಲಿ ಯಾವ ಜಮೀನಿನ ಒಡೆತನವೂ ಇಲ್ಲದ್ದರಿಂದ ಪರಿಹಾರದ ಹಣವೂ ದಕ್ಕದೆ ದಿಕ್ಕೆಟ್ಟ ಬುಡಕಟ್ಟು ಹಾಗೂ ಆದಿವಾಸಿ ಜನ ಮಾತ್ರ. ಹಾಗೆಯೇ ಸರ್ಕಾರ ಒತ್ತಾಯದಿಂದ ಹೊರ ಹಾಕುವ ಕೊನೆ ಗಳಿಗೆಯ ತನಕವೂ ಊರು ಜಮೀನು ತೊರೆಯಲು ಒಪ್ಪದೆ ಹಠ ಹಿಡಿದು ಕುಳಿತ ಜನಕಜ್ಜನೂ ಅಲ್ಲೇ ಇದ್ದಾನೆ. ಆದಿವಾಸಿ ಮತ್ತು ಬುಡಕಟ್ಟು ಸಮುದಾಯಗಳು, ಜನಕಜ್ಜ–ಇಬ್ಬರಿಗೂ ಆ ಊರು, ಆ ಕಾಡು, ದೈವಗಳು, ವೃಕ್ಷ–ಜೀವ ಸಂಕುಲ, ಆ ನೆಲ ಎಲ್ಲವೂ ತಮ್ಮ ಜೀವದೊಂದಿಗೆ ಆಳವಾಗಿ ಮಿಳಿತವಾದ ಮತ್ತು ಬೆಸೆದುಕೊಂಡ ಭಾವನಾತ್ಮಕ ಸಂಗತಿಗಳು. ಹಾಗಾಗಿ ಅಷ್ಟು ಬೇಗ ಆ ಬಂಧಗಳು ಮತ್ತು ನೆನಪುಗಳನ್ನು ಕಡಿದುಕೊಂಡು ಹೋಗಲು ಸಾಧ್ಯವಾಗದೆ, ಅಲ್ಲೇ ಇರಲೂ ಎಡೆಯಿಲ್ಲದೆ ತಳಮಳಿಸುತ್ತಾರೆ.

ಕೊನೆಗೂ ಜನಕಜ್ಜ ತನ್ನ ಮಗ ಕಮಲಾಕರನ ಕುಟುಂಬದೊಂದಿಗೆ ಪಾಳು ಬಿದ್ದ ಊರನ್ನು ತೊರೆದು ಸರ್ಕಾರ ಪುನರ್ವಸತಿಯ ಹೆಸರಿನಲ್ಲಿ ಕಟ್ಟಿದ್ದ ಹೊಸ ಊರಿಗೆ ಹೋಗುತ್ತಾನೆ. ಜನಕಜ್ಜನೂ ಭಾರವಾದ ಮನಸ್ಸಿನೊಂದಿಗೆ ಅವನೊಂದಿಗೆ ಹೋಗುತ್ತಾನೆ. ಜನಕಜ್ಜನೊಂದಿಗೆ ಅಂಟಿಕೊಂಡೇ ಇದ್ದ ಆದಿವಾಸಿ ನಾಗು ಕೂಡ ಜನಕಜ್ಜನನ್ನು ಹಿಂಬಾಲಿಸುತ್ತಾನೆ. ಹೊಸ ಊರಿಗೆ ಬಂದಿರುವ ಜನರಲ್ಲಿ ಅನೇಕರಿಗೆ ತಾವು ಕಳೆದುಕೊಂಡಿರುವುದೇನು ಎನ್ನುವುದರ ಅರಿವೇ ಇಲ್ಲ. ತಮ್ಮ ಬೇರು ಮೂಲದ ಎಚ್ಚರವೇ ಇಲ್ಲವೋ ಅಥವಾ ಹೊಸ ನೆಲೆಗಳು ಮತ್ತು ಹಣದ ಗಂಟಿನ ಎದುರು ಹುಟ್ಟಿದ ವಿಚಿತ್ರ ಬೆರಗೋ ಒಟ್ಟಾರೆ ತಮಗಾದ ನಿಜ ನಷ್ಟದ ಜ್ಞಾನ ಅವರಿಗಿದ್ದಂತಿಲ್ಲ ಅಥವಾ ಇದ್ದರೂ ಅದನ್ನು ಆಳವಾಗಿ ಹೊಕ್ಕು ನೋಡುವ ಸೂಕ್ಷ್ಮತೆ ಇದ್ದಂತಿಲ್ಲ. ಹಾಗೆಯೇ ಹೊಸ ಊರಿನ ಹೊಸ ವಿಳಾಸ, ದಾರಿ, ಕ್ಷಿತಿಜಗಳಿಗೆ ಹೊಂದಿಕೊಳ್ಳಲು ಕೂಡ ಅವರಿಂದ ಆಗುತ್ತಿಲ್ಲ. ತಮ್ಮ ಚರಿತ್ರೆ, ಉದ್ಯೋಗ, ವ್ಯವಸಾಯ, ಹಳೆಯ ನೆನಪುಗಳು–ನಂಟುಗಳ ಗೈರು ಹಾಜರಿಯಲ್ಲಿ ತೀರಾ ಹೊಚ್ಚ ಹೊಸ ಬದುಕನ್ನು ಕಟ್ಟಿಕೊಳ್ಳುವುದು ಅವರಿಗೆ ಅಷ್ಟು ಸುಲಭವೆನಿಸುತ್ತಿಲ್ಲ. ಬದುಕು ಅಸಹನೀಯವಾಗುತ್ತದೆ. ದಿನಗಳು ಬೇಸರದ ಕೂಪವಾಗುತ್ತದೆ. ಒಂದು ಅಸಂಗತ ದೈನಿಕದ ವರ್ತುಲದಲ್ಲಿ ಅವರು ಸಿಕ್ಕಿಕೊಳ್ಳುತ್ತಾರೆ. ಕಳೆದುಹೋದ ಚೈತನ್ಯವನ್ನು ಹೊಸ ಜೀವನ ಪ್ರೀತಿಯಿಂದ ಮರು ದಕ್ಕಿಸಿಕೊಳ್ಳುವ

ಹಂಬಲವೂ ಅವರಿಗಿಲ್ಲ. ಜನಕಜ್ಜ ಅವರಲ್ಲಿ ತಮ್ಮ ಬೇರುಗಳ ಕುರಿತ ಮೋಹವನ್ನು ಬಿತ್ತಲೆತ್ನಿಸುತ್ತಾನೆ. ಆದರೆ ಮತ್ತೆ ಮತ್ತೆ ಅದರಲ್ಲಿ ವಿಫಲನಾಗುತ್ತಾನೆ. ಬೇರು ಕಳೆದುಕೊಂಡ ಜನ ಎಲ್ಲಿಯೂ ಬೇರೂರುವ ಶಕ್ತಿಯನ್ನು ಕಳೆದುಕೊಂಡಿದ್ದಾರೆ. ಅವರಲ್ಲಿ ಜೀವನ ಪ್ರೀತಿ ತುಂಬುವ ಪ್ರಯತ್ನದಲ್ಲಿ ಸೋತ ಜನಕಜ್ಜ ತಾನೇ ಆ ಊರಿನಿಂದ ಅದೃಶ್ಯನಾಗುತ್ತಾನೆ. ಜನಕಜ್ಜನೊಂದಿಗೆ ಹೊಸ ಊರಿಗೆ ಬಂದಿದ್ದ ನಾಗು ದಿಕ್ಕೆಟ್ಟಂತಾಗುತ್ತಾನೆ. ಎಷ್ಟೋ ದಿನಗಳ ಪ್ರತೀಕ್ಷೆ ಮತ್ತು ಹುಡುಕಾಟದ ನಂತರ ವಿಲಕ್ಷಣ ವೇಷದ ಜನಕಜ್ಜ ನಾಗುವಿಗೆ ಕಾಣುತ್ತಾನೆ. ಆದರೆ ನಾಗು ಕರೆದರೂ ಕೇಳಿಸಿಕೊಳ್ಳದೆ ಯಾರ ಅಸ್ತಿತ್ವದ ಅರಿವೂ ತನಗಿಲ್ಲ ಎನ್ನುವಂತೆ ಕಾಡಿನೊಳಗೆ ನಡೆದು ಅದರೊಳಗೆ ಬೆರೆತುಹೋಗುತ್ತಾನೆ.

ಅಣೆಕಟ್ಟೆಯ ನಿರ್ಮಾಣದಿಂದ ಒಂದಿಡೀ ಆದಿವಾಸಿ ಸಮುದಾಯ ತನ್ನ ಮೂಲ ಸ್ಥಾನವನ್ನು ಉಳಿಸಿಕೊಳ್ಳಲಾಗದೆ ಹೊಸ ಜಾಗದಲ್ಲಿ ಬೇರೂರಲಾಗದೆ ಅಳಿವಿನಂಚಿಗೆ ತಲುಪುತ್ತದೆ. ತಮ್ಮ ನೆಲ ಮೂಲ ನಂಟುಗಳನ್ನು ಉಳಿಸು ಎಂದು ಕಾಡಿನ ದೈವಗಳು ಜೀವಗಳು ಜನಕಜ್ಜನ ಕನಸಿನಲ್ಲಿ ಬಂದು ಆರ್ತ ಧ್ವನಿಯಲ್ಲಿ ಗೋಗರೆದರೂ ಆ ಕನಸಿನ ಆಶಯವನ್ನು ನೆರವೇರಿಸಲು ಜನಕಜ್ಜನಿಂದ ಆಗುವುದಿಲ್ಲ. ಹಾಗಾಗಿ ಜನಕಜ್ಜನ ಸೋಲು ಮತ್ತು ತಮ್ಮ ಬೇರಿನ ಕುರಿತ ಜನರ ನಿರ್ಮಮಕಾರದ ಕಾರಣದಿಂದ ಇಳೆಯ ಉಳಿವಿನ ಕನಸು ದಯನೀಯವಾಗಿ ಭಗ್ನವಾಗಿ ಹೋಗುತ್ತದೆ.

ಅಭಿವೃದ್ಧಿಯ ಯೋಜನೆಗಳ ಅಸಾಧಾರಣ ವಿನಾಶದ ಗುಣವನ್ನು ಈ ಕಥೆ ದಟ್ಟ ವಿಷಾದದಿಂದ ದಾಖಲಿಸುತ್ತದೆ. ಜಾಗತೀಕರಣ ಕಾಲಘಟ್ಟದಲ್ಲಿ ಹೊಸ ರೂಪ ತಾಳುತ್ತಿರುವ ಅಭಿವೃದ್ಧಿ ಮತ್ತು ಆರ್ಥಿಕ ಪ್ರಗತಿಯ ಪರಿಕಲ್ಪನೆಗಳು ಅಂತಿಮವಾಗಿ ಸಮಾಜದ ಅಂಚಿನ ಸಮುದಾಯಗಳನ್ನು ಎಂತಹ ಪರಕೀಯ ಮತ್ತು ದಿಕ್ಕೆಟ್ಟ ಸ್ಥಿತಿಗೆ ದೂಡುತ್ತವೆ ಎನ್ನುವುದನ್ನು ಅತ್ಯಂತ ಮಾರ್ಮಿಕವಾಗಿ ಈ ಕತೆ ನಿರೂಪಿಸುತ್ತದೆ.

'ಹಳ್ಳಿಯ ಪರಿಸರ, ಕಾಡು, ಸಸ್ಯ–ಪ್ರಾಣಿ, ಸಕಲ ಜೀವ ಸಂಕುಲ, ಅಲ್ಲಿನ ದೈನಂದಿನಗಳು, ಆಚರಣೆ–ನಂಬುಗೆ–ಶ್ರದ್ಧೆಗಳ ಒಟ್ಟಂದದ ಬದುಕಿನ ವಿಶಿಷ್ಟ ಲಯವನ್ನು ಯಾವ ಶಕ್ತಿಯೂ ಅಭಿವೃದ್ಧಿಯ ಹೆಸರಿನಲ್ಲಿ, ಪ್ರಗತಿಯ ನೆಪದಲ್ಲಿ ಕೆಡಿಸಬಾರದು ಎನ್ನುವುದು ಬಳಗಾರರ ಪ್ರಮುಖ ಕಾಳಜಿಯಾಗಿರುವುದು ಕಂಡು ಬರುತ್ತದೆ.'[1] ಎಂದು ನರೇಂದ್ರ ಪೈ ತುಂಬ ಕರಾರುವಾಕ್ಕಾಗಿ ಬಳಗಾರರ ಕಥನ ಲೋಕದ ಆಶಯಗಳನ್ನು ಗುರುತಿಸುತ್ತಾರೆ.

ಅಭಿವೃದ್ಧಿ ಯೋಜನೆಗಳು ಸೃಷ್ಟಿಸುವ ತಬ್ಬಲಿತನವು ಅನೇಕ ತಲೆಮಾರುಗಳನ್ನು ಕಂಗೆಡಿಸಿಬಿಡುವ ಸಾಧ್ಯತೆಯ ಕಿಂಚಿತ್ತನ್ನಾದರೂ ಅರ್ಥ ಮಾಡಿಕೊಳ್ಳದೆ ಹೋದರೆ ನಾಗರಿಕ ಬದುಕಿನ ಸುಖ ಲಾಲಸೆಗಳಿಗಾಗಿ ನೆಲೆ ಕಳೆದುಕೊಳ್ಳುವ ಅಂಚಿನ ಸಮುದಾಯಗಳ ಸಂಖ್ಯೆ ವೃದ್ಧಿಸುತ್ತಲೇ ಹೋಗುತ್ತದೆ. ಅಂತಹ ಕಟು ಸತ್ಯವನ್ನು ಸಮಕಾಲೀನ ಸಮಾಜ ಅರ್ಥ ಮಾಡಿಕೊಳ್ಳಬೇಕಾದ ಜರೂರತ್ತನ್ನು 'ಇಳೆ ಎಂಬ ಕನಸು' ಕಥೆ ಒತ್ತಿ ಹೇಳುತ್ತದೆ.

ಬಳ್ಳಾರಿಯ ಗಣಿಗಾರಿಕೆಯ ದಿನಗಳ ವಿಲಕ್ಷಣ ಜೀವನಗಾಥೆಗಳು ವಸುಧೇಂದ್ರರ ಕಥೆಗಳ ಮುಖ್ಯ ಸೆಲೆಯಾಗಿ ಕೆಲಸ ಮಾಡುತ್ತದೆ. ಬಳ್ಳಾರಿಯ ಗಣಿಗಾರಿಕೆಯಿಂದಾದ ದುರಂತವನ್ನು ಅವರು ಎಷ್ಟು ಆರ್ದ್ರವಾಗಿ ಚಿತ್ರಿಸುತ್ತಾರೆಂದರೆ, ಬಳ್ಳಾರಿ ಪ್ರದೇಶದ ಎಲ್ಲ ಸ್ಥಿತ್ಯಂತರಗಳ ಚಿತ್ರ ಕಣ್ಣೆದುರು ಮೈದಾಳಿ ಬಂದಂತಾಗುತ್ತದೆ. ಅವರ

'ಕೆಂಪು ಗಿಣಿ' ಕಥೆಯು ಬಳ್ಳಾರಿಯ ಗಣಿಗಾರಿಕೆಯಿಂದ ಅಲ್ಲಿನ ಬದುಕು ನರಕ ಸದೃಶವಾಗಿರುವುದನ್ನು ಅಪಾರ ಸಂಕಟದಿಂದ ನಿರೂಪಿಸುತ್ತದೆ. ಹಾಗೆಯೇ ಅವರ 'ಕೆಂಧೂಳಿ' ಕಥೆಯೂ ಗಣಿಗಾರಿಕೆಯ ಧೂಳು ಊರು-ಮನೆಗಳನ್ನು ಹೊಕ್ಕು ಅಲ್ಲಿನ ಜನರ ಜೀವನಕ್ರಮಗಳನ್ನೇ ವಿರೂಪಗೊಳಿಸಿದ್ದನ್ನು ದಾಖಲಿಸುತ್ತದೆ. ಅದು ಅಷ್ಟಕ್ಕೇ ನಿಲ್ಲದೆ ವ್ಯಕ್ತಿ ಸಂಬಂಧಗಳಲ್ಲಾದ ತೀವ್ರತರದ ಪಲ್ಲಟಗಳನ್ನೂ ಚಿತ್ರಿಸುತ್ತದೆ.

'ಕೆಂಧೂಳಿ' ಕಥೆಯ ನಿರೂಪಕ ಜಾಗತೀಕರಣದ ಪ್ರಭಾವದಿಂದ ಉದ್ಭವಿಸಿ ಇದ್ದಕ್ಕಿದ್ದಂತೆ ಮುನ್ನೆಲೆಗೆ ಬಂದ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿದ್ದಾನೆ. ತನ್ನ ಚಿಕ್ಕಪ್ಪನ ಮಗ, ತಾನು ತುಂಬ ಪ್ರೀತಿಸುವ ತನ್ನದೇ ತದ್ರೂಪು ಎನ್ನುವಂತಿರುವ ವಿಷ್ಣುವಿನ ಸಾವಿನ ಸುದ್ಧಿಯ ಇ-ಮೇಲನ್ನು ಅದು ತನಗೆ ತಲುಪಿದ ಹನ್ನೆರಡು ಗಂಟೆಗಳ ನಂತರ ನೋಡುತ್ತಾನೆ. ಅಷ್ಟೊಂದು ಬಿಡುವಿಲ್ಲದ ಕೆಲಸಗಳಲ್ಲಿ, ಕೆಲಸದ ಒತ್ತಡಗಳಲ್ಲಿ ಅವನು ವ್ಯಸ್ತನಾಗಿದ್ದಾನೆ. ಹಿಂದಿನ ದಿನವಷ್ಟೇ ವಿಷ್ಣು ಈತನಿಗೆ ಫೋನ್ ಮಾಡಿ ತಾನು ಮುಸ್ಲಿಂ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಿರುವುದಾಗಿಯೂ, ಅವಳನ್ನು ಮದುವೆಯಾಗಲು ಅಪ್ಪನ ವಿರೋಧವಿರುವುದಾಗಿಯೂ, ಹೇಗಾದರೂ ಅಪ್ಪನನ್ನು ಒಪ್ಪಿಸಬೇಕೆಂದೂ ಕೇಳಿಕೊಂಡಿದ್ದ. ಈತನೂ ಕೂಡ ಸಹಾಯ ಮಾಡುವುದಾಗಿ ಭರವಸೆ ಕೊಟ್ಟಿದ್ದ. ಆದರೆ ಮರುದಿನವೇ ವಿಷ್ಣುವಿನ ಸಾವಿನ ಸುದ್ಧಿಯನ್ನು ಕೇಳುವಂತಹ ದೌರ್ಭಾಗ್ಯ ಎದುರಾಗಿತ್ತು. ಕಥೆಯಲ್ಲಿ ನಿರೂಪಕನ ಬಾಲ್ಯ ಕಾಲದ ಓದಿನ ಶಾಣ್ಯಾತನ ಮತ್ತು ವೈಯಕ್ತಿಕವಾದ ಪುಕ್ಕಲುತನಗಳ ಚಿತ್ರಣ ಬರುತ್ತದೆ. ಹಾಗೆಯೇ ವಿಷ್ಣುವಿನ ಹುಂಬ ಧೈರ್ಯ ಮತ್ತು ಓದಿನ ವಿಚಾರದಲ್ಲಿನ ದಡ್ಡತನಗಳ ಚಿತ್ರವೂ ಬರುತ್ತದೆ.

ವಿಷ್ಣುವಿಗೆ ಮೂವತ್ತೆರಡರ ವಯಸ್ಸಿನಲ್ಲಿ ಗಂಡಾಂತರವಿದೆಯೆಂದು ಗುಂಡಾಚಾರಿ ಹೇಳಿದ್ದನ್ನು ಬಲವಾಗಿ ನಂಬಿಕೊಂಡ ವಿಷ್ಣುವಿನ ತಂದೆ ಅವನ ಮದುವೆಯನ್ನು ಮುಂದೂಡುತ್ತಲೇ ಬಂದ. ವಿಷ್ಣುವಿಗಿರುವ ಗಂಡಾಂತರ ನಿಜವಾಗಿಬಿಟ್ಟರೆ ತಮಗ್ಯಾರೂ ದಿಕ್ಕಿಲ್ಲದಂತಾಗಿಬಿಡುತ್ತದೆ ಎಂದು ಆತಂಕಗೊಂಡ ವಿಷ್ಣುವಿನ ಅಪ್ಪ ತನ್ನ ಹೆಂಡತಿಯಿಂದ ಇಳಿ ವಯಸ್ಸಿನಲ್ಲಿ ಹೆಂಡತಿಯಿಂದ ಮತ್ತೊಂದು ಮಗುವನ್ನು ಮಗುವಿನ ಪಡೆಯಲು ಆಕೆಯನ್ನು ಹಾಸಿಗೆಯಲ್ಲಿ ದಿನವೂ ಗೋಳಾಡಿಸಿದ್ದು, ಮಗ ಮುಸ್ಲಿಂ ಹುಡುಗಿಯನ್ನು ಮದುವೆಯಾಗಲು ತಯಾರಾದಾಗ ಅವನ ಗಂಡಾಂತರದ ವಿಚಾರವನ್ನು ಮುಂದಿಟ್ಟು ತಡೆಯಲೆತ್ನಿಸಿದ್ದು, ಮಗ ಫ್ಯಾಕ್ಟರಿಯಲ್ಲಿ ಅಪಘಾತವಾಗಿ ಸತ್ತಾಗ ಪರಿಹಾರವಾಗಿ ಬರುವ ಹಣಕ್ಕಾಗಿ ಎಡತಾಕಿದ್ದು, ಮುಸ್ಲಿಂ ಹುಡುಗಿಯನ್ನು ಮದುವೆಯಾಗುವುದಕ್ಕಿಂತ ಅವನು ಅಕಾಲದಲ್ಲೇ ಸತ್ತಿದ್ದು ಒಳ್ಳೆಯದಾಯಿತೆಂದು ನಿಟ್ಟುಸಿರಾದದ್ದು-ಹೀಗೆ ಅನೇಕ ಸಂಗತಿಗಳು ವಿಷ್ಣುವಿನ ಸಾವಿನ ನಂತರದ ವಿವರಗಳಲ್ಲಿ ಕಾಣಿಸಿಕೊಳ್ಳುತ್ತವೆ. ಬಳ್ಳಾರಿಯ ಧೂಳಿನಿಂದ ಪಾರಾಗಲು ಪದೇ ಪದೇ ಕೈ ತೊಳೆಯುವ ಅಭ್ಯಾಸಕ್ಕೆ ಬಿದ್ದ ವಿಷ್ಣುವಿನ ತಾಯಿ ಕೊನೆಗೆ ತನ್ನ ಮಗನ ಹೆಣದ ಮುಂದೆ ಅಳುವಾಗಲೂ ನಡುವೆಯೇ ಎದ್ದು ಹೋಗಿ ಕೈ ತೊಳೆದು ಬಂದಿದ್ದನ್ನು ಸಂಕಟದಿಂದ ಹೇಳಿಕೊಳ್ಳುತ್ತಾಳೆ. ಆ ಮೂಲಕ ಅಲ್ಲಿನ ಭೌತಿಕವಾದ ಮಾರ್ಪಾಟುಗಳು ವ್ಯಕ್ತಿ ಸಂಬಂಧಗಳ ಸ್ವರೂಪ ಹಾಗೂ ಸಂವೇದನೆಗಳನ್ನು ಕೂಡ ಬದಲಿಸಿರುವುದನ್ನು ಕಥೆ ಚಿತ್ರಿಸುತ್ತದೆ.

ವಿಷ್ಣು-ಮಮ್ತಾಜಳ ಮದುವೆಯನ್ನು ಧರ್ಮದ ಹೆಸರಿನಲ್ಲಿ ಹಿರಿಯರು ತಡೆದರೂ ವಿಷ್ಣುವಿನ ಸಾವಿನ ಹಲವು ವರ್ಷಗಳ ನಂತರವೂ ಮಮ್ತಾಜಳು ಅವನ ನೆನಪನ್ನು

ಹಸಿರಾಗಿಟ್ಟುಕೊಂಡು ಬಾಳುತ್ತಿರುವ ಸನ್ನಿವೇಶವೊಂದು ಕಥೆಯಲ್ಲಿ ಬರುತ್ತದೆ. ಇದನ್ನು ಕಂಡಾಗ ಜಾತಿ–ಧರ್ಮದ ಎಲ್ಲ ಲೌಕಿಕ ಲೆಕ್ಕಾಚಾರಗಳನ್ನೂ ಮೀರಿದ ಮನುಷ್ಯ ಪ್ರೇಮದ ಸಾಧ್ಯತೆಯೊಂದು ಸದಾ ಜೀವಂತವಾಗಿಯೇ ಇರುತ್ತದೆ ಎಂದು ಗಾಢವಾಗಿ ಅನ್ನಿಸುತ್ತದೆ. ಒಟ್ಟಾರೆ ಜಾಗತೀಕರಣ ಕಾಲಘಟ್ಟದ ಆರ್ಥಿಕ, ಸಾಮಾಜಿಕ, ಧಾರ್ಮಿಕ ಸಂರಚನೆಯೊಳಗಿನ ಕೆಲವು ಮೂಲ ಲಕ್ಷಣಗಳ ಯಥಾಸ್ಥಿತಿ ಹಾಗೂ ಸೂಕ್ಷ್ಮ ಪಲ್ಲಟಗಳೆರಡನ್ನೂ ದಾಖಲಿಸುವ ನಿಟ್ಟಿನಲ್ಲಿ 'ಕೆಂಧೂಳಿ' ಕಥೆ ಮುಖ್ಯವಾಗುತ್ತದೆ.

'ಕೆಂಧೂಳಿ' ಕಥೆಯಲ್ಲಿ ಸಾಂಪ್ರದಾಯಿಕತೆ ಮತ್ತು ಆಧುನಿಕತೆಗಳ ಸಂಘರ್ಷದ ಚಿತ್ರಗಳಿವೆ. ಏನನ್ನೂ ಸರಳೀಕರಿಸದೆ, ಯಾವುದನ್ನೂ ಸುಲಭ ಒಪ್ಪಿಗೆಯ –ನಿರಾಕರಣೆಯ ಧಾಟಿಯಲ್ಲಿ ಪರಿಭಾವಿಸದೆ ಲೇಖಕರು ಈ ಮುಖಾಮುಖಿಯನ್ನು ಸಾಕಷ್ಟು ಸಂಕೀರ್ಣಗೊಳಿಸಿದ್ದಾರೆ.'[3] ಎಂದು ಟಿ.ಪಿ. ಅಶೋಕರು ಕಥೆಯ ಆಲೋಚನೆಯ ದಿಕ್ಕನ್ನು ಗುರುತಿಸುತ್ತಾರೆ. ಅಶೋಕರು ಹಾಗೆಯೇ ಮುಂದುವರಿದು 'ವಸುಧೇಂದ್ರರ ಕಥೆಗಳ ಜಗತ್ತು ಬಳ್ಳಾರಿಯಿಂದ ಬೆಂಗಳೂರಿನವರೆಗೆ ಹಬ್ಬಿಕೊಂಡಿದೆ. ಬಳ್ಳಾರಿ ಜಿಲ್ಲೆಯಲ್ಲಿ ವಾಸಿಸುವ ಹಲವು ವರ್ಗ ಮಾದರಿಗಳ ಜೀವನವನ್ನು ಲೇಖಕರು ತುಂಬ ಆಪ್ತವಾಗಿ, ಅಥೆಂಟಿಕ್ ಆಗಿ ಚಿತ್ರಿಸಿದ್ದಾರೆ. ಆಧುನೀಕರಣ, ನಗರೀಕರಣ, ಹೊಸ ಶಿಕ್ಷಣ ಮತ್ತು ಉದ್ಯೋಗಾವಕಾಶಗಳಿಗಾಗಿ ನಗರಾಭಿಮುಖವಾಗಿ ಪ್ರಾರಂಭವಾಗಿರುವ ಚಲನೆಯ ಸ್ವರೂಪವನ್ನೂ, ಅದರ ಪರಿಣಾಮಗಳನ್ನೂ ಗುರುತಿಸಿ ಕಥಿಸುವುದು ವಸುಧೇಂದ್ರ ಬರವಣಿಗೆಯ ಪ್ರಧಾನ ಆಶಯ.'[4] ಎಂದು ಕೂಡ ಅಶೋಕರವರು ಅಭಿಪ್ರಾಯ ಪಡುತ್ತಾರೆ.

ವಸುಧೇಂದ್ರರ ಕಥಾ ಜಗತ್ತು ತನ್ನ ಕಣ್ಣೋಟದಲ್ಲಿ ತೆಗೆದುಕೊಳ್ಳುವ ಅನುಭವ ಹಾಗೂ ಅಭಿವ್ಯಕ್ತಿಯ ವಿನ್ಯಾಸ ಬಹು ದೊಡ್ಡದು. ಅದು ಜಾಗತೀಕರಣ ಕಾಲಘಟ್ಟದ ಬಳ್ಳಾರಿ ಮತ್ತು ಬೆಂಗಳೂರಿನಂತಹ ಪ್ರದೇಶಗಳಲ್ಲಿ ನಡೆದ ಪಲ್ಲಟಗಳನ್ನು ದಾಖಲಿಸುತ್ತಲೇ ಭಾರತದಂತಹ ಯಾವುದೇ ದೇಶದಲ್ಲಿ ನಡೆಯುತ್ತಿರಬಹುದಾದ ಪಲ್ಲಟಗಳು ಕೂಡ ಹೌದು ಎನ್ನುವಂತೆ ಕಟ್ಟಿಕೊಡುತ್ತದೆ.

ಯೂರೋಪಿಯನ್ ದೇಶಗಳ ಆಕ್ರಮಣಕಾರಿ ಸಾಮ್ರಾಜ್ಯ ವಿಸ್ತರಣೆಯ ಕಾಲದಲ್ಲಿ ಆಫ್ರಿಕಾ ಮತ್ತು ಏಷ್ಯಾದ ಹಲವು ದೇಶಗಳ ಮೂಲ ಚಹರೆಗಳು ಕಳೆದುಹೋದ ದುರಂತವನ್ನು ಬಲ್ಲೆವು. ಆದರೆ ನಂತರದ ಸ್ಥಳೀಯ ಪ್ರಭುತ್ವಗಳಲ್ಲಿ ಹಾಸುಹೊಕ್ಕಾಗಿದ್ದ ಕ್ಷುದ್ರತೆಗಳು ಮತ್ತು ಹಳೆಯ ವಸಾಹತುಶಾಹಿ ದಬ್ಬಾಳಿಕೆಯ ಗುಣದ ವಾಸನೆಗಳು ದೇಶೀಯ ಸೋಗಿನ ಹೊಸ ಸಿದ್ಧಾಂತಗಳ ಮೂಲಕ ಸ್ಥಳೀಯ ಬದುಕನ್ನು ಹೈರಾಣಾಗಿಸಿದ ಮತ್ತೊಂದು ದುರಂತವನ್ನು ತೃತೀಯ ಜಗತ್ತಿನ ದೇಶಗಳು ಕಂಡಿವೆ. ಇವೆರಡರ ನಂತರ ಕಾಣಿಸಿಕೊಂಡಿದ್ದು ಜಾಗತೀಕರಣ, ಖಾಸಗೀಕರಣ, ಉದಾರೀಕರಣಗಳು. ಇವೆಲ್ಲಕ್ಕೂ ಚೈತನ್ಯದಾಯಿಯಾದುದು ನವ ಬಂಡವಾಳಶಾಹಿ. ನಾಗರಾಜ ವಸ್ತಾರೆಯವರ 'ಹಕೂನ ಮಟಾಟ' ಎನ್ನುವ ಕಥೆ ನವ ಬಂಡವಾಳಶಾಹಿಯಿಂದ ತತ್ತರಿಸಿರುವ ಆಫ್ರಿಕಾ ಖಂಡದ ಕೀನ್ಯಾದ ನೈರೋಬಿಯ ಒಂದು ಕಥನವನ್ನು ಭಾರತೀಯ ಮನಸ್ಸುಗಳ ಮೂಲಕ ಕಟ್ಟಿಕೊಡುತ್ತದೆ.

'ಹಕೂನ ಮಟಾಟ' ಎನ್ನುವ ನೈರೋಬಿ ಪದದ ಅರ್ಥ 'ನೋ ಪ್ರಾಬ್ಲಂ ಅಟ್ ಆಲ್' ಎನ್ನುವುದಂತೆ. ಈ ಅರ್ಥ ನವ ವಸಾಹತುಶಾಹಿಯು ಆಫ್ರಿಕಾದ

ನೈರೋಬಿಯಂತಹ ಅಭಿವೃದ್ಧಿಶೀಲ ದೇಶಗಳಲ್ಲಿ ಮಾಡಿರಬಹುದಾದ ಸಾಂಸ್ಕೃತಿಕ ಅನಾಹುತಗಳ ಚಿತ್ರಗಳನ್ನು ಕಲ್ಪಿಸಿಕೊಂಡರೆ 'ನೋ ಪ್ರಾಬ್ಲಂ ಅಟ್ ಆಲ್' ಎನ್ನುವುದು ಕ್ರೂರ ವ್ಯಂಗ್ಯದ ಪರಾಕಾಷ್ಠೆಯಂತೆ ಕಾಣುತ್ತದೆ. ಆಫ್ರಿಕನ್ ಅರ್ಥವನ್ನು ಧ್ವನಿಸುವ 'ಉಬಿ' ಎನ್ನುವ ಚುಟುಕು ಹೆಸರಿನ ಭಾರತದ ವ್ಯಕ್ತಿ ಉಚ್ಚಾಟ್ರಯ ಪಟ್ಟಾಭಿ, 'ಬಸು' ಎಂದು ಕರೆಸಿಕೊಳ್ಳುವ 'ಬಸವ ದ್ಯುತಿ ಕಿರಣ ಮಾಲೆಪಲ್ಲಿ', 'ಬಾನು' ಎನ್ನುವ ಕ್ಲುಪ್ತ ಹೆಸರಿನ 'ವೈವಸ್ವತ ಪ್ರಭುಶಂಕರ ಭಾನುವಂಶಿ', ವಚನ್–ಇವರೆಲ್ಲ ಮಸಾಯಿ, ಗೋಚಾ, ಚಾಗ, ಗ್ನೂ ಮುಂತಾದ ಬುಡಕಟ್ಟು ಸಮುದಾಯಗಳು ನೆಲೆಸಿರುವ ನೈರೋಬಿಯಿಂದ ಆರೇಳು ತಾಸುಗಳ ಪ್ರಯಾಣದಷ್ಟು ದೂರದ ಅರುಷ ಎನ್ನುವ ಪ್ರದೇಶದಲ್ಲಿ ಬಸುವಿನ ಒಂದು ಶಿಕ್ಷಣ ಸಂಸ್ಥೆಯೊಂದರ ಸ್ಥಾಪನೆಯ ರೂಪುರೇಶೆಗಳಿಗಾಗಿ ಸುತ್ತಾಡುತ್ತಿದ್ದಾರೆ. ಬಸುವಿನದು ಬೆಂಗಳೂರಿನಲ್ಲಿ ರಿಯಲ್ ಎಸ್ಟೇಟ್ ಧಂದೆ. ಉಬಿ ಪ್ರಸಿದ್ಧ ಆರ್ಕಿಟೆಕ್ಟರ್, ಮಿಕ್ಕವರದು ಅದರ ಸುತ್ತಲ ಸಂಬಂಧಿಸಿದ ಇತರ ವೃತ್ತಿಗಳು. ಆಫ್ರಿಕಾದ ಅಗಾಧ ವೈವಿಧ್ಯದ ಭೂಮಿ ಈಗಾಗಲೇ ವಸಾಹತುಶಾಹಿ ಆಕ್ರಮಣಗಳಲ್ಲಿ ಸಾಕಷ್ಟು ಮುಕ್ಕಾಗಿ ಹೋಗಿದೆ. ಅರವತ್ತರ ದಶಕದಲ್ಲಿ ಸ್ವಾತಂತ್ರ್ಯ ಪಡೆದ ನೈರೋಬಿಯಲ್ಲಿ ಖಾಸಗಿ ಜಮೀನುಗಳನ್ನು ರಾಷ್ಟ್ರೀಕರಣಗೊಳಿಸಿ ನಂತರ ಇತ್ತೀಚಿನ ವರ್ಷಗಳಲ್ಲಿ ಮತ್ತೆ ಅದನ್ನು ಖಾಸಗಿ ಕೈಗಳಿಗೆ ರವಾನಿಸುವ ಕೆಲಸವನ್ನು ತುಂಬ ಮುತುವರ್ಜಿಯಿಂದ ಮಾಡಲಾಗುತ್ತಿದೆ. ಹಾಗಾಗಿ ಹಳೆಯ ವಸಾಹತುಶಾಹಿ ಅಥವಾ ಜಾಗತೀಕರಣದ ತೆಕ್ಕೆಗೆ ಬಿದ್ದಿರುವ ಭಾರತದ ಆಧುನಿಕೋತ್ತರ ಬಂಡವಾಳಶಾಹಿಯ ಪ್ರತಿನಿಧಿಯಂತಿರುವ ಬಸು ಅಂತಹುದೇ ಪರಿಸ್ಥಿತಿಯ ನೈರೋಬಿಯ ನೆಲದಲ್ಲಿ ಕಾಲೇಜನ್ನು ಕಟ್ಟುವ ಉಮೇದಿಯಲ್ಲಿದ್ದಾನೆ. ಜೊತೆಗೆ ಒಂದು ಸಿಮೆಂಟ್ ಪ್ಲಾಂಟ್, ಒಂದು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ – ಹೀಗೆ ಹಲವಾರು ಯೋಜನೆಗಳೂ ಅವನ ತಲೆಯಲ್ಲಿವೆ.

ಮೀರ್ ಎಂದು ಸಂಕ್ಷಿಪ್ತವಾಗಿ ಅರುಷ ಪಟ್ಟಣದಲ್ಲಿ ಚಿರಪರಿಚಿತನಾಗಿರುವ ಮಿರ್ಜಿಯಾನ್ ಅಹಮದನದು ಆ ಊರಿನಲ್ಲಿ ಸಾಕಷ್ಟು ದೊಡ್ಡ ಹೆಸರು. ನಾಲ್ಕೈದು ತಲೆಮಾರುಗಳ ಹಿಂದೆ ಅವನ ಪೂರ್ವಜರು ಗುಜರಾತಿನ ಕಛ್ ಪ್ರಾಂತ್ಯದಿಂದ ನೈರೋಬಿಗೆ ವಲಸೆ ಬಂದವರು. ಈಗ ಆ ಕುಟುಂಬ ನೈರೋಬಿಯಲ್ಲಿ ಪ್ರಭಾವಶಾಲಿಯಾಗಿ ಬೆಳೆದಿದೆ. ರಾಜಕಾರಣದ ಪಡಸಾಲೆಯಲ್ಲಿ ಅವರ ನೆರಳು ದಟ್ಟವಾಗಿ ಹರಡಿಕೊಂಡಿದೆ. ಈಗ ಅವನೊಂದಿಗೆ ಭಾರತದ ಬಸು ಕೈ ಜೋಡಿಸಿ ಹೊಸ ಬಂಡವಾಳ ಹೂಡಿಕೆಯ ಲೆಕ್ಕಾಚಾರದಲ್ಲಿ ತೊಡಗಿದ್ದಾನೆ. ಅವರಿಗೆ ಕನ್‌ಸ್ಟ್ರಕ್ಷನ್ ಪ್ಲಾನಿಂಗ್ ಮಾಡಿಕೊಡಬೇಕಾದ ಉಬಿಗೆ ಹತ್ತಾರು ಬುಡಕಟ್ಟು ಸಮುದಾಯಗಳ, ಅಪಾರ ನಿಸರ್ಗ ಸಂಪತ್ತಿನ ಆಫ್ರಿಕಾ ಖಂಡದ ಈ ನಾಡಿನಲ್ಲಿ ಬಂಡವಾಳ ಹೂಡಿಕೆ ಎನ್ನುವುದೇ ಅದರ ಆತ್ಮದ ಮೇಲಿನ ಆಕ್ರಮಣದಂತೆ ಭಾಸವಾಗುತ್ತದೆ. ಆದರೆ ಮಿಕ್ಕ ಯಾರಿಗೂ ಹಾಗೆ ಅನ್ನಿಸುವುದಿಲ್ಲ. ಸ್ವತಃ ಆಫ್ರಿಕಾದ ಅರುಷ ಪಟ್ಟಣವೇ ಡಾಲರುಗಳ ಮೋಹದಲ್ಲಿ ಮುಳುಗಿಹೋಗಿದೆ. ಅಭಿವೃದ್ಧಿ ಎನ್ನುವುದು ಬಂಡವಾಳ, ಉದ್ದಿಮೆ, ಉತ್ಪಾದನೆ, ವಹಿವಾಟು, ಹಣದ ಹರಿವು, ವಿಲಾಸಿ ಬದುಕು ಹಾಗೂ ಕ್ಯಾಸಿನೋಗಳು ಎನ್ನುವ ಮನೋಭಾವ ಅಲ್ಲಿನ ಜನರಲ್ಲಿ ಹೊಕ್ಕಿದ್ದಾಗಿದೆ. ಅಮೇರಿಕಾದ ಮುದಿ ಶ್ರೀಮಂತರು ಲಕ್ಷಗಟ್ಟಲೆ ತೆತ್ತು ಸಿಂಹಗಳ ಬೇಟೆಗೆಂದು ಆಫ್ರಿಕಾದ ಕಾಡುಗಳಿಗೆ ಬಂದು ಹೂಂಕರಿಸುತ್ತಿದ್ದಾರೆ. ಅದರಾಚೆಗೂ ಮಸಾಯಿ, ಗ್ನೂ, ಗೋಚ, ಚಾಗಗಳಂತಹ ಬುಡಕಟ್ಟು ಜನಾಂಗಗಳು ಆಫ್ರಿಕಾದ

ಮೂಲ ಸೊಗಡನ್ನು ಉಳಿಸುವ ಕೆಲಸವನ್ನು ತಮ್ಮ ಪ್ರಾಚೀನ ಜೀವನ ಕ್ರಮಗಳಿಂದಲೇ ಮಾಡುತ್ತಿದ್ದಾರೆ. ಹಾಗಾಗಿಯೇ ಅಲ್ಲಿನ ಜೀವ ವೈವಿಧ್ಯ ಇನ್ನೂ ಉಸಿರಾಡುತ್ತಿದೆ. ನಿಸರ್ಗ ತನ್ನ ಮನೋಹರ ಚೆಲುವನ್ನು ಇನ್ನೂ ಪೂರ್ತಿ ಕಳೆದುಕೊಂಡಿಲ್ಲ. ಅದರ ನಡುವೆ ಸ್ವತಃ ಅಸ್ಮಿತೆಗಳನ್ನು ಕಳೆದುಕೊಳ್ಳುವ ಭೀತಿಯಲ್ಲಿರುವ ದೇಶವೊಂದರ ಜನ ಬಂಡವಾಳ ಹೂಡಲು ತನ್ನಂತಹುದೇ ಆಫ್ರಿಕಾದ ನೆಲಕ್ಕೆ ಬಂದಿಳಿಯುವ ದುರಂತ ವ್ಯಂಗ್ಯವನ್ನು ಕಥೆ ದಾಖಲಿಸುತ್ತದೆ.

ಹಾಗೆಯೇ ಆಫ್ರಿಕಾ ಅಥವಾ ನೈರೋಬಿಯ ಜನ ಆಧುನಿಕತೆ ಅಥವಾ ಜಾಗತೀಕರಣವು ತಂದೊಡ್ಡುವ ಸುಖದ ಅಥವಾ ಯಶಸ್ಸಿನ ಭ್ರಮೆಗಳಲ್ಲಿ ಸಿಲುಕಿದ್ದಾರೆ. ಅವರಿಗೆ ತಾವು ಜಾಗತಿಕವಾಗುವ ಅಥವಾ ಜಾಗತಿಕ ಚಹರೆಗಳನ್ನು ದಕ್ಕಿಸಿಕೊಳ್ಳುವ ತವಕ ಇದ್ದಂತಿದೆ. ಬುಡಕಟ್ಟು ಸಮುದಾಯವೊಂದರಿಂದ ಬಂದು ಅರುಷ ಪಟ್ಟಣದ ಆಧುನಿಕ ಬದುಕಿನ ಸೆಳೆತದಲ್ಲಿ ಮುಳುಗಿರುವ ಬೂಮನಿಗೆ 'ನೀನು ಈ ಭೂಮಿಯಲ್ಲಿ ತೀವ್ರವಾಗಿ ಮಿಸ್ ಮಾಡುವುದು ಅಂದರೆ ಏನು?' ಅಂತ ಕೇಳಿದರೆ ಅವನ ಉತ್ತರ 'ಫೇರ್ ಸ್ಕಿನ್' ಅಂದರೆ ಕಪ್ಪಲ್ಲದ ತೊಗಲು!. ಅವನ ಮಾತನ್ನು ಕೇಳಿ ತೃತೀಯ ಜಗತ್ತಿನ ಸಾಂಸ್ಕೃತಿಕ ವಿನಾಶದ ಬಗೆಗೆ ಅಪಾರ ಆತಂಕವಿದ್ದ ಉಬಿ ಕುಳಿತಲ್ಲೇ ಕುಸಿದುಬಿಡುತ್ತಾನೆ. ಭಾರತ, ಆಫ್ರಿಕಾದಂತಹ ದೇಶಗಳಲ್ಲಿ ಯೂರೋಪಿಯನ್ ಬಿಳಿಯರ ವಸಾಹತು ಆಳ್ವಿಕೆ ಉಳಿಸಿ ಹೋಗಿರುವ ಬಹು ದೊಡ್ಡ ಸಂಗತಿಯೆಂದರೆ, ಹೀಗೆ ತನ್ನದನ್ನು ಅಸಹ್ಯಿಸಿಕೊಂಡು ದಾಸ್ಯ ಹೇರಿದವರನ್ನೂ, ಅವರ ಬಣ್ಣ, ಭಾಷೆ, ಸಂಸ್ಕೃತಿಗಳನ್ನೂ ಆರಾಧಿಸುವ ಮನೋಭಾವ. ವಸಾಹತು ಆಳ್ವಿಕೆಯೇ ಇಂತಹ ತೀವ್ರ ದಾಸ್ಯ ಪ್ರಿಯ ಗುಣವನ್ನು ಬಿತ್ತಿರುವಾಗ ಇನ್ನು ಜಾಗತೀಕರಣವು ಸ್ಥಳೀಯ ಬದುಕುಗಳನ್ನು ತತ್ತರಗೊಳಿಸುವ ವೇಗ ಹೇಗಿರಬಹುದು ಎಂದು 'ಹಕೂನ ಮಟಾಟ' ಕಥೆ ನಮ್ಮನ್ನು ಚಿಂತನೆಗೆ ಹಚ್ಚುತ್ತದೆ.

'ಆರ್ಥಿಕ ಲಾಭವೇ ಎಲ್ಲ ಪ್ರಗತಿ, ಅಭಿವೃದ್ಧಿಯ ಕಲ್ಪನೆಗಳ ಮೂಲ ಮಂತ್ರವಾಗಿರುವ ನವ ಬಂಡವಾಳಶಾಹಿ, ನವ ವಸಾಹತುಶಾಹಿ ಕುತರ್ಕದೆದುರು ಉಚ್ಛ್ರಾಯ ಪಟ್ಟಾಭಿ ಅಥವಾ ಉಬಿಯಂತಹ ಪಾತ್ರದ ಆರ್ತ ಪ್ರಲಾಪವೊಂದನ್ನು ಮುಖಾಮುಖಿಯಾಗಿಸಿ ಲೇಖಕರು ತಮ್ಮ ದರ್ಶನವನ್ನು ಕಟ್ಟುತ್ತಾರೆ.'[5] ಎನ್ನುವ ಟಿ.ಪಿ.ಅಶೋಕರು ಉಬಿಯಂತಹ ಧ್ವನಿಗಳಾದರೂ ನವ ಬಂಡವಾಳಶಾಹಿಯ ಓಟವನ್ನು ತಡೆಯಲಿ ಎಂದು ಆಶಿಸುತ್ತಾರೆ.

ಮೊಗಳ್ಳಿ ಗಣೇಶರವರ 'ತೋಪು' ಕಥೆ ಆಧುನಿಕತೆ ಮತ್ತು ಅಭಿವೃದ್ಧಿ ಹೆಸರಿನಲ್ಲಿ ಸಾಮಾಜಿಕ, ಆರ್ಥಿಕ, ರಾಜಕೀಯ ಸಂಗತಿಗಳು ಪರಸ್ಪರ ಗಂಟು ಹಾಕಿಕೊಂಡು ಎಂತಹ ಸಂಕೀರ್ಣ ಬಿಕ್ಕಟ್ಟುಗಳಿಗೆ ಕಾರಣವಾಗುತ್ತವೆ ಎನ್ನುವುದನ್ನು ಚಿತ್ರಿಸುವ ನೆಲೆಯಲ್ಲಿ ತುಂಬ ಮುಖ್ಯವಾಗುತ್ತದೆ.

ನಿರೂಪಕನ ಊರಿನಲ್ಲಿ ಒಂದು ತೋಪಿತ್ತು. ನಿರೂಪಕನ ತಾತ ತನ್ನೂರಿನ ತನ್ನವರಲ್ಲಿ ಯಾರಾದರೂ ಸತ್ತಾಗ ಅವರನ್ನು ಅಂತ್ಯ ಸಂಸ್ಕಾರ ಮಾಡಿದ ನಂತರ ಅವರ ಹೆಸರಿನಲ್ಲಿ ಆ ಸ್ಮಶಾನದಲ್ಲಿ ಒಂದು ಗಿಡವನ್ನು ನೆಟ್ಟು ಬೆಳೆಸುವ ಒಂದು ವಿಶಿಷ್ಟ ಪದ್ಧತಿಯನ್ನು ಆಚರಿಸುತ್ತಿರುತ್ತಾನೆ. ಅಂತಹ ಆಚರಣೆಯ ಕಾರಣದಿಂದ ಅಲ್ಲೊಂದು ಒತ್ತೊತ್ತಾದ ಮರಗಳಿಂದ ಕೂಡಿದ ತೋಪು ಸೃಷ್ಟಿಯಾಗಿತ್ತು. ಅ ತೋಪಿನ

ಪ್ರತಿಯೊಂದು ಮರದಲ್ಲೂ ಸತ್ತವರ ಆತ್ಮಗಳು ನೆಲೆಸಿರುತ್ತವೆ ಎನ್ನುವ ಹಿರಿಯರ ನಂಬಿಕೆಯ ಕಾರಣದಿಂದ ಅದಕ್ಕೆ ಬಂದಿರುವ ಅನ್ವರ್ಥಕ ಹೆಸರು 'ಜೀವ್ ಕಾಡು' ಎಂದು. ಆ ತೋಪು ನಿರೂಪಕನ ಬಾಲ್ಯದ ಸಂಭ್ರಮಗಳ ನೆನಪುಗಳ ಆಗರ.

ಆ ತೋಪಿನ ಮರಗಳ ಹಣ್ಣು ಕಾಯಿಗಳ ರುಚಿಯಲ್ಲಿ ಮಿಂದವರು, ಆ ಮರಗಳ ಕೊಂಬೆಗಳಲ್ಲಿ ತೂಗುತ್ತ ಆಟವಾಡುತ್ತಿದ್ದವರು, ಬಾಲ್ಯ ಕಳೆದು ಯೌವನಕ್ಕೆ ಬರುತ್ತಿದ್ದಂತೆ ಓದು, ನಂತರದ ಜೀವನೋಪಾಯ ಮುಂತಾದ ಕಾರಣಗಳಿಂದ ಊರಿನಿಂದ ದೂರಕ್ಕೆ ಕೆಲವರು ಚದುರಿಹೋದರು. ನಿರೂಪಕನೂ ಏನೆಲ್ಲ ಪಡಿಪಾಟಲುಗಳನ್ನು ಹಾದು ನಗರದಲ್ಲಿ ಸಣ್ಣ ಉದ್ಯೋಗ ಪಡೆದು, ಸಂಸಾರವನ್ನೂ ಹೊಂದಿ ಬದುಕು ದೂಡುತ್ತಿರುತ್ತಾನೆ. ಆಗಾಗ ಊರಿಗೆ ಬಂದು ಆ ತೋಪು, ತೋಪಿನ ಬದಿಯ ತೊರೆ, ಅಲ್ಲಿ ಅರಳುತ್ತಿದ್ದ ತಾವರೆಗಳು ಇವುಗಳ ಜೊತೆ ನೆನಪಿನ ನಂಟನ್ನು ಹಾಗೂ ಬಾಲ್ಯದ ಸಖತನವನ್ನೂ ಜೀವಂತವಾಗಿರಿಸಿಕೊಳ್ಳುವ ಪ್ರಯತ್ನ ಮಾಡುತ್ತಾನೆ. ಆದರೆ ನಿರೂಪಕನ ದೊಡ್ಡ ಅವಿಭಕ್ತ ಕುಟುಂಬದಲ್ಲಿ ಯಾರೊಬ್ಬರಿಗೂ ಆ ತೋಪಿನ ಕುರಿತು ಯಾವ ಭಾವನಾತ್ಮಕ ಮೋಹವೂ ಇಲ್ಲ. ಅವರೆಲ್ಲ ಲೌಕಿಕದ ಲಾಭಗಳ ಕಡೆಗೆ ಕಣ್ಣು ನೆಟ್ಟವರು. ನಿರೂಪಕನ ತಾತ ತೀರಿಕೊಂಡಾಗ ಆತನ ಮಕ್ಕಳು ತಲಾ ಒಮದೊಂದು ಗಿಡ ನೆಟ್ಟು ತಾತನ ನೆನಪನ್ನು ಹಸಿರಾಗಿಸಬೇಕು, ಆತನ ಸದಾಲೋಚನೆಯ ಪರಂಪರೆಯನ್ನು ಮುಂದುವರಿಸಬೇಕು ಎಂದರೆ ಅವರೆಲ್ಲ ನಿರೂಪಕನನ್ನು ಅಪಹಾಸ್ಯ ಮಾಡುತ್ತಾರೆ. ಸತ್ತವರ ಹೆಸರಿನಲ್ಲಿ ಗಿಡ ನೆಡಿಸಿ ಊರಿನ ಪರಿಸರದಲ್ಲಿ ಜೀವವುಕ್ಕಿಸಿದ ತಂದೆಯ ಹೆಸರಿನಲ್ಲಿ ಒಂದು ಗಿಡ ನೆಡುವುದೂ ದೊಡ್ಡ ದೊಡ್ಡ ಉದ್ಯೋಗಗಳಲ್ಲಿ ಇರುವ ಮಕ್ಕಳಿಗೆ ಕೆಲಸಕ್ಕೆ ಬಾರದ ಆಲೋಚನೆಯಂತೆ ಕಾಣುತ್ತದೆ. ಅಂತಹ ಸಲಹೆ ನೀಡಿದವನು ಮೂರ್ಖನಂತೆ ಕಾಣುತ್ತಾನೆ.

ನಗರದ ಸೆರಗಿಗೆ ಅಂಟಿಕೊಂಡಂತೆ ಇದ್ದ ಆ ಊರು ನಂತರದ ವರ್ಷಗಳಲ್ಲಿ ನಗರ ಬೆಳೆದಂತೆಲ್ಲ ತಾನೂ ಬೆಳೆದು ಬಹುತೇಕ ನಗರಕ್ಕೆ ಸೇರಿಕೊಳ್ಳುತ್ತದೆ. ಊರಿನಲ್ಲಿ ಮೂಲ ಸೌಲಭ್ಯಗಳನ್ನು ಕಲ್ಪಿಸುವ ಹೊಸ ಯೋಜನೆಗಳು ಕಾಮಗಾರಿಗಳು ಆರಂಭವಾಗುತ್ತವೆ. ನವ ಶ್ರೀಮಂತರ ಸಂಖ್ಯೆ ಹೆಚ್ಚಾಗುತ್ತದೆ. ಸ್ಥಳೀಯ ರಾಜಕಾರಣ, ಗುಂಪುಗಾರಿಕೆಗಳು, ಜಾತಿ ಧ್ರುವೀಕರಣಗಳು ಬಲಗೊಳ್ಳುತ್ತವೆ. ಅದರೊಂದಿಗೆ ಊರಿನಲ್ಲಿ ಜಮೀನಿನ ಬೆಲೆ ಕೂಡ ಆಕಾಶಕ್ಕೇರುತ್ತದೆ. ಆದ್ದರಿಂದಲೇ ಸಮೃದ್ಧವಾದ ಮತ್ತು ಹೊಲೆಯರ ವಿಶಾಲವಾದ ಸ್ಮಶಾನ ಮತ್ತು ಅಲ್ಲಿನ ಸಮೃದ್ಧವಾದ 'ಜೀವ್ ಕಾಡು' ಕೂಡ ಹಲವರ ದುರಾಸೆಯ ಕಣ್ಣಿಗೆ ಬಿದ್ದು ಅಪಾಯಕ್ಕೆ ಸಿಲುಕುತ್ತದೆ.

ಆಧುನಿಕತೆಗೆ ತೆರೆದುಕೊಂಡ ಊರಿಗೆ ಸೌಲಭ್ಯಗಳನ್ನು ಕಲ್ಪಿಸುವ ನೆಪದಲ್ಲಿ ಲಾಭ ಗಳಿಸುತ್ತ ಬೆಳೆಯುತ್ತಲೇ ಹೋದ ಸುಬ್ಬೇಗೌಡ ಊರಿನಲ್ಲಿ ಸುಸಜ್ಜಿತ ಶಾಲೆ, ಸಮುದಾಯ ಭವನ ಮುಂತಾದವುಗಳ ನಿರ್ಮಾಣದ ನೆಪ ಒಡ್ಡಿ, ಅವುಗಳಿಗೆ ಜಾಗ ಬೇಕೆನ್ನುವ ಕಾರಣವನ್ನು ಮುಂದೊಡ್ಡಿ ಆ ಊರಿನ ಶ್ವಾಸಕೋಶದಂತಿದ್ದ ಹಾಗೂ ನಿರೂಪಕನ ಬಾಲ್ಯ ಕಾಲದ ಸ್ವರ್ಗವೇ ಆಗಿದ್ದ ಸ್ಮಶಾನದ ತೋಪು ಅಥವಾ ಜೀವ್ ಕಾಡನ್ನು ಕಡಿಸುತ್ತಾನೆ. ತನ್ನ ಕಣ್ಣೆದುರೇ ಜೀವ್ ಕಾಡು ನಾಶವಾಗುತ್ತ ಆ ಮೂಲಕ ಊರಿನ ಜೀವ ಮತ್ತು ಚೆಲುವುಗಳು ನಿರ್ನಾಮವಾಗುತ್ತಿದ್ದರೆ ಏನೂ ಮಾಡಲಾಗದ ಅಸಹಾಯಕತೆಯಲ್ಲಿ ನಿರೂಪಕ ತಳಮಳಿಸುತ್ತಾನೆ. ಆದರೂ ಭರವಸೆಯನ್ನು

ಪೂರ್ತಿಯಾಗಿ ಬಿಟ್ಟುಕೊಟ್ಟಿಲ್ಲ. 'ಇಂದಲ್ಲ ನಾಳೆ. ನಾಳೆಯಲ್ಲ ನಾಡಿದ್ದು, ನಾಡಿದ್ದಲ್ಲ ಆಚೆ ನಾಡಿದ್ದು ಅಥವಾ ಮುಂದೊಂದು ಕಾಲಕ್ಕೆ ಇನ್ನೊಂದು ಯುಗಕ್ಕೆ ಇಲ್ಲವೆ ಇನ್ನೆಂದೋ ಒಂದು ಆ ದಿನ ಆ ಒಂದು ದಿನ ಆ ಒಂದು ಕ್ಷಣಕ್ಕಾದರೂ ಇಂತಹ ಎಲ್ಲ ವಿಕೃತಿಗೂ ಒಂದು ಸಮಯ ಒಂದೇ ಬರುತ್ತದೆ... ಆವರೆಗೆ ಕಾಯಲು ನನ್ನಿಂದಾಗದಿದ್ದರೂ ಯಾರಾದರೂ ಕಾಯುತ್ತಾರೆ, ಬರಬೇಕಾದವರು ಬಂದೇ ಬರುತ್ತಾರೆ.' ಎನ್ನುವ ಅಚಲ ನಂಬಿಕೆಯನ್ನು ತೋರುತ್ತಾನೆ.

'ಈ ಕಥೆಯಲ್ಲಿ 'ತೋಪು' ಕೇವಲ ಪರಿಸರ ನಾಶದ ಸಂಕೇತವಾಗಿರದೆ ಒಂದು ಸಮಾಜ ಅದರೊಡನೆ ಹೊಂದಿದ ಆಳವಾದ ಭಾವನಾತ್ಮಕ ಸಂಬಂಧದ ಸಂಕೇತವೂ ಆಗಿದೆ. ಹಳ್ಳಿಯ ಪ್ರಗತಿಯ ಹೆಸರಿನಲ್ಲಿ ತೋಪನ್ನು ಹಾಳು ಮಾಡುವ ಸುಬ್ಬೇಗೌಡ ಸ್ವಾರ್ಥದ ಬೆನ್ನು ಹತ್ತಿದ ಧೂರ್ತ ರಾಜಕಾರಣಿಯೂ ಆಗಿರುವುದು ಪರಿಸರದ ನಾಶದಲ್ಲಿ ರಾಜಕೀಯದ ಪಾತ್ರವನ್ನು ಸೂಚಿಸುತ್ತದೆ'[7] ಎನ್ನುವ ಅಮೂರರು ರಾಜಕಾರಣದ ದುರುಳ ಉದ್ದೇಶಗಳು ಪರಿಸರ ಹೋರಾಟಗಳ ಮೂಲ ಆಶಯಗಳನ್ನು ದಿಕ್ಕು ತಪ್ಪಿಸಿದವು ಎಂದು ವ್ಯಾಖ್ಯಾನಿಸಲೆತ್ನಿಸುತ್ತಾರೆ.

ಔದ್ಯಮಿಕತೆಯೇ, ಆಧುನಿಕ ಸೌಲಭ್ಯಗಳೇ ಪ್ರಗತಿ ಎಂದು ನಂಬಿಸಲೆತ್ನಿಸುವ ಮತ್ತು ಅದಕ್ಕಾಗಿ ಪರಿಸರದ ಮೇಲೆ ಎಗ್ಗಿಲ್ಲದ ಆಕ್ರಮಣ ನಡೆಸುವವರ ವಿರುದ್ಧದ ಹೋರಾಟಗಳೂ ಈಗ ಸುಲಭವಲ್ಲ. ಯಾಕೆಂದರೆ ಪರಿಸರ ನಾಶ–ಉಳಿವು ಕೂಡ ಈಗ ಅಭಿವೃದ್ಧಿಯ ಸೋಗಿನಲ್ಲಿ ಭ್ರಷ್ಟ ರಾಜಕಾರಣಿಗಳು ಮತ್ತು ಟಿಂಬರ್ ಮಾಫಿಯಾಗಳ ಕೈಯಲ್ಲಿ ಸಿಕ್ಕಿಬಿದ್ದಿರುವುದರಿಂದ ಪರಿಸರದ ಬಗ್ಗೆ ಕಾಳಜಿಯುಳ್ಳವರು–ಸಾಮಾಜಿಕ ಬದಲಾವಣೆಯ ಆಶಯಗಳುಳ್ಳ ಹೋರಾಟಗಾರರು ತೀವ್ರ ಎಚ್ಚರದಿಂದ ತಮ್ಮ ಹೋರಾಟಗಳನ್ನು ರೂಪಿಸಿಕೊಳ್ಳಬೇಕಾದ ಅಗತ್ಯವನ್ನು 'ತೋಪು' ಕಥೆ ಸೂಚಿಸುತ್ತದೆ.

ನಗರೀಕರಣ ಮತ್ತು ಆಧುನಿಕತೆಯ ಹೆಸರಿನಲ್ಲಿ ನಾಶವಾಗುವ ಪರಿಸರದ ಬಗ್ಗೆ ತೀವ್ರ ಕಾಳಜಿ ತೋರುವ ಈ ಕಥೆ ಇನ್ನೊಂದೆಡೆ, ಸಾಮಾಜಿಕ ತಾರತಮ್ಯಗಳು ಮತ್ತು ಜೀವಿಸುವ ಹಕ್ಕುಗಳ ಕುರಿತ ಹೋರಾಟಗಳು ಗಟ್ಟಿಯಾದ, ಸ್ಪಷ್ಟವಾದ ಸೈದ್ಧಾಂತಿಕ ನೆಲೆಯನ್ನು ಹೊಂದಿಲ್ಲದಿದ್ದರೆ ಅದು ಅಂತಿಮವಾಗಿ ಕೇವಲ ಸಾಮಾಜಿಕ ನ್ಯಾಯದ ಅವಕಾಶಗಳನ್ನಷ್ಟೇ ಮಸುಕು ಮಾಡದೆ, ಒಟ್ಟೂ ಜೀವ ವ್ಯವಸ್ಥೆಯ ನೆಮ್ಮದಿಯ ಬದುಕಿನ ಸಾಧ್ಯತೆಗಳನ್ನೂ ಹಾಳುಗೆಡವುತ್ತದೆ ಎನ್ನುವ ಬಹುಮುಖ್ಯ ಚಿಂತನೆಯನ್ನು ಪ್ರತಿಪಾದಿಸುತ್ತದೆ.

ಆದರೆ ಜಾಗತೀಕರಣ ಎನ್ನುವುದು ಕೇವಲ ವಿನಾಶಕಾರಿ ಎನ್ನುವಂತಹ ಏಕಮುಖ ಆಲೋಚನೆಗಳು ಕೂಡ ಉಪಯುಕ್ತವಲ್ಲ. ವಸಾಹತುಶಾಹಿ ಆಳ್ವಿಕೆಯ ಕೆಲವಾದರೂ ಧನಾತ್ಮಕ ಅಂಶಗಳನ್ನು ಹೇಗೆ ನಿರಾಕರಿಸಲಾಗುವುದಿಲ್ಲವೋ, ಹಾಗೆಯೇ ಜಾಗತೀಕರಣದ ಆರ್ಥಿಕ ಚಿಂತನೆಗಳು ಕೂಡ ಸಮಾಜದ ಕೆಲವು ವರ್ಗ ಮತ್ತು ವಲಯಗಳ ಶಕ್ತಿ ಸಂಚಯನಕ್ಕೆ ಕಾರಣವಾಗಿದೆ ಎನ್ನುವುದನ್ನು ಕೂಡ ನಿರಾಕರಿಸಲಾಗುವುದಿಲ್ಲ. ವಸಾಹತುಶಾಹಿಯ ಮೂಲಕ ಬಂದ ಆಧುನಿಕತೆಯು ಸಮಾಜದ ಅಲಕ್ಷಿತ ಸಮುದಾಯಗಳ ಹೊಸ ಬಗೆಯ ಎಚ್ಚರ ಮತ್ತು ಅವುಗಳ ಪುನಶ್ಚೇತನಕ್ಕೆ ಒಂದಷ್ಟು ಕೊಡುಗೆಯನ್ನು ಕೊಟ್ಟಿದೆ. ಆದರೂ ಜಾಗತೀಕರಣದ ಮೂಲೋದ್ಧೇಶ ಆರ್ಥಿಕ ವ್ಯವಹಾರಗಳಷ್ಟೇ ಆಗಿರುವುದರಿಂದ ಅಲ್ಲಿ ಮನುಷ್ಯ

ಬದುಕಿನ ಹಿತರಕ್ಷಣೆಯ ಕಾಳಜಿಗಳಿಗೆ ಅವಕಾಶವಿರುವುದಿಲ್ಲ. ಆದುದರಿಂದಲೇ ಆಧುನಿಕ ಅಭಿವೃದ್ಧಿಯ ಪರಿಕಲ್ಪನೆ ಎಂದರೆ ಸ್ಥಳೀಯ ಬದುಕುಗಳನ್ನು ಅತಂತ್ರಗೊಳಿಸುವುದು ಎನ್ನುವಂತಾಗಿದೆ. ಇಂತಹ ಅಪಾಯಗಳಿಂದ ಪಾರಾಗಲು ಅಗತ್ಯವಿರುವ ತಾತ್ವಿಕತೆಯನ್ನು ರೂಪಿಸುವ ಕೆಲಸವನ್ನು ಜಾಗತೀಕರಣ ಕಾಲಘಟ್ಟದ ಕನ್ನಡ ಸಣ್ಣ ಕಥೆಗಳು ಮಾಡುತ್ತಿವೆ ಎನ್ನುವುದು ಅತ್ಯಂತ ಮಹತ್ವದ್ದು.

**ಅಡಿ ಟಿಪ್ಪಣಿಗಳು**

1. ನರೇಂದ್ರ ಪೈ, ಶ್ರೀಧರ ಬಳಗಾರರ ಕತೆಗಳಲ್ಲಿನ ವಸ್ತು ವಿಷಯಗಳು, ಪುಟ: 229–230, ಕಥಾ ಸಮಯ, ಸಂ: ಡಾ. ಹೆಚ್.ಎಸ್. ವೆಂಕಟೇಶಮೂರ್ತಿ ಮತ್ತು ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರ: ಡಾ. ಬಿ.ವಿ.ರಾಮಪ್ರಸಾದ್, ಬೆಂಗಳೂರು, 2011
2. ಟಿ.ಪಿ.ಅಶೋಕ, ವಸುಧೇಂದ್ರರ **'ಹಂಪಿ ಎಕ್ಸ್‌ಪ್ರೆಸ್'**, ಪುಟ: 38–39, ಪುಸ್ತಕ ಸಮಯ, ಅಕ್ಷರ ಪ್ರಕಾಶನ, ಹೆಗ್ಗೋಡು, 2011
3. ಟಿ.ಪಿ.ಅಶೋಕ, ವಸುಧೇಂದ್ರರ 'ಹಂಪಿ ಎಕ್ಸ್‌ಪ್ರೆಸ್', ಪುಟ: 37, ಪುಸ್ತಕ ಸಮಯ, ಅಕ್ಷರ ಪ್ರಕಾಶನ, ಹೆಗ್ಗೋಡು, 2011
4. ಟಿ.ಪಿ.ಅಶೋಕ, ನಾಗರಾಜ ವಸ್ತಾರೆ ಅವರ 'ಹಕೂನ ಮಟಾಟ', ಪುಟ: 136, ಪುಸ್ತಕ ಸಮಯ, ಅಕ್ಷರ ಪ್ರಕಾಶನ, ಹೆಗ್ಗೋಡು, 2011
5. ಜಿ.ಎಸ್.ಅಮೂರ, ಪ್ರಸ್ತಾವನೆ, ಸ್ವಾತಂತ್ರೋತ್ತರ ಕನ್ನಡ ಕಥಾಲೋಕ, ಅಂಕಿತ ಪುಸ್ತಕ, ಬೆಂಗಳೂರು, 2004

❖❖❖

ಅವನಿತ್ತ ಅವಲನ್ನು ಚಪ್ಪರಿಸಿದವನಿವನು
ನಮಗಿದಸದಳವು
ಸಪ್ಪೆಯನು ಅವನಂತೆ
ಚಪ್ಪರಿಸುವುದು.

**RNI Reg No. : KARKAN /2012/49251**

**CHINTHANA BAYALU** **A Peer Reviewed Journal** **ISSN 2278-2192**
**Kannada Quarterly, Volume 11, Issue 4, April - June 2023**
Edited, Published, Printed & Owned by
**Reshma G. Bhat**
Door No. 15-109, Modankapu Post
Bantwal Taluk, Dakshina Kannada - 574 219
Printed at
**Aakrithi Prints**
Light House Hill Road, Mangaluru - 575 001

**Pages : 64**

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

**ಕರ್ಣಾಟಕ ಬ್ಯಾಂಕ್**

ಬಂಟ್ವಾಳ ಮೂಡ ಶಾಖೆಯಲ್ಲಿ

**ಚಿಂತನ ಬಯಲು** ಹೆಸರಿನಲ್ಲಿರುವ

**ಕರೆಂಟ್ ಅಕೌಂಟ್ ಸಂಖ್ಯೆ : 0712000100041401**

**IFSC : KARB0000071**

**ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444 ಗೆ ಕರೆ ಮಾಡಿರಿ.**

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002 ಇಮೇಲ್: info@ktkbank.com ವೆಬ್‌ಸೈಟ್: www.karnatakabank.com